ಪುಸ್ತಕ ಪ್ರಪಂಚ

ಆಗಸ್ಟ್ ೧೯೮



ಲೈಸ್ ಮೈಟ್ನರ್

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೪ ಸಂಚಿಕೆ ೧

28.8.89

ಪರಿವಿಡಿ

PUSTAKA RAPANCHA : Monthly

Published and printed by Karnataka State Adult Educatio
Council, Mysore-4. Price : Rupees five

ಬಿಡಿಪ್ರತಿ : ರೂ. 5

ವಾರ್ಷಿಕ ಚಂದಾ : ರೂ. 30

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 300

ಸಂಸ್ಥೆಗೆ : ರೂ. 500

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-570 004

ಶ್ರೀ ಪುತಿನ ಅವರ

ಶ್ರೀ ಹರಿಚರಿತೆ (ಒಂದು ಕಾವ್ಯಾವಲೋಕನ)

ಎಸ್. ರಂಗಾಚಾರ್ಯ

ಪ್ರಸಿದ್ಧ ಕವಿ ಪು.ತಿ.ನ. ಅವರು "ಶ್ರೀ ಹರಿಚರಿತೆ" ಎಂಬ ಹೊಸ ಕೃತಿಯನ್ನು ಹೊರತಂದಿದ್ದಾರೆ. ಕಾವ್ಯಕರ್ಮದಲ್ಲಿ ಅವಿರತರಾಗಿ ಶ್ರಮಿಸುತ್ತಿರುವ ಈ ಹಿರಿಯ ಕವಿಗಳ ಘನತೆ ನಿರಂತರವಾಗಿ ಕೃತಿಯಿಂದ ಕೃತಿಗೆ ಹೆಚ್ಚುತ್ತಿರುವುದಕ್ಕೆ ಈ ಕೃತಿಯೂ ಸಾಕ್ಷಿಯಾಗಿದೆ. ಕನ್ನಡ ಸಾಹಿತ್ಯದ ಹಿರಿಮೆ ಮತ್ತು ಐಸಿರಿಯೂ ಈ ಕೃತಿಯಿಂದ ಇನ್ನೂ ವರ್ಧಿಸುತ್ತದೆಯೆಂದು ನಾವೆಲ್ಲಾ ಹಿಗ್ಗಿಕೊಳ್ಳಬೇಕು. ಈಚೆಗೆ ಕಾವ್ಯವೆಂಬ ಪದವನ್ನು ತುಂಬಾ ಸಡಿಲವಾಗಿ ಬಳಸುವ ರೂಢಿ ಬಂದುಬಿಟ್ಟಿದೆ. ಆದರೆ ಈ ಕೃತಿಯ ವಿಷಯದಲ್ಲಿ ಆ ಪದವನ್ನು ಅದರ ಸರಿಯಾದ ಸಾಂಪ್ರದಾಯಿಕವಾದ ಅರ್ಥದಲ್ಲಿ ಶಂಕೆಯಿಲ್ಲದೆ ಉಪಯೋಗಿಸಬಹುದು. ಕಾವ್ಯವಸ್ತು ಕವಿಗಳಿಗೆ ಅತ್ಯಂತ ಪ್ರಿಯವಾದ ಕೃಷ್ಣ ಗೋಕುಲವಾಸದ ಚರಿತ್ರೆ. ಧೀರೋದಾತ್ತ ಸಂಚಾರೀ ಭಾವಪರಿಪ್ಲುತವಾದ ಶಾಂತರಸ ಪ್ರಧಾನವಾದ ವಿಸ್ತಾರವಾದ ಹಿನ್ನೆಲೆ. ಇದರ ಪಟಲದಲ್ಲಿ ವಿವಿಧವಾಗಿ ಬಹಳ ಸಾಮರ್ಥ್ಯದಿಂದ ಬಿಡಿಸಲ್ಪಟ್ಟಿರುವ, ಶೃಂಗಾರ, ವೀರ ಮುಂತಾದ ರಸಗಳಿಂದ ಕೂಡಿದ ಕಥಾನಕಗಳು. ಉದ್ದಕ್ಕೂ ಪ್ರಸನ್ನಭಾವದಿಂದ ತುಂಬಿದ ಕವಿ ಹೃದಯದ ವಿವಿಧ ಭಾವನಾ ಮುಖಗಳು. ಇವುಗಳನ್ನು ಓದಿ ಕಂಡಾಗ ಮತ್ತೆ ಮತ್ತೆ ಓದಬೇಕೆಂಬ ಆಸೆ ಹುಟ್ಟುತ್ತದೆ. ಈ ಕವಿಗಳು ನವಭಾರತೀಯ ಕಾವ್ಯ ಪದ್ಧತಿಯನ್ನು, ರಸ ಮತ್ತು ಅದನ್ನು ಉತ್ಪಾದಿಸುವ ಕಲಾ ಕೌಶಲ್ಯವನ್ನು ಚೆನ್ನಾಗಿ ಅರಿತುಕೊಂಡವರು. ಇದು ಅವರ ಬಹುಸಂಖ್ಯಾತ ಮತ್ತು ಪ್ರಸಿದ್ಧ ಕೃತಿಗಳಿಂದ ಕಾವ್ಯ ಪ್ರೇಮಿಗಳಿಗೆ ತಿಳಿದೇ ಇದೆ. ಅದಲ್ಲದೆ, ಪು.ತಿ.ನ. ಅವರು ಆಧುನಿಕವಾದ ವೈಜ್ಞಾನಿಕ ವಿಚಾರ ಸ್ರೋತದಲ್ಲಿ ಈಸಾಡುವ ಪರಿಶ್ರಮವುಳ್ಳವರು.

ಜೊತೆಗೆ ದರ್ಶನ ಶಾಸ್ತ್ರ ಪರಿಣತರು ಮತ್ತು ಸಂತ ಮನೋಭಾವವುಳ್ಳ ಭಗವದ್ಭಕ್ತರು. ಇಂತಹ ಅಪೂರ್ವ ಗುಣಗಳಿಂದ ಕೂಡಿದವರ ಹಸ್ತದಿಂದ ನಮಗೆ ಬಂದಿರುವ ಈ ಹೊಸ ಕೃತಿಯಲ್ಲಿ ಈ ಎಲ್ಲಾ ವಿಧವಾದ ಭಾವಗಳ ಸಂಗಮವನ್ನೂ ಕಾಣಬಹುದು.

ಈ ಕಾವ್ಯವು, ಮುಖ್ಯವಾಗಿ, ಓದಗರ ಮನಸ್ಸನ್ನು ನಿರ್ಮಲಗೊಳಿಸಿ ಆನಂದ ವನ್ನುಂಟು ಮಾಡುತ್ತದೆ. ಉಲ್ಲಾಸ ತರಿಸುತ್ತದೆ. ಅದಕ್ಕೆಯೋ ಏನೋ ಇದರ ವಿಭಾಗ ಗಳನ್ನು ಉಲ್ಲಾಸಗಳೆಂದು ಕರೆದಿದ್ದಾರೆ. ಇದರಲ್ಲಿ ಎಲ್ಲರ ಮನಸ್ಸನ್ನು ಕೆರಳಿಸಿ ರೋಷ, ಶೋಕ, ಆತಂಕ ಮುಂತಾದ ಅಧೋಗಾಮಿ ಭಾವನೆಗಳು ಹುಟ್ಟುವುದಿಲ್ಲ. ಖೇದ, ವಿಷಾದ, ಆತಂಕ, ಮುಂತಾದವುಗಳ ಸೋಲ್ಲಿಲ್ಲ. ಓದಗರ ಮನವನ್ನು ತೊಳೆದು ಸ್ವಚ್ಛ ಮಾಡುತ್ತದೆ. ವ್ಯಗ್ರ ಮನಸ್ಕರನ್ನಾಗಿ ಮಾಡುವುದಿಲ್ಲ. ಯಾವ ಕಾರಣಗಳಿಂದಲಾಗಲೀ ಅಂತಹ ಮನಸ್ಥಿತಿಯಲ್ಲಿದ್ದರೂ ಈ ಕಾವ್ಯ ಕೈಹಿಡಿದೆಳೆದು ಮೇಲಕ್ಕೆತ್ತಬಲ್ಲುದು. ಪು.ತಿ.ನ. ಅವರ ವೈಯಕ್ತಿಕ ಭಾವನೆಗಳೇ ಹಾಗೆ. ಅವರು ಚೆಲುವು, ಗೆಲುವಿನ ಆರಾಧಕರು, ಅವರ "ದೋಣಿಯ ಬಿನದ" ಮತ್ತು "ಕವಿ" ಎಂಬ ಕೃತಿಗಳಲ್ಲಿ ಈ ಗುಣ ಬಹಳ ಹಿಂದೆಯೇ ಪ್ರಕಟವಾಗಿದೆ. ಈ ಹೊಸ ಕೃತಿಯೂ ಅದೇ ಮನೋಭಾವದ ಪ್ರತೀಕ.

ಪ್ರತಿ ಉಲ್ಲಾಸದ ಮೊದಲಿನಲ್ಲಿ ಕವಿಯ ಸ್ವಾಂತ ಭಾವನೆಗಳ ವಿಚಾರಪ್ರಚೋದಕ ಮುನ್ನುಡಿ ಈ ಕಾವ್ಯದ ಶೈಲಿಯಲ್ಲಿ ಕಂಡು ಬರುವ ಒಂದು ಹೊಸ ವಿಶೇಷ. ಈ ವಿಚಾರ ಸರಣಿಗಳಲ್ಲಿ ಪ್ರಶ್ನರೂಪವಾಗಿ, ಭಗವಂತನಿಗೂ ಕವಿಗೂ ನಡೆಯುವ ಸಂಭಾಷಣೆಯ ರೂಪದಲ್ಲಿ, ಉತ್ಪ್ರೇಕ್ಷಾ ಆಶ್ಚರ್ಯ, ಮುಂತಾದವುಗಳ ಮೂಲಕ ಕವಿ, ತನ್ನ ಅನುಭವಗಳನ್ನೂ, ಆಧುನಿಕ ಜಗತ್ಪ್ರಜ್ಞೆಯ ಕಲ್ಪನೆಗಳನ್ನೂ, ಭಗವದ್ಭಕ್ತಿ ಯನ್ನೂ ವ್ಯಕ್ತ ಪಡಿಸುತ್ತಾರೆ. ಇಲ್ಲಿ ನನಗೆ ತೋಚಿದ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ.

ಮೂರನೆಯ ಉಲ್ಲಾಸದ ಮುಂದಣ ಚರಣಸಮುಚ್ಚಯವನ್ನು ನೋಡಿ.

"ಜೀವನೇ, ನೀ ಬಲುತಪಿಸಿ ಪಡೆದ ದೈವೀಭಾವವೆ,
ವ್ಯರ್ಥವೀ ಕಬ್ಬಮನಪೇಕ್ಷಿತಂ, ಸಹೃದಯ ದೂರವೆಂ
ಬೂಹೆಯೊಳು ಕೊರಗುವೆನ್ನೀ ಚಿತ್ತವನು ಚೇತನಗೊಳಿಸಿ
ಪುಗುಪುಗಿಂ ಅದು ತೋರ್ವ ಮಹೋನ್ನತ ಸಮಾಜಂ ಪೆತ್ತಿಹ
ನಲ್ನುಡಿಯ ವಿವರಂಗಳನು, ಕೃತ ಮನಃ ಖಾತಂಗಳನು..."

ಇಲ್ಲಿ ಕವಿಯು "ಈ ಕೃಷ್ಣನ ಕತೆ ಬಹಳ ಹಳೆಯದು. ಇದನ್ನು ಕೇಳುವ ಸಹೃದಯರು ಈಗ ಯಾರಿದ್ದಾರೆ? ಇದನ್ನೇಕೆ ಹೇಳಬೇಕು" ಎಂಬ ಶಂಕೆಗೊಂಡ ಮನಸ್ಸಿನೊಡನೆ ಹೆಣಗುವುದು ಕಾಣುತ್ತದೆ. ಈ ಕತೆ ಹಳೆಯದಾದರೂ ಅರಿಷಡ್ವರ್ಗಗಳು ಪ್ರಬಲವಾಗಿರುವ ಈಗಿನ ಜಗತ್ತಿನ ಸ್ಥಿತಿಯಲ್ಲಿ ಈ ಕಂಸಾಂತಕ (ಅಂದರೆ ಅರಿಷಡ್ವರ್ಗ ಗಳ ಪ್ರತೀಕ ಕಂಸ ಎಂದು ಕವಿಯ ಆಶಯ) ಕಥೆಯನ್ನು ನೆನೆಯುವುದು ಉಪಯುಕ್ತ

ವಾದುದೇ ಎಂಬ ನಿರ್ಧಾರಕ್ಕೆ ಬರುತ್ತಾನೆ. ಇಲ್ಲಿರುವ ಕೆಲವು ಸ್ವಾರಸ್ಯಗಳನ್ನು ನೋಡಿ. ನಮ್ಮ ಈಗಿನ ಭೂಮಿ—

"ಅಣುಸ್ಫೋಟಕಂ ಗ್ರಹ ಚಂದ್ರಗಾಮಿಯಾಸ್ಫುಟಿತ ಗೋಲಂ.
ಸರ್ವತ್ರ ಪ್ರತ್ಯಕ್ಷವಪ್ಪ ಖೇಚರವಾಣಿ, ಸ್ವಯಂಚಾಲಿತ
ಜಲಸ್ಥಲಾನಿಲ ಸುಯಾನಂ..."

ನಮ್ಮ ಈಗಿನ ವೈಜ್ಞಾನಿಕ ಪ್ರಗತಿಗೊಂಡಿರುವ ಜೀವನ ಹೇಗಿದೆಯೆಂದರೆ,

"ಶಕ್ತನೊಲವಗೆ ಖಗಸರೀಸೃಪವಾರಿಚರ ಜೀವನಂ
ಸಂದಿತಲ್ಲದೆ ವರವೆ? ದುಡಿವಗೆ ಬಿಸುವೆ? ಬಿಡುವುಳ್ಳವರು
ಭವದಳಲ ಕಳೆದಾಮೋದವನು ವರ್ಧಿಸಲು ಹವಣಿಪರೆ?
ನವನವ ವಸ್ತುವಿಂ ನರಪಡೆವ ನವೋನವ ಬಂಧಗಳ."

ಆಧುನಿಕ ಕವಿಯ ಮನಸ್ಸು ನಮ್ಮ ಇಂದಿನ ಕಷ್ಟಗಳಿಗೆ ಹಿಂದಿನ ಆರ್ಷೇಯ ಪುಣ್ಯ ಪುರುಷನ ಚರಿತೆಯನ್ನು ನೆನೆಯುವುದರಲ್ಲಿ ಪರಿಹಾರವನ್ನು ಅರಸುತ್ತದೆ.

ಒಂಭತ್ತನೆಯ ಉಲ್ಲಾಸದ ಮುಂದಣ ಚರಣಗಳಲ್ಲಿ ಕವಿಯ ಮನಸ್ಸು ಹೀಗೆ ಹರಿಯುತ್ತದೆ.

"ಮನುಜ ಮೃಗಪಕ್ಷಿ, ಜಂಗಮ, ಜೀವನಿಕಾಯದಿಂದೆನಿತು
ಬೇರೆಯದೆನಿಪುದೇ ಸಸ್ಯ ಜೀವಪ್ರಕರ!"

ಎಂದು ಆಶ್ಚರ್ಯದ ಆಲೋಚನಾ ಸರಣಿ ಆರಂಭಿಸುತ್ತದೆ. ಸಸ್ಯ ನಿಶ್ಚಲ. ಮೇಲಕ್ಕೂ ಬೆಳೆಯುತ್ತವೆ. ಕೆಳಕ್ಕೂ ಬೆಳೆಯುತ್ತವೆ.

"ಕೆಳಹೀರಿ ಮಣ್ಣಿನ ರಸವ ಮೇಲೇರಿಸುತ ಜೀವಿಪಜೀವಿ.
ಕಣ್ಣಿಲ್ಲ, ಕಿವಿಯಿಲ್ಲ, ನಿಃಕರಣ ತಾನೆಂಬ ನಿರ್ವೇದ ವಿನಿತಿರದೆ
ಮೆರೆಗುಂ ಸಕಲ ಜೀವಾಧಾರ ಜೀವಾದಿಮಂ"

ಸಸ್ಯಗಳ ತ್ಯಾಗ ಭಾವವನ್ನು ವರ್ಣಿಸುತ್ತಾ "ಮಹಾಸತ್ವರ ಭೋಗವುಂ ಚಾಗವುಂ ಜಗಸೊಗಕಲ್ತೆ" ಎನ್ನುತ್ತಾರೆ ಕವಿ. ಹುಲ್ಲಿನ ವಿಷಯದಲ್ಲಿ ನೋಡಿ ಕವಿ ಏನು ಹೇಳುತ್ತಾರೆ—

"ಬಲು ಹಗುರದೀ ಹುಲ್ಲು, ಮಣ್ಣಿನ ನಾಲ್ಕು ಬೆರಳಾಳದೊಳು
ತನ್ನಾಗು ಹೋಗುಗಳ ನಡೆಸುವಲ್ಪಾಯುವಿದು, ಮಾನುಷ
ಜೀವಿತದ ಪೆರ್ಮೆಯನೆಲ್ಲವಂಗೈಯೊಳಗೆ ಹಿಡಿದಿಹುದು!"

ಎಷ್ಟು ದಿಟವಾದ ನುಡಿ! ಪ್ರಪಂಚದ ಬೇರೆ ಯಾವ ಕಾವ್ಯದಲ್ಲಿ ತಾನೇ ಇಂತಹ ಭಾವ ವಿನ್ಯಾಸವನ್ನು ಕಾಣುತ್ತೇವೆ? ಅಬ್ಬಾ, ನಮ್ಮ ಕನ್ನಡ ಭಾಷೆ ಎಂತಹ ಪುಣ್ಯಶಾಲಿ ಭಾಷೆ!

"ಜನ್ನಿಗ ವೆಂಡಿರೌತಣಂ" ಎಂಬ ಉಲ್ಲಾಸದ ಆರಂಭದಲ್ಲಿ ಕವಿಯ ಶ್ರೀ ವೈಷ್ಣವ ಮತದ ಭಗವಚ್ಚರಣಾಶ್ರಿತ ಭಕ್ತಿ ಭಾವ ಮನದೋರುತ್ತದೆ. "ವೇಣುತ್ಯಾಗಂ" ಎಂಬ ಉಲ್ಲಾಸದ ಆರಂಭದಲ್ಲಿ ಕಥೆಯು ಕವಿಗೆ ಇಷ್ಟವಾಗುವಷ್ಟು ಬೇಗ ಸರಿಯದೇ ಇರುವಾಗ ಬಂದ ಭಾವನೆಗಳು ಬಹಳ ಹೃದ್ಯವಾಗಿವೆ.

ವರ್ಣನೆಯ ಕೌಶಲ್ಯದಲ್ಲಿ, ಸಮಯೋಚಿತ ಪದ ಪ್ರಯೋಗದಲ್ಲಿ, ಹಿರಿಯ ಕವಿಗಳಾದ ಪು. ತಿ. ನ. ಅವರನ್ನು ಶ್ಲಾಘಿಸುವುದು ಈ ವಿಮರ್ಶಕನಿಗೆ ಉಚಿತವೆಂದು ತೋರುವುದಿಲ್ಲ. ಇವರು ಪದಗಳನ್ನು ಒಂದು ಬಾರಿ ಇಳಿಸಿದ ಮೇಲೆ, ಸತತವೂ ಅದನ್ನು ಕೆತ್ತಿ, ಕೊರೆದು ಉತ್ತಮಪಡಿಸುತ್ತಲೇ ಇರುತ್ತಾರಂತೆ. ಇಲ್ಲಿಯ ವರ್ಣನೆಗಳನ್ನು ಮತ್ತೊಮ್ಮೆ ಆಸ್ವಾದಿಸುವ ನೆವದಿಂದ ಈ ಉದಾಹರಣೆಗಳನ್ನು ತರುತ್ತಿದ್ದೇನೆ.

ಯಶೋದೆಯ ಮನೆಯಲ್ಲಿ ಹೊಸಗಂಡು ಕೂಸು ಹುಟ್ಟಿರುವ ಸಡಗರದ ಚಿತ್ರವನ್ನು ನೋಡಿ, "ಗೋಕುಲಗಮನಂ" ಎಂಬ ಉಲ್ಲಾಸದಲ್ಲಿ.

> "ಬಗೆಯೊಪ್ಪ ಬಣ್ಣಗಳುಟ್ಟು, ಸಡಗರಿಪ ಮುಂದಾಳುಗಳ
> ಪೆಂಡಿರೊಳು, ಚುಂಗಿನಪಾಗು, ಮುಂಡಿಯ ಕಚ್ಚೆದಟ್ಟಿಗಳ
> ತಾವುಟ್ಟು ಕಿವಿಯ ಮುರು ರವಿಯ ಹೊಂಗಿರಣವನು ಮಿಸೆಯ
> ಹೊದರಿನೊಳು ಹುದುಗಿಸುವಂತೆ ತಲೆಯೊಲೆದಾಡೆ..."

ಹೊಸ ಕೂಸು ಹುಟ್ಟಿರುವ ಗೊಲ್ಲರ ಮನೆಯ ಎಂತಹ ದೃಶ್ಯ!

ಅದೇ ಉಲ್ಲಾಸದಲ್ಲಿ ಮುಂದೆ ಕೃಷ್ಣನು, ತನ್ನನ್ನು ಕಟ್ಟಿಹಾಕಿದ ಗುಂಡುಕಲ್ಲನ್ನು ಎಳೆಯುತ್ತಾ ಹೋಗಿ ಒಂದು ಕವಲು ಮರದ ಕವಲಿನಲ್ಲಿ ಸಿಕ್ಕಿಸಿ ಎಳೆದು, ಆ ಮರವನ್ನು ಬೀಳಿಸಿದಾಗ, ಆದ ಅನಾಹುತ ಸಂಭ್ರಮ, ಅದಾದಮೇಲೆ ಯಶೋದೆ ಮಗುವನ್ನು ಎತ್ತಿಕೊಂಡು ಸಾಂತ್ವಯಿಸುವ ಸನ್ನಿವೇಶವನ್ನು ನೋಡಿ.

> "ಇಂತೈತಂದು ನೆರೆಯುವಳ ಕೈಯಿಂದ ಕೂಸನು ಕೊಂಡು,
> ಗಾಸಿಯನು ಪರಿಕಿಸುತ, ಮೈಯೊರಸಿ, ಕಾಲ್ಗಳ ತೊಡೆದು,
> ಕಿವಿಗಳ ಸಂದ ಮೆಲ್ಲನೆಯೂದಿ, ಎದೆಗವಿಚಿ, ಬೆನ್ನನು ಸವರಿ,
> ಬರಿನೆಲದೊಳೇ ಕುಳಿತು ಮೊಲೆಯೂಡಿ, ಕುರುಳನು ತಿದ್ದುತಲಿ,
> ಸವಿಗರೆದು ಸಾಂತ್ವನಿಸುತಿರೆ, ದಾಮೋದರಂ ತನ್ನೊಳ ನೆಮ್ಮದಿಯ
> ಜಯ ಧ್ವನಿಯ ಪಾಂಚಜನ್ಯದಿಂ ನೀರವಂ ಮೊಳಗಿಸುವಂತೆ
> ಮಾತೃ ವಕ್ಷೋಜಾಗ್ರವನು ಚಾಚು ತುಟಿಯೊಳು ಪಿಡಿದು, ಕೆನ್ನೆಯ
> ನುಬ್ಬಿಸುತ, ಹನಿವಿಡಿದ ಹೊಳವಿನ ಕಂಗಳಿಂ ತಾಯ ಮೊಗವನು
> ನಿರುಕಿಸುತಲೆವೆಯಿಕ್ಕಿ ನಗುತಂ ಪವಡಿಸಿರೆ, ನಂದನ ರಾಣಿ
> ಆ ತುಂಟನಿಗೆ ಯಿಕ್ಕುವಳು ಚಪೇಟಿಕಾ ಪ್ರಹಾರಂಗಳನು
> ಮಗುವಿನ ಕುಂಡೆಗೇನೆಂಬೆ ತಾಯ್ತನದೊಲುಮೆ ತಹ
> ತಳಮಳದೊಳರ್ಭಕನ ಸಾಹಸಕೆ ಮುಳಿವಂತೆ—"

ಆ ಗೊಲ್ಲರ ತಾಯಿ, ಆ ತುಂಟ ಮಗು, ಆ ಸಹಜವಾಗಿ ಪ್ರೀತಿ ಕೋಪಗಳಿಂದ ಕುಂಡೆಗಿಕ್ಕುವ ಏಟುಗಳು—ಈ ಶಬ್ದ ಚಿತ್ರದ ಸಿಹಿಯನ್ನು ಮರೆಯುವುದು ಕಷ್ಟ.

"ಸಂಜೆ ಬಾನ್ ಪೆರೆಯೆಸಳ ಚೆಂದವ ಮರೆಸಿ
ಚೆಂಬಾಯೊಳಗೆ ಮೊಳೆವಲ್ಲೆಸೆಯೆ ಬೆರಳಿತುವೆಮ್ಮನೀ
ಕಡಿದು ಹಾಯೆನಿಸುವಾ ಸೊಗದ ಬೆಲೆಗೇರದೆಮ್ಮ ಸೇವೆ"

ಹಾ! ಎಳೆ ಹಲ್ಲುಗಳು ಮೊಳೆತಿರುವ ಮಕ್ಕಳ ಬಾಯಲ್ಲಿ ಬೆರಳಿಟ್ಟು ಕಡಿಸಿ ಕೊಳ್ಳುವ ಸುಖ! ಎಷ್ಟು ರಮ್ಯ. ಇಂತಹ ಸುಖಕ್ಕೆ ತಾನೇ ನಾವು ಮತ್ತೆ ಮತ್ತೆ ಜನ್ಮ ವೆತ್ತಿಕೊಂಡು ಬರುವುದು!

ಮಳೆಯ ಮೋಡದಲ್ಲಿ, ಕವಿ ಕಾಣುವ ವಿರೋಧ ಭಾವ ಸಮ್ಮೇಳದ ಈ ವರ್ಣನೆ ಯನ್ನು ನೋಡಿ. ಇದಂತೂ ಅಪ್ಪಟ ಪು.ತಿ.ನ.

"ಆತಪೋದ್ಧೃತ ವಿದಾತಪಶಮನದಕ್ಷಂ. ಕ್ಷಾರಜಲ
ನಿಧಿಯೊಳಗುದಿಸಿಯುಂ ಸ್ವಾದೂದಕಸ್ವಾಂತಂ, ಕಡಲನೇ
ಮಗುಚುವೊಲು ನೀರನೊಳಕೊಂಡುಮಿದು ಗಾಳಿಗು ಹಗುರವೆನೆ
ತೇಲುವುದು ಗಗನಾಂಗಣದಿ, ಇದರ ಮೈಕಾಡಿಗೆ ಕಪ್ಪು,
ಉದುರುವ ಹನಿಯೆ ಮುತ್ತಿನ ಮಣಿಯು ನಗೆಯಂದದೊಲು ವಿಮಲ..."

ಭಾಂಡೀರವೆಂಬ ದೊಡ್ಡ ಆಲದ ಮರದ ವರ್ಣನೆ "ಭಾಂಡಿರ ದರ್ಶನ"ವೆಂಬ ಉಲ್ಲಾಸದ ೧೧೦-೧೪೦ ನೆಯ ಚರಣಗಳಲ್ಲಿ ಅತ್ಯದ್ಭುತವಾಗಿದೆ. ಮಿತಿಯಿಲ್ಲದ ಕೊಡಲಿಯ ಪ್ರಯೋಗದಿಂದ ಬೋಳಾಗಿರುವ ಸೀಮೆ ಈಗ ನಮ್ಮ ದೇಶವಾಗಿದೆ. ಹಿಂದೆ, ಕೃಷ್ಣನ ಕಾಲದಲ್ಲಿ ಗಂಗಾ ಯಮುನಾ ದ್ವೀಪ ಪ್ರಾಂತದಲ್ಲಿ ಅತಿ ನಿಬಿಡವಾದ ಕಾಡುಗಳಿದ್ದವು. ಅವುಗಳಲ್ಲಿ ಬಹಳ ದೊಡ್ಡ ಆಲದ ಮರಗಳಿದ್ದಿರಬೇಕು. ಹಿಂದಿನ ಕಾವ್ಯಗಳಲ್ಲಿ ಇಂತಹ ಮರಗಳ ವರ್ಣನೆಗಳು ಬರುತ್ತವೆ. ಅವು ಹೇಗಿದ್ದವೆಂಬುದು ಈಗ ಅವನ್ನು ಎಂದೂ ಕಾಣದ ನನಗೆ ಬರಿಯ ಊಹೆಗೆ ಬಿಟ್ಟಿದ್ದು. ಕವಿಯ ವರ್ಣನೆಯನ್ನು ನೋಡಿ.

"ಖಗ ನಗರ......
ತಾಯ್ಮೊಲೆಗೆ ತವಿಸಿ ಕರು ಮಿಣಿ ತುಯ್ವಂತೆ
ನೆಲವನೆ ನಿಟ್ಟಿಸುತ ಮೃತ್ ತೃಷೆಯ ಪ್ರಕಟಿಸುತಲಾ ಮರದ
ನಿಡುರೆಂಬೆಯಿಂದೆಳಲು ವೆಳಬಿಳಲುಗಳ......"

(ಗೊಲ್ಲರ ಸನ್ನಿವೇಶಕ್ಕೆ ತಕ್ಕ ಈ ಬಿಳಲುಗಳ ವರ್ಣನೆ ಎಷ್ಟು ಸಮಂಜಸ)

ನಾದಸತ್ವಂ ಮಹಾಹವದ ಮುಂಚೂಣಿಯೊಳು ಎಳೆಯರ
ದೂಡುವಂತಿದು ನವಿರೆಳೆಯ ಮೂಲಂಗಳನು ಮರುಗದೆಯೆ
ಅಟ್ಟಿಹುದಲಾ ಗಟ್ಟಿ ನೆಲವನು ಕೊರೆದು ಕಳವನು ಗೆಲ್ಲೆ...

(ಇದರ ಸ್ವಾರಸ್ಯ, ಆಲದ ಎಳಸು ಬಿಳಲುಗಳನ್ನು ಮುಟ್ಟಿ ಅದರ ಮೃದುತ್ವವನ್ನು ಅರಿತವರಿಗೆ ತಾನೇ ಲಭ್ಯ!)

ಹೀಗೆ ಬಹು ವಿಚಾರ ಪ್ರಚೋದಕವಾದ, ಇನ್ನೆಲ್ಲಿಯೂ ಕಾಣಲಸಾಧ್ಯವಾದಂತಹ ವರ್ಣನೆಗಳು ಈ ಕಾವ್ಯದಲ್ಲಿ ಹೇರಳವಾಗಿವೆ. ಯಾವುದನ್ನು ಉದಾಹರಿಸುವುದು, ಯಾವುದನ್ನು ಬಿಡುವುದು?

'ರಾಧಾಕೃಷ್ಣ ಸಂಗತಿ' ಎಂಬ ಉಲ್ಲಾಸದಲ್ಲಿರುವ ವನವರ್ಣನೆಯ ಈ ಚರಣಗಳನ್ನು ನೋಡಿ.

"ತನ್ನ ಬೆಳಕೆಲ್ಲವನು ಸೂರೆಗೊಡುತಿನ ಕಿರಣ ಮಹಾರಾಗ
ವನು ಹಳುವಿಗಿತ್ತದರ ಮುದ್ದನು ಮರುಕೊಂಬುದೇಕಾಂತದೊಳು,
ತನಿತನಿಯಾಯಿತಿನಿದಿನಿದಾಯಿ ತಡವಿಯ ಬಣ್ಣ ದಿವಸ ಪತಿ
ಒಳ ಹೊಗುತಲೊಳಗನು ಬೆಳಗೆ......"

ಅಮೇರಿಕದ ಮಾಗಿಯಲ್ಲಿ ವನರಾಜಿಯು ನಾನಾ ಬಣ್ಣ ತಿರುಗಿ ಸೂರ್ಯನ ಬೆಳಕಿನಲ್ಲಿ ನಲಿದಾಡುವುದನ್ನು ಕಂಡಿರುವ ನನಗೆ ಅದೇ ದೃಶ್ಯ ಈ ಮಾತುಗಳಲ್ಲಿ ಮನಸ್ಸಿಗೆ ಬಂದು ಆನಂದೋತ್ಕರ್ಷವಾಗುತ್ತದೆ.

ನರನಲ್ಲಿ ನಾರಾಯಣನನ್ನು ಕಾಣುವುದು ನಮ್ಮ ಭಾರತೀಯ ಧರ್ಮಗಳ ಒಂದು ಮುಖ್ಯ ಲಕ್ಷಣ. ಇತರ ಮತಗಳಲ್ಲಿ ದೇವರೆಂದರೆ ಒಂದು ಅವಾಸ್ತವಿಕ ಶಕ್ತಿಯೆಂಬಂತಹ ಕಲ್ಪನೆಯಿರುತ್ತದೆ. ನಮ್ಮ ಪದ್ಧತಿಯಲ್ಲಿ ದೇವರು ನಮ್ಮಂತೆಯೇ ಹುಟ್ಟಿ, ಶೈಶವದ ಆಟಗಳನ್ನೆಲ್ಲಾ ಆಡಿ, ಬೆಣ್ಣೆ ಹಾಲು ಮುಂತಾದವುಗಳನ್ನು ಕದ್ದು ತಿಂದು, ಕಾಡಿನಲ್ಲಿ, ಹೊಳೆಯಲ್ಲಿ ಓಡಿಯಾಡಿ, ಈಸಾಡಿ, ಬೆಳೆಯುತ್ತಾನೆ. ಹಸಿವು, ಬಾಯಾರಿಕೆ ಅವನನ್ನು ಬಾಧಿಸುತ್ತವೆ. ಒಳ್ಳೆಯ ಭೋಜನ ನಮ್ಮಂತೆಯೇ ಅವನಿಗೂ ಆಪ್ಯಾಯಮಾನ. ಕೊಳಲೂದುತ್ತಾನೆ. ಸಂಗೀತ ಸುಧೆಯಲ್ಲಿ ನಮ್ಮನ್ನು ಮುಳುಗಿಸಿ ತಾನೂ ಮುಳುಗುತ್ತಾನೆ. ಹಾಗೆಯೇ ಎಳೆಯ ವಯಸ್ಸಿನ ಕಾಮದ ಪ್ರಭಾವಕ್ಕೂ ಒಳಗಾಗುತ್ತಾನೆ....ಈ ಕಾವ್ಯದಲ್ಲಿ ಕವಿ ಈ ದೈವೀಕಾಮವನ್ನು ಬಹಳ ಸಾಮರ್ಥ್ಯದಿಂದ ನಿಯಂತ್ರಿಸಿಕೊಂಡು ಬಂದಿದ್ದಾರೆ.

ಕಾಮದ ವಿಷಯ ಬಹಳ ಕಷ್ಟ. ಇದು ರಸಗಳಲ್ಲಿ ಅತಿ ಪ್ರಧಾನವಾದ ಶೃಂಗಾರದ ಮೂಲ ಬಿಂದುವಾಗಿದ್ದರೂ, ಇದರ ರಸೋತ್ಪಾದನ ಕ್ರಮ ಬಹಳ ಜಟಿಲವಾದದ್ದು. ಆ ಕ್ರಮವೇ ಒಳ್ಳೆಯ ಕಾವ್ಯವೋ ಅಲ್ಲವೋ ಅನ್ನುವ ಒರೆಗಲ್ಲಾಗುತ್ತದೆ. ಇಲ್ಲಿ ಉದ್ರೇಕ, ತೃಷೆ ಮುಂತಾದ ಸ್ಥಿತಿ ಓದುಗನ ಮನಸ್ಸಿಗೆ ಬರಬಾರದು. ಕಾಮದ ಪ್ರಭಾವಕ್ಕೆ ಒಳಗಾಗದೇ ಆ ಶೃಂಗಾರ ಜನಿತವಾದ ಆನಂದವನ್ನು ಪಡೆಯಬೇಕು ಓದುಗರು. ಇದರಲ್ಲಿ ಕವಿ ಬಹಳ ಸಫಲರಾಗಿದ್ದಾರೆ.

'ರಾಧೆ ಯಾರು? ಇವಳ ಕತೆ ಎಲ್ಲಿಂದ ಬಂತು?' ಅನ್ನುವ ವಿಷಯದಲ್ಲಿ ಕವಿಯ ಮಾತನ್ನು ಕೇಳಿ.

"ಗೋವ್ರಜ ದೊಳಾವಳು ರಾಧೆ? ಎಲ್ಲಿಹಳು? ಯಾವನ ಮಗಳು?
ಕನ್ನೆಯೊ ಕುಟುಂಬಿನಿಯೊ? ಬಲ್ಲರಾರ್ ಆ ಹರಿವಲ್ಲಭೆಯ?
ಇತಿಹಾಸಬದ್ಧಳೊ, ಕವಿಕಲ್ಪನಾವಿರ್ಭೂತಳೊ?
ವಿಶ್ವವಲ್ಲಭಗುಂಟೆ ಪ್ರಣಯಿನೀ ಪಕ್ಷಪಾತಂ? ಶುಕ
ಮುನಿಯರಿಯ. ವ್ಯಾಸನುಮರಿಯನಾ ಪ್ರಣಯ ಪ್ರಸಂಗವನು..."

ದಿಟ. ಭಾಗವತದಲ್ಲೂ ರಾಧೆಯ ಉಲ್ಲೇಖವಿಲ್ಲ. ಹರಿವಂಶದಲ್ಲೂ ಇಲ್ಲ. ಈ ರಾಧೆಯ ಕತೆ ಎಲ್ಲಿ ಹುಟ್ಟಿತು? ಯಾವಾಗ ಹುಟ್ಟಿತು? ಚರಿತ್ರಕಾರರಿಗೆ ತಕ್ಕ ಸಮಸ್ಯೆ.

ಯುವತಿ ರಾಧೆಯ ಈ ವರ್ಣನೆಯನ್ನು ನೋಡಿ.

"......ಎಸೆವಕ್ಕಿ ರೆಕ್ಕೆಯಿಕ್ಕುವ ರೀತಿಯನು ಕಣ್ಣೆವೆಯಿಕ್ಕಿ
ತೋರುವ ಜಾಣ್ಮೆ, ಮಾತುಗಳ ಬರಿಗೈವ ಕೋರೆನೋಟಂ
ತಿರೆ ಹಗುರವಾದಂತೆ ಗತಿ ವಿಲಾಸಂ......
......ಉತುರೊಡಿಗೆ ಜಡೆ ಕುರುಳ ಸಿಂಗರ
ದೊಳಗೆ ಸಮಯಂಜೋಗುವರಿವಿನ ಮರೆವು, ಕನಸನು ತಳೆದ
ಕಂಗಳು, ನಿರ್ಬಂಧವೊಲ್ಲದ ಚಿತ್ತ......
......ಜತೆಗಿರೆ ಮಾರ ಜೀವೊಡೆದು
ಜೀವಣಿಗೆಗಿಂಬಾಗಿ ಷೋಡಶಿಗೆಲ್ಲಳಾವನೊಳಗಂ?......
ಬೆರಗ ತಹುದಾ ಬಳವಿ ತಂದೆ ತಾಯಿಗುಮವಳ ಚೆಂದಂ"

ಈ ಕೊನೆಯ ಸಾಲು ಬೆಳೆದ ಹುಡುಗಿಯರಿರುವ ತಂದೆ ತಾಯಿಗಳ ಮನಸ್ಸಿಗೂ ಎಷ್ಟು ದಿಟ ಅನ್ನಿಸುವ ಸಾಲು. ಅಂತೂ ರಾಧೆ ಷೋಡಶಿಯೆಂದು ಕವಿ ನಿರ್ಧರಿಸಿದಂತೆ ಕಾಣುತ್ತದೆ. ಎಳೆಯ ಕೃಷ್ಣನ ಸಂಗಡ ಒಲವಿನ ಸಂಬಂಧ ವಿರಿಸಿಕೊಳ್ಳುವವಳಿಗೆ ಇದು ಉಚಿತವೇ ಸರಿ. ಈ ಹದಿನಾರು ವರ್ಷದ ಗೊಲ್ಲ ಹೆಣ್ಣು ಕೃಷ್ಣನಿಗೆ ಮಾರುಹೋಗಿದ್ದಾಳೆ. ಅವನನ್ನು ಆಕರ್ಷಿಸದಿದ್ದರೆ ತನ್ನ ಚೆಲುವಿನ ದೇಹವಾದರೂ ಏತಕ್ಕೆ ಎಂದು ಕಾತರತೆಯಿಂದ ಖೇದಗೊಳ್ಳುತ್ತಾಳೆ. ಕವಿಯ ಈ ಮಾತನ್ನು ನೋಡಿ.

"ಮನೆ ಜೀಸವ ಬೇಸರ ಬೆಳಕಾಸವು ಮೈ. ಏಕಿದಕೆ ಚೆಲುವು
ಪುರುಷೋತ್ತಮನನೆಳೆ ತರುವ ಬಲವಿಲ್ಲದಿರದಿದಕೇಕೆ ಹರೆಯಂ?...
..........ಕಾಂಬೆನೆಂತೇ ಕಾಂತದೊಳು
ನನಗಿವನಾತನಿಗೆ ನಾನೆಂಬ ಬೇರಾರುಮಿಲ್ಲದ ಹದವಿ?"

ಇದು ಎಳೆಯ ತರುಣಿಯರೊಲುಮೆಗೆ ಸಹಜವಾದ ಆಕಾಂಕ್ಷೆ. ಇಲ್ಲಿ ರಾಧೆ ಜೀವಾತ್ಮ ಸಹಜವಾದ "ಅಹಂ" ಎಂಬ ಶಕ್ತಿಯ ರೂಪಕ. ಅದು ಎಲ್ಲವೂ ತನಗಾಗಿಯೇ ಬೇಕು ಅನ್ನುತ್ತದೆ. ಆದರೆ ಕೃಷ್ಣನಾದರೋ ಗೋವ್ರಜದ ಗೋಪಿಯರನ್ನೆಲ್ಲಾ

ರಮಿಸುವ ಸರ್ವಾಯತ ಪ್ರೇಮಶಕ್ತಿ. ಅವನು ಎಲ್ಲರಲ್ಲೂ ಸಮವಾಗಿ ನಿಲ್ಲುವ "ಸಮಷ್ಟಿ" ಪರಮಾತ್ಮದ ರೂಪಕ.

ಗೋಪಿಯರ ಸೀರೆ ಕದ್ದು ಅವರನ್ನು ಬೆತ್ತಲೆಯಾಗಿ ನೋಡುವ ಸನ್ನಿವೇಶದ ತರುವಾಯ ಬರುವ ಈ ಮಾತುಗಳನ್ನು ನೋಡಿ.

"......ನೆಲು ನಗೆಮೊಗದ ಮಣಿವರ್ಣನಂ ಚಾರುನೇತ್ರದೊ
ಳೆಮ್ಮ ಮೈಗಳ ಕಂಪಿನೊಲಪ್ಪುತಿಹನಂ, ಮುಟ್ಟು ಮುಟ್ಟುವೆಡೆ
ಜುಮ್ಮೆಡಟ್ಟಿಸುವುದಾ ಹರಿಕಟಾಕ್ಷಂ. ನಮ್ಮೀ ಮೈಯೊಳಗ
ದೀಪ್ತಿಯಿದುಯೆಲ್ಲಡಗಿತ್ತುಯಿಂದಿನವರೆಗು ಈ ಹರ್ಷದುರಿ
ಎಂಪಸ ನೋಟದ ಸುಳಿವನನುಸರಿಸುತ್ತ ನಮ್ಮಂಗಗಳ
ನಿಟ್ಟಿಪೆವು ಹನಿಮುತ್ತುಡುರುತಿಹ ತುರುಬಿನ ಕೊನೆಯು, ಬಿನ್‌ಮೊಲೆಯು,
ನುಣುಪಿನ ಪಾರ್ಶ್ವಗಳ, ತೆಳು ಬಸಿರ ತಿವಳಿಗಳ, ಹೊಕ್ಕುಳ ಸುಳಿಯು...
....
ಶ್ರೀ ಕೃಷ್ಣನೇ ತನ್ನಕ್ಷಿಯಿಂ ಪೊರಮಡುತೆಮ್ಮ ಕೊಳಲಂತೆ
ಬಾಜಿಸಿದ ಸರ್ವಾಂಗ ಸಂಚಾರದಿಂ ಬಗೆಬಗೆ ಹಿಗ್ಗುಗಳನುಕ್ಕಿಸುತ"

ಆಮೇಲೆ ರಾಧೆ, ಕೃಷ್ಣನು ಬಂದು ತನ್ನ ಸೀರೆಯನ್ನು ಕದ್ದು ತನ್ನನ್ನೂ ಬೆತ್ತಲೆಯಾಗಿ ನೋಡುತ್ತಾನೊ ಎಂಬ ಆಸೆಯಿಂದ, ಒಂಟಿಯಾಗಿ ಹೊಳೆಗೆ ಮೀಯಲು ಹೋಗಿ, ಅವನು ಬಾರದೇ ಬೇಸರಗೊಂಡು

"ಎನಿತು ಜಡವೀ ಹಗಲು. ಈ ರವಿಯು
ಪರಮಾತ್ಮ ನೇತ್ರವೆಂಬರದೇಕೆ ಎಂದು ಸುಯ್ದು, ಹೊರಬಂದು,
ಸೀರೆಯನುಟ್ಟು ತುಂಬಿದ ಕೊಡವನೇರಿಸುತ ಸೊಂಟಕೆ..."

ಮನೆಗೆ ನಿರಾಸೆಯಿಂದ ಹಿಂತಿರುಗುತ್ತಾಳೆ.

ಕೃಷ್ಣನ ಒಲವು ತನಗೇ ಸಂಪೂರ್ಣವಾಗಿ ಸಿಗಬೇಕೆಂಬ ರಾಧೆಗೆ ಕೃಷ್ಣನ ಮಾತುಗಳು ಹೀಗೆ....

"ನೀನೆನಗೆ ತನಿಜುವಳು ರಾಧೇ. ನಿನ್ನನೆ ನೆನೆದು ಮಿಕ್ಕನರಿ
ಗೊಲಿವೆನು. ನಿನ್ನ ಜೊಗಸೆಗಂಗಳ ಥಾಳಕಾಂಚೆನು ಹರಿಣಿಯೊಳ
ಕೊರಲಿನ ಮಾಟವನು ಹೊಸಬಿಯೊಳು. ಹೆಡೆಯಂತೆ ತೂಗಾಡುವೀ
ತುಂಬಿದೆಯು ನೆತಕಿನ ಚೆಲುವ ಚೆಂದವ್ವೆಯೊಳು, ನೆಳನಡು ಬಳುಕ
ಹೊನ್ನಿಯೊಳು.........ಹೀಗೆ

ರಾಧಾ ಕೃಷ್ಣರ ಮಿಲನದ ಸಂಭೋಗ ಶೃಂಗಾರದ ಸನ್ನಿವೇಶವನ್ನು ನೋಡಿ

"ಪ್ರಿಯ ಸಾಯುಜ್ಯ ಸುಖ ಮೌನವಾವರಿಸಿತು ಮಿಥುನನ ಬಸದಿ
ಮಿಂಚಿನ ಕುಡಿಯು ನಾಡಿಸುತ ಬೇರೆಯು ಬಳಿಯು ನಡರಿತು ನೋಡ
....
ಕೈಕೈ ಪಿಡಿದು ಮೌನದೊಳುಲಿಸು ಕುಳ್ಳಿರುವಂದಾ ಪ್ರೇಮಿಗಳ್
ಪರಸ್ಪರಾಕರ್ಷಣಾಸ್ತಿಮಿತ ನಿರ್ನಿಮೇಷ ಲೋಚನಗಳಿಂ
ಪ್ರಾಣವಿನಿಮಯ ಸಕ್ತರಾದ ವೊಲೊಬ್ಬರೊಬ್ಬರ ನೀಕ್ಷಿಸುತ
....
ಅಕ್ಷರೆಯೊಳರಿವಿಗೆ ದಕ್ಕಿ ಮೈಕೆತ್ತಿರುವ ವಿಶ್ವದ ಗುಟ್ಟೊ
ತನ್ನ ತಳವಿಲ್ಲದಾಸೆಯ ತುಂಬೊ, ತನ್ನುಸುರಿಂಬೊ.. ...
......ನೆಲೆಯೆ ವಿರಹದಿ ಕರುಳ ಕೊರೆಯುವ ಚಿನ್ನುಗುರೊ
ಳವಳ ಕುರುಳ ನೇವರಿಸುತಾತ್ಮದ್ವಾರ ತೋರಣವೆನಿಪ
ಹುಬ್ಬನು ತಿದ್ದಿ ಕೆನ್ನೆಯ ತಟ್ಟಿ ತುಟಿಗಳ ಮುಟ್ಟಿ ಹೃತ್ತೃಷಾ
ಪೀಯೂಷವಂ ಕರೆವವೊಲು ಗಲ್ಲವ ಹಿಂಡುವಂ......
......ನಾನಿನ್ನನಲ್ಲೆಂಬ ಶಂಕೆಯೊಳಲ್ಲದಿನ್ನೆಲ್ಲಿ ಕಹಿ ನೀ ?..."

ಹೀಗೆ ಇಂತಹ ಸಂಯೋಗದಲ್ಲಿ ಕಾಮದ ವಾಸನೆಯೇ ಇರದೆ ಬರಿಯ ಶಾಂತ ರಸವೇ ಉಕ್ಕಿ ಬರುತ್ತದೆ. ಕೃಷ್ಣ–ರಾಧೆಯರ ಒಲವು, ಮಿಲನಗಳನ್ನು ಜೀವಾತ್ಮ–ಪರಮಾತ್ಮ ಸಂಕರ್ಷದ ರೂಪದಲ್ಲಿ ನಿರೂಪಿಸಿ ದೈಹಿಕ ಜನ್ಯವಾದ ಕಾಮ ವಿಷಯದಲ್ಲಿ, ದೈವಿಕ ಭಾವನೆಗಳು ಹುಟ್ಟುವುದಕ್ಕೆ ಅನುವಾಗಿಸಿದ್ದಾರೆ. ಇದಕ್ಕೆ ನಮ್ಮಲ್ಲಿ ಸಾಕಷ್ಟು ಸಂಪ್ರದಾಯವಿದೆ. ಆದರೂ ಇಲ್ಲಿಯ ನಿರೂಪಣೆ ಅಸಾಧಾರಣವಾದದ್ದು.

ಇನ್ನು ಕೊಳಲಿನ ವಿಚಾರ. ಇಲ್ಲಿ ಕೃಷ್ಣನು ಪರಮಾತ್ಮ ಸ್ವರೂಪನಾದರೆ, ಅವನ ಕೊಳಲಿನ ಗಾನ ಆ ಪರಮಾತ್ಮನು ಜೀವವೃಂದಕ್ಕೆಸೆವ ಒಲುಮೆಯ ಕೃಪೆ, ಆನಂದ. ಭವಭಾರವನ್ನು ಹಗುರೆನ್ನಿಸಿ ಬಾಳೆ ಸಿಹಿ, ಸಾವು ದೂರ ಎಂದೆನ್ನಿಸುವ ಮಾಯೆ ತರುವಂತಹ ಪ್ರಸಾದ.

"ಸಾಗರ ವೇರುವುದು ಮುಗಿಲಂ, ಕಾನನವೇರುವುದು ಕಂಪಂ
ಏರುವುದು ಸಕಲಜೀವಂ ವಿಪುಲಾತ್ಮ ನಿಸ್ಸೃತ ಗಾನವಂ
ಲಕ್ಷಿಸಾ ಭೂತಿಯೊಳು ಪ್ರೇಮಪ್ಲುತಂ, ಕ್ಲಮ ಕಲುಷ ರಹಿತಂ...

"ಹಿಂದಿರುಗಿ ಪಂಚಿತಗೇಯದಿಂದರಿಸನು ತರುತ ಆರ್ತಿಯಂ
ಮುಡುಗಟ್ಟಿಸುತ ಇರಕಿದ್ದೊಳಿಂ ಕೊಳಲಿನಾಲಿಯು ? ತಂಬರಿವಿನಿಂದೀ
ಸರಮೇಳದೊಲು ಮುದ್ದಿಪರಾರು ದೇವರ ಹೊರತು..."

ಅವನ ಕೊಳಲಿನ ಸ್ವರ ಮೇಳಗಳಲ್ಲಿ ಜಗತ್ಸೃಷ್ಟಿಯ ಸರ್ವಸ್ವರ ಸಮುದಾಯಗಳೂ ಸೇರಿದಂತಿವೆ.

"ಈ ರೀತಿ ವ್ಯಕ್ತ ರಾಗಾಂಗ ವ್ಯಕ್ತಿಗಳ ಮೇಳ
ನವ ನವೋನ್ಮೇಷದಿಂದ ವಸ್ತುವು ಕಟ್ಟುವ ಸಮರಸ ಭಾವ
ಶ್ರೀ ಕೃಷ್ಣ ನಾಟಕದ ಸಾಕ್ಷಾತ್ಕಾರ ಪ್ರೇಮದ
ನೇಯ್ದಿರುವ ಭಾವದ ಹೊಳೆಯ ಜತೆ ಮಧ್ಯ ನಾಟಕದ
ಸಾಧಿಸುತ ಬರೆದು ಹರಿಸಿದ..."

"ಸ್ವರದ ಸುಖವು ಭಾವದ ಜತೆ ಮಧುರದ ಸ್ವಕ್ತಿ
ಜನ್ಮಜನ್ಮಾಂತರಗಳಿಂದ ಹೊರಟಿದೆ, ಧುಮುಧುಮುಗುಟ್ಟುವ ಬರುವ
ಸಮುದ್ರದ ನೀಳ ಗತಿ, ಹುಣ್ಣಿಮೆಯ ಸುಳಿಯಿಂದ, ಅಂಬಾರಿದವ
ತುರುಗಿ, ಗೂಡು, ಕುರಿ, ಮೊಳೆ, ಹಾಡು..."

ಹೀಗೆ ಕೃಷ್ಣನ ಅನುಭವದ ಸರ್ವಸ್ವರಾನುಭವಗಳ ಸಾರವಾದ ಅವನ ಮನಸ್ಸನ್ನು ಹೊಕ್ಕು, ಅಲ್ಲಿ ರೀತಿ ವಸ್ತುವಾಗಿ, ರಾಗ, ಸ್ವರ, ಲಯಗಳ ರೂಪವನ್ನು ತಳೆದು, ಅವ... ಸಾಗಿದು, ಕೈ ಬೆರಳ ತಪ್ಪುಗಳ ಮೂಲಕ ಸ್ವಯಂಸ್ಫೂರ್ತವಾಗಿ ಕೊಳಲಿನಿಂದ ಗಾನ ಸುಧೆಯ ರೂಪದಲ್ಲಿ ಹೊರಬರುತ್ತ. ಮತ್ತೆ ಅವನ ಕಿವಿಗಳನ್ನು ಹೊಕ್ಕು ಅವನ ಮನಸನ್ನೇ ಮತ್ತೆ ಸೇರುತ್ತದೆ. ಈ ಚಕ್ರಗತಿ ನಿರಂತರವಾದುದರಿಂದ ಎಲ್ಲರಿಗೂ, ಅವನಿಗೂ ಆನಂದವುಂಟಾಗುತ್ತದೆ. ಇದು ಒಂದು ಬಗೆಯ ಸರ್ಕ್ಯೂಟ್ ಇದ್ದಂತೆ. ವಿದ್ಯುತ್ತಿನ ಸರ್ಕ್ಯೂಟ್ ತಂತಿಯ ಮಧ್ಯದಲ್ಲಿ ಹರಿದು ಬೆಳಕು ಕೊಡುವುದಿಲ್ಲವೆ. ಆ ತರಹ. ಎಂತಹ ಅದ್ಭುತ ಕಲ್ಪನೆಯಿದು! (ಇದೇ ಭಾವವನ್ನು 'ಸಂಜೆಸೊಗಸಿನ' ಒಂದು ಕವನದಲ್ಲಿ ಕೊಡ... ಚಿತ್ರಿಸಿದ್ದಾರೆ.)

ಇಂತಹ ಕೊಳಲಿನ ಆನಂದದಾಯಕವಾದ ಉಪಕರಣವನ್ನು ಕೃಷ್ಣ ಗೋಪ್ರೇ... ವನ್ನು ಬಿಡುವಾಗ ಹಿಂದೆ ಬಿಟ್ಟು ಹೋಗುತ್ತಾನೆ. ಮತ್ತೆ ಅದನ್ನು ಅವನು ಎಂದೂ ಎತ್ತಿಕೊಂಡು ಬಾರಿಸುವುದಿಲ್ಲ. ಇದು ಬಹು ಸಾಂಕೇತಿಕ. ಈ ವಿಷಯ 'ಗೋಕುಲ ನಿರ್ಗಮನ'ದಲ್ಲಿ ಕಾಣ ಬರುತ್ತದೆ. ಅನಂತರದ ಜೀವನದ ಗುರಿ ಬೇರೆಯದೆಂದು ಸ್ಪಷ್ಟತೆ ತೋರಿಬರುತ್ತದೆ. ಇಲ್ಲಿಂದ ಮುಂದಿನ ಕೃಷ್ಣ ರಾಜಕಾರಣಿಯಾಗುತ್ತಾನೆ. ಪಾಂಡವರಿಗೆ ಸಹಾಯಕನಾಗುತ್ತಾನೆ. ಜಗತ್ತಿಗೆ ಧರ್ಮವನ್ನು ಬೋಧಿಸುವ ಮಾರ್ಗದರ್ಶಿ ಯಾಗುತ್ತಾನೆ. ಈ ಕೊಳಲು ಹೀಗೆ ಕೃಷ್ಣನ ಕೈಯಿಂದ ಕೃಷಿಕಲ್ಪಿತವಾದ ರಾಗದಿಂ ರಾಧೆಯೂ ಪರಿತ್ಯಾಗ ವಿರಹವನ್ನು ಅನುಭವಿಸಬೇಕಾಗುವುದು ಗಮನಾರ್ಹ. ಅಂದರೆ ಪರಮಾತ್ಮನಿಗೆ ಐಹಿಕ ಬಂಧಗಳು, ಕಾಮದ ಅನುರಾಗ (ರಾಗ) ಸಲ್ಲವು ಎಂದೇನೋ.

ಎಲ್ಲಾ ಉತ್ತಮ ಕಾವ್ಯಗಳಲ್ಲಿಯೂ ಅರ್ಥಗರ್ಭಿತವಾದ ಸಾಲಿನ ವಾಕ್ಯಗಳಿರುತ್ತವೆ. ಅವುಗಳಿಂದಲೇ ವಿಷಯ ಘನತೆಯನ್ನು ಅರಿಯಬಹುದು. ಈ ಕಾವ್ಯದಲ್ಲೂ ಅಂತಹವುಗಳಿಗೆ ಕೊರತೆಯಿಲ್ಲ. ಈ ಕೆಳಗಿನ ಸಾಲುಗಳನ್ನು ನೋಡಿ.

"ಮಣ್ಣಿನಲ್ಲಿ ಮುಗಿಲ ಬಿಂಬ"
"ಚಂದ್ರನ ಬಲದಲ್ಲಿ ಕಾವ್ಯ ಬಿಟ್ಟುಕಾಣದೇ?"

"ಬೆಂಕಿ ಕಟಕಟಿಸದೆ ಬಂಗಾರದಮಂ"

"ಮಹಾಪಕ್ವದ ಭೋಗವುಂ, ಜಾಗವುಂ ಜಗಕೊಗಕಲ್ತಿ ?"

ಇತ್ಯಾದಿ

ಈ ಅವಲೋಕನದಲ್ಲಿ ಉದಾಹರಣೆಗಳನ್ನು ಕವಿಯ ಮಾತಿನಲ್ಲೇ ಬರೆದಿದ್ದೇನೆ, ಆ ಮಾತುಗಳ, ಆ ಭಾಷೆಯ ಅಂದ ಮತ್ತು ಬೆಡಗನ್ನು ಓದುಗರು ಆಸ್ವಾದಿಸಿ ಆಕರ್ಷಿತರಾಗಲೆಂದು. ಇದರ ಭಾಷೆ ಗಂಭೀರವಾದ ಕಾವ್ಯ ಕರ್ಮಕ್ಕೆ ತಕ್ಕುದಾದ ಸಂಸ್ಕೃತ ಮತ್ತು ಕನ್ನಡ ಮಿಶ್ರಿತವಾದ ಶ್ರೀಗನ್ನಡವೆನ್ನಬಹುದಾದ ಭಾಷೆ. ಹಳೆಗನ್ನಡ ಶೈಲಿಯಲ್ಲಿರುವುದು ಕೆಲವರಿಗೆ ಭಯ ಹುಟ್ಟಿಸಬಹುದು. ಆದರೆ ಇದರಲ್ಲಿ ನಿಜವಾದ ಹಳೆಗನ್ನಡವಿಲ್ಲವೇ ಇಲ್ಲ. ಕೊಟ್ಟವೆನ್ನುವದನ್ನು ಕೊಟ್ಟಂ ಎಂದು ಬಿಟ್ಟರೆ ಹಳೆಗನ್ನಡವಾಗಿಬಿಡುವುದೆ? ಇಲ್ಲಿರುವುದು ನಮ್ಮ ಈಗಿನ ಕನ್ನಡವೆ. ಅನೇಕ ಸಂಸ್ಕೃತ ಪದಗಳಿಗೆ ತದ್ಭವ ರೂಪ ಪ್ರಯೋಗವಿದೆ. ಕೆಲವು ಅನಾವಶ್ಯಕವೆಂದೂ ಅನ್ನಿಸುತ್ತವೆ. ಉದಾಹರಣೆಗೆ ಯಮುನೆಯನ್ನು ಜಮುನೆಯೆನ್ನುವುದು. ಆದರೂ ಈ ಭಾಷೆ ಈ ಕೃತಿಗೆ ಘನತೆಯನ್ನು ಕೊಟ್ಟು ಇದು ಬಹುಕಾಲ ಬಾಳುವುದಕ್ಕೆ ಅನುಕೂಲವಾಗಿದೆ. ತಾಜಮಹಲನ್ನು ಅಮೃತಶಿಲೆಯಲ್ಲಿ ತಾನೇ ಕಟ್ಟಬೇಕು! ಇದರ ಛಂದಸ್ಸಂತೂ ಅತಿ ಗಂಭೀರವಾದ ವಿಸ್ಮಯಕರವಾದ ಲಯಗತಿಗಳಿರುವ ಬೃಹಚ್ಛಂದ! ಗಮಕಕ್ಕೆ ತುಂಬಾ ಅನುವಾಗಿದೆ. ಚೆನ್ನಾಗಿ ಹಾಡಲು ಬರುವವರು ತಮಗೆ ಸೂಕ್ತವೆನಿಸಿದ ರಾಗಗಳನ್ನು ಹಾಕಿ ಸುಶ್ರಾವ್ಯವಾಗಿ ಹಾಡಬಹುದು. ಕಥಾನಕಗಳಿಗೆ ಹೊಂದುವಂತ ಛಂದಸ್ಸು ಇದು. ಬಹಳ ಅಪರೂಪ. ಇದನ್ನು ನಿರ್ವಹಿಸುವುದು ನುರಿತ ಕವಿಗಳಿಗೆ ಮಾತ್ರ ಸಾಧ್ಯ.

ಡಿ.ವಿ.ಕೆ. ಮೂರ್ತಿಯವರು ಈ ಪುಸ್ತಕದ ಪ್ರಕಾಶಕರು. ಬಹಳ ಸುಂದರವಾಗಿ ಪುಸ್ತಕವನ್ನು ಹೊರತಂದಿದ್ದಾರೆ. ಮುದ್ರಣ ಬಹಳ ಮುದ್ದಾಗಿದೆ. ಓದುವುದಕ್ಕೆ ಬಹಳ ಸುಲಭವಾಗಿರುವ ಲಿಪಿ. ಪುಸ್ತಕದ ಉದ್ದಕ್ಕೂ ಅಲ್ಲಲ್ಲಿ, ಕರ್ನಾಟಕದ ಅನೇಕ ಪ್ರಸಿದ್ಧಾಪ್ರಸಿದ್ಧ, ಸುಂದರ ದೇವಾಲಯಗಳ ಭವ್ಯವಾದ ಕೆತ್ತನೆಯ ದೃಶ್ಯಗಳಿವೆ. ಮದನಗೊಂಬೆಗಳ ಚಿತ್ರಗಳಿವೆ. ಇವುಗಳಿಂದ ಕಾವ್ಯಾಸ್ವಾದಕ್ಕೆ ಕಳೆಯೇರುತ್ತದೆ. ಅಲ್ಲದೆ ಕೃಷ್ಣನ ಕತೆ ನಮ್ಮ ಸಾರ್ವಜನಿಕ ಕಲೆಗಳಲ್ಲಿ ಮನೆಮಾಡಿಕೊಂಡು ನಮ್ಮ ಸಂಸ್ಕೃತಿಗೆ ಹೇಗೆ ಜೀವಕೊಟ್ಟಿದೆ ಎನ್ನುವುದು ತಿಳಿಯುತ್ತದೆ. ಪುಸ್ತಕದ ಹೊದಿಕೆಯ ಪುಟದ ರಚನೆ ತುಂಬಾ ಚೆನ್ನಾಗಿದೆ. ಅದರ ಹಿಂಭಾಗದಲ್ಲಿ ಪು.ತಿ.ನ. ಅವರ ಭಾವೋದ್ದೀಪ್ತ ಮುಖ ಚಿತ್ರ, ಅವರು ಕೈಯೆತ್ತಿ ಏನನ್ನೋ ವ್ಯಾಖ್ಯಾನ ಮಾಡುತ್ತಿರುವುದು ಮನಸ್ಸನ್ನು ಸೂರೆಗೊಳ್ಳುತ್ತದೆ.

ಶ್ರೀ ಹರಿಚರಿತೆ ಬಹಳ ಒಳ್ಳೆಯ ಕಾವ್ಯ. ಕನ್ನಡ ಪ್ರೇಮಿಗಳೆಲ್ಲರೂ ಓದಲೇ ಬೇಕಾದುದು. ಬೆಲೆ ಕ್ಯಾಲಿಕೊ ಪ್ರತಿ ೬೦ ರೂ. ಸಾಮಾನ್ಯ ಪ್ರತಿ ೩೦ ರೂ.

ಮಿರ್ಜಾರನ್ನು ನೆನೆದು

ಮೂ॥ ಮುಜತಬಾ ಹುಸೇನ್

ಮಿರ್ಜಾ ಮೂವತ್ತು ವರ್ಷ ಸರ್ಕಾರಿ ಸೇವೆ ಮಾಡಿ ಮೊನ್ನೆ ನಿವೃತ್ತರಾದರು. ಅವರನ್ನು ಕಾಣಲುಹೋದೆ. ನನಗೆ ತೆಕ್ಕೆಬಿದ್ದು ಗಳಗಳ ಅಳುವುದಕ್ಕೆ ಪ್ರಾರಂಭಿಸಿದರು.

"ಮಿರ್ಜಾ! ಏನಿದು? ಅಂಥಾ ಪ್ರಸಂಗವಾದರೂ ಏನು? ಇನ್ನೂ ಸಂತೋಷಪಡಬೇಕಾಗಿತ್ತು. ಪೂರ್ತಿ ಮೂವತ್ತು ವರ್ಷ, ನಿಜ ವಾಗಲೂ [illegible], ಮಾಡಿದವರಿಗಿಂತಲೂ [illegible]. ಸೇವೆಯನ್ನು ಮುಗಿಸಿದ್ದೀರಿ. ಅಂದ ಮೇಲೆ ಈ ಅಳುವುದೇಕೆ?"

"ಮಿತ್ರಾ! ಒಬ್ಬ ಸರ್ಕಾರಿ ನೌಕರನ ಹೃದಯದ ಕೊರಗು ನಿನಗೇನು ಗೊತ್ತು? ನಿಜಾಂಶವೂ, ಜಗತ್ತಿನಲ್ಲಿ ಪ್ರತಿಯೊಬ್ಬರು ಬಾಳಿನಲ್ಲಿ ಒಂದೇ ಸಲ ಸಾಯುತ್ತಾರೆ. ಆದರೆ ಸರ್ಕಾರಿ ನೌಕರ ಮೂರಾವರ್ತಿ ಸಾಯುತ್ತಾನೆ. ಎನ್ನುವುದೂ ಗೊತ್ತಿಲ್ಲವೆ?"

"ಅದು ಹೇಗೆ?"

"ಅವನು ಸರ್ಕಾರಿ ಸೇವೆ ಸೇರುತ್ತಲೇ ಮೊದಲ ಸಲ ಸಾಯುತ್ತಾನೆ. ಸೇವೆಯಿಂದ ನಿವೃತ್ತನಾಗುತ್ತಲೂ ಎರಡನೇ ಸಲ ಸಾಯುತ್ತಾನೆ. ಮೂರನೆ ಸಲದ ಸಾವಂತೂ ಸ್ವಾಭಾವಿಕವಾದುದು."

"ಮಿತ್ರಾ! ಸತ್ತು ಸತ್ತು ಬಾಳುವುದೇ ಜೀವನದ ಉತ್ತಮ ಕಲೆ."

"ಕಲೆಯೇನೋ ನಿಜ. ಆದರೆ ಸಮಾಧಿಯ ಕಲ್ಲಿನ ಮೇಲೆ ಮರಣದ ದಿನಾಂಕ ಬರೆಯುವುದಕ್ಕೆ ಸ್ಥಳ ಎಷ್ಟು ಬೇಕು. ಅದಕ್ಕೇ ಅದನ್ನು ಬರೆಯಲು ಕಲ್ಲು ಸಾಲದೆ, ಬೇರೆ ಕಲ್ಲು ಸಿದ್ಧವಾಗಿದೆ."

ನಾನು ಮಿರ್ಜಾಗೆ ಸಮಾಧಾನದ ಮಾತು ಹೇಳಿ ಹಿಂದಿರುಗಿದೆ.

ಮಿರ್ಜಾ ಅವರ ಗಾಢ ಸರ್ಕಾರಿ ಸೇವೆಯನ್ನು ಅತಿಯಾಗಿ ಮಾಡು ವವರ ಗುಂಪಿನಲ್ಲಿ ಸೇರಿದೆ. ನನ್ನ ದೃಷ್ಟಿಯಲ್ಲಿ ಅವರು ಹುಟ್ಟಿ

ಶ್ರೀ ಮುಜತಬಾ ಹುಸೇನ್ ಅವರ '[illegible]' [illegible] ಪ್ರಕಟಿಸಿದ 'ಮಿರ್ಜಾ + [illegible]' [illegible] ಹಾಸ್ಯ ಪ್ರಬಂಧದ ಅನುವಾದ.

ಹಿಂದಲೇ ಸರ್ಕಾರಿ ಸೇವಕರು. ಏಕೆಂದರೆ ಅವರು ಚಿಕ್ಕಂದಿನಿಂದಲೇ ಎಲ್ಲ ಕೆಲಸ ಪೆಂಡಿಂಗಿನಲ್ಲಿ (pending) ಇಡುವುದರಲ್ಲಿ ನಿಷ್ಣಾತರು. ಅವರು ವಿದ್ಯಾರ್ಥಿ ಇದ್ದಾಗ ಹೋಮ್‌ವರ್ಕ್ ಮಾತ್ರ ಪೆಂಡಿಂಗಿನಲ್ಲಿಡದೆ, ಸ್ಕೂಲ್ ಫೀಸನ್ನೂ ಯಾವಾಗಲೂ ಪೆಂಡಿಂಗಿನಲ್ಲೇ ಇಡುತ್ತಿದ್ದರು. ಮದುವೆಯೊಂದನ್ನು ಬಿಟ್ಟರೆ ಉಳಿದೆಲ್ಲ ಕೆಲಸವನ್ನು ಪೆಂಡಿಂಗಿನಲ್ಲೇ ಇಟ್ಟಿದ್ದರು. ಅವರಲ್ಲಿ ಎಲ್ಲ ಕೆಲಸ ಥ್ರೂ ಪ್ರಾಪರ್ ಚ್ಯಾನಲ್ ಆಗುತ್ತಿದ್ದವು. ಈ ಥ್ರೂ ಪ್ರಾಪರ್ ಚ್ಯಾನಲ್ ಅಂದರೆ ನನಗೊಂದು ಸಂಗತಿ ನೆನಪಾಗುತ್ತದೆ. ಮಿರ್ಜಾ ಒಮ್ಮೆ ತಮ್ಮ ಕಛೇರಿಯಲ್ಲಿ ಹಾಸ್ಯ ಸಾಹಿತ್ಯದ ಸಭೆಯೊಂದನ್ನು ಏರ್ಪಡಿಸಿದ್ದರು. ಅದರಲ್ಲಿ ನನಗೆ ಒಂದು ಹಾಸ್ಯ ಲೇಖನವನ್ನು ಓದಲು ಹೇಳಿದ್ದರು. ಮಿರ್ಜಾ ಹೇಳಿದ್ದರಿಂದ ನಾನು ಹೋಗಲೇಬೇಕಾಯಿತು, ಹೋದೆ. ಹಾಸ್ಯ ಪ್ರಬಂಧ ಓದುವುದಕ್ಕೆ ಪ್ರಾರಂಭಿಸಿದೆ. ನನಗನಿಸಿತು, ಏಕೋ ಶ್ರೋತೃಗಳು ಒಮ್ಮೆಲೇ ನಗುತ್ತಿಲ್ಲ. ಸ್ವಲ್ಪ ಜನರು ತುಸು ನಕ್ಕು ಸುಮ್ಮನಾಗುತ್ತಾರೆ. ಆಮೇಲೆ ಇನ್ನೊಂದು ಸ್ವಲ್ಪ ಜನ ನಗುತ್ತಾರೆ. ಒಂದು ಸಲ ಒಂದು ಮೂಲೆಯ ಜನ ನಕ್ಕರೆ, ಇನ್ನೊಂದು ಸಲ ಇನ್ನೊಂದು ಮೂಲೆಯಲ್ಲಿ. ಹೀಗೆ ನಗುವುದರಲ್ಲೂ ಒಟ್ಟು ಇಲ್ಲ. ಕಂತು ಕಂತು ಮಾಡಿಕೊಂಡು ನಗುತ್ತಿದ್ದಾರೆ. ವಿಷಯ ಓದುವುದನ್ನು ಮುಗಿಸುತ್ತಲೂ ನನ್ನ ಆಕ್ಷೇಪಣೆ ಮಿರ್ಜಾರವರಿಗೆ ಹೇಳಿದೆ—"ಹೀಗೇಕೆ ನಿಮ್ಮ ಜನ ಒಟ್ಟಿಗೇ ನಗದೆ ಕಂತು ಕಂತಿನಲ್ಲಿ ನಗುವ ಸಂಚು ಮಾಡಿಕೊಂಡಿದ್ದಾರೆ?" ಎಂದು. ಅದಕ್ಕೆ ಮಿರ್ಜಾ ಅವರು ಗಹಗಹಿಸಿ ನಕ್ಕು ಹೇಳಿದರು, "ಮಿತ್ರ! ನಿನಗೇನು ಗೊತ್ತು? ಕಛೇರಿಯ ಕಾಯ್ದೆಗಳು? ನಗುವುದನ್ನೂ ಥ್ರೂ ಪ್ರಾಪರ್ ಚ್ಯಾನಲ್‌ನಲ್ಲೇ ನಾವು ನಗುತ್ತಿದ್ದೆವು. ನಿನ್ನ ವಿಷಯ ಕೇಳಿ ಮೊದಲು ನಮ್ಮ ಸೆಕ್ರೆಟರಿಯವರು ನಕ್ಕರು. ಅವರದು ಆದ ಮೇಲೆ ಡೆಪ್ಯುಟಿ ಸೆಕ್ರೆಟರಿಯವರು ನಗುವ ಸರದಿ. ಆದಾದ ಮೇಲೆ ಅಸಿಸ್ಟಂಟ್ ಸೆಕ್ರೆಟರಿ ನಕ್ಕರು. ಆವಾಗ ಈ ನಗು ಸೂಪರಿಂಟೆಂಡೆಂಟರವರಿಗೆ ತಲುಪಿತು. ನಿನಗೆ ಗೊತ್ತೇ ಇದೆ. ಈ ಸೂಪರಿನ್‌ಟೆಂಡೆಂಟರು ಯಾವುದೇ ವಿಷಯವನ್ನು ಅದುಮಿ ಹಿಡಿಯುವುದರಲ್ಲಿ ಎಷ್ಟು ಕದೀಮರು ಇರುತ್ತಾರೆಂಬುದು. ಅದೇನೋ ಪುಣ್ಯದಿಂದ, ಸೂಪರಿನ್‌ಟೆಂಡೆಂಟರು ನಕ್ಕದ್ದಕ್ಕೆ ನಾವು ಕ್ಲಾರ್ಕ್ ಜನರೂ ನಗುವ ಪಾಳಿ ಬಂದಿತು."

"ಮಿತ್ರ! ನಗು ಯಾರ ಹಿಡಿತಕ್ಕೂ ಸಿಕ್ಕದೆ ಹೊರಗೆ ಬರುವ ಕ್ರಿಯೆ. ಇದು ಬ್ರಿಟಿಷ್ ಚ್ಯಾನಲ್ ಕೂಡ ದಾಟಬಹುದು. ಥ್ರೂ ಪ್ರಾಪರ್ ಚ್ಯಾನಲ್ ಮಹತ್ವ ಏನಿದೆ?"

"ನಿನಗೇನು ಗೊತ್ತು. ಕಛೇರಿ ಕಾಯ್ದೆಗಳಿಂದ ಮನುಷ್ಯ ಬ್ರಿಟಿಷ್ ಚ್ಯಾನಲ್ ಹೇಗೋ ಸಲೀಸಾಗಿ ಪಾರಾಗಬಹುದು. ಆದರೆ ಈ ಥ್ರೂ ಪ್ರಾಪರ್ ಚ್ಯಾನಲ್ ಕಡೆಗಾಣಿಸುವುದಕ್ಕೆ ಯಾರಿಂದಲೂ ಆಗುವುದಿಲ್ಲ.

ಮಿರ್ಜಾ ಜೀವನದುದ್ದಕ್ಕೂ ಈ ಥ್ರೂ ಪ್ರಾಪರ್ ಚ್ಯಾನಲ್ ಚಕ್ರದಲ್ಲಿ ಸಿಕ್ಕಿಬಿದ್ದಿದ್ದರು. ಅದು ಎಷ್ಟರಮಟ್ಟಿಗೆ ಅಂದರೆ ಹೇಳತೀರದು. ಮನೆಯಲ್ಲಿ ಅಕಸ್ಮಾತ್ ಚಿಕ್ಕ ಮಗು ಏನಾದರು ಗಲಾಟೆ ಮಾಡಿತು ಅಂದರೆ ಅದನ್ನು ಹೊಡೆಯುವುದಕ್ಕೆ ಅವರು ಥ್ರೂ ಪ್ರಾಪರ್ ಚ್ಯಾನಲ್, ಮೊದಲು ತಮ್ಮ ಹೆಂಡತಿಯನ್ನು ಹೊಡೆಯು

ಹಿರಿಯ ಫೈಲುಗಳ ಧೂಳನ್ನು ಝಾಡಿಸುತ್ತಿದ್ದರು. ಅವುಗಳನ್ನು ಮತ್ತೆ ಮತ್ತೆ ಓದಿಕೊಂಡು, ಅವುಗಳ ಸ್ಥಳಕ್ಕೇ ತಪ್ಪುವಿಡುತ್ತಿದ್ದರು. ಮಿರ್ಜಾರವರ ಹತ್ತಿರ ಇರುವ ಫೈಲುಗಳು ಬಹಳ ದಿನಗಳಿಂದ ಅವರ ಹತ್ತಿರವೇ ಬಿದ್ದಿರುವುದರಿಂದ ಅವುಗಳಿಗೆ ತಮ್ಮದೇ ಆದ ವಾಸನೆ ಬಂದಿತ್ತು, ಮಿರ್ಜಾರವರ ವಾಸನೆಯೇ ಅವುಗಳಲ್ಲಿ ಬರುವುದಕ್ಕೆ ಪ್ರಾರಂಭವಾಗಿರುತ್ತಿತ್ತು. ಇದರಿಂದಾಗಿ ಅವರ ಸಂಗಡಿಗರು ಫೈಲುಗಳನ್ನು ಮೂಸಿನೋಡಿದರೆ, ಯಾವ ಫೈಲು ಮಿರ್ಜಾ ಅವರದು, ಯಾವುದು ಇತರರದು. ಅದನ್ನುವುದನ್ನು ಗುರುತ್ತುಮಾಡಿಕೊಳ್ಳುತ್ತಿದ್ದರು.

ಫೈಲುಗಳ ಧೂಳು ಝಾಡಿಸುವುದು ಮಾಡದ ಮೇಲೆ ಸ್ವಲ್ಪ ಸಮಯ ಚಿಕ್ಕದಾಗಿ ತಮ್ಮ ಕುರ್ಚಿಯ ಮೇಲೆ ಕುಳಿತಿರುತ್ತಿದ್ದರು. ಮುಖ್ಯ ಉದ್ದೇಶ ಅವರದು, ಈ ಕ್ರಮದಿಂದಾದರೂ ತಮ್ಮ ಕುರ್ಚಿ ಸ್ವಚ್ಛವಾಗಲೀ ಎಂದು. ಕುರ್ಚಿ ಸ್ವಚ್ಛವಾಗುವ ಹೊತ್ತಿಗೆ ಊಟದ ಸಮಯವಾಗುತ್ತಿತ್ತು. ಆಗ ಮಿರ್ಜಾ ಅವರು ತಮ್ಮ ಟಿಫಿನ್ನಿಗೆಯನ್ನು ಬೇಯಿಸಿದ ಮೊಟ್ಟೆ, ಊಟಕ್ಕೆಂದು ತೆರೆಯುತ್ತಿದ್ದರು.

ನಾನು ಮಿರ್ಜಾರವರನ್ನು ಸಾಮಾನ್ಯ ಯಾವಾಗ ಅವರ ಕಛೇರಿಗೆ ಹೋದರೂ ಆಗ ಅವರ ಟಿಫಿನ್ನಿಗೂ ದರ್ಶನವೇ ಆಗುತ್ತಿತ್ತು. ನಾನು ಎಷ್ಟೋ ಸಲ ಟಿಫಿನ್ನಿಗೆಯನ್ನು ಎತ್ತಿ ನೋಡುತ್ತಿದ್ದೆ. ಅಕಸ್ಮಾತ್ತಾಗಿ ಮಿರ್ಜಾ ಅವರು ಸಿಕ್ಕಿಬಿದ್ದರು. ಆದರೆ ಯಾವಾಗಲೂ ಟಿಫಿನ್ನಿಗೆ ಖಾಲಿಯಾಗಿಯೇ ಇರುತ್ತಿತ್ತು.

ಮಿರ್ಜಾ ಅವರ ಲಂಚ್, ಟಿಫಿನ್ನಿನ ಎಲ್ಲ ಲಂಚ್‌ಗಳಿಗಿಂತಲೂ ದೊಡ್ಡದು. ಹಾಗೆ ಹೇಳಿದರೆ ನನಗೆ ತಿಳಿದಂತೆ–ಅವರ ಊಟದ ಡಬ್ಬದಲ್ಲಿ ಎರಡಕ್ಕಿಂತಲೂ ಹೆಚ್ಚಿನ ರೊಟ್ಟಿಗಳು ಇರುತ್ತಿರಲಿಲ್ಲ. ಎಷ್ಟೋ ಸಮಯ ತಮ್ಮ ದೊಡ್ಡಸ್ತಿಕೆಯನ್ನು ತಾವೇ ಕಾಯ್ದುಕೊಳ್ಳಲು, ಅವರು ಖಾಲಿ ಊಟದ ಡಬ್ಬವನ್ನೇ ತಂದಿರುತ್ತಿದ್ದರು.

ನಾನು, “ಮಿರ್ಜಾ! ಎರಡು ಚಪಾತಿ ತಿನ್ನುವುದಕ್ಕೆ ನಿಮಗೆ ಎಷ್ಟು ಗಂಟೆ ಬೇಕಾಗುತ್ತದೆ?” ಎಂದು ಕೇಳುತ್ತಿದ್ದೆ... ಇದಕ್ಕೆ ಅವರು, “ಎರಡು ಚಪಾತಿಯನ್ನಾದರೂ ಎರಡೇ ನಿಮಿಷದಲ್ಲಿ ತಿಂದು ಬಿಡುತ್ತೇನೆ. ಉಳಿದ ಸಮಯ ಅದನ್ನೇ ಮೆಲುಕಾಡಿಸುತ್ತಿರುತ್ತೇನೆ. ಮಾಡಿದ ಊಟವನ್ನು ಜೀರ್ಣಿಸಿಕೊಳ್ಳುವುದಕ್ಕಾದರೂ ಸಮಯ ಬೇಕೇಬೇಕಲ್ಲ” ಎನ್ನುತ್ತಿದ್ದರು.

ಮಿರ್ಜಾ ಅವರು ಊಟ ಮುಗಿಸಿ ಬರುವಷ್ಟರಲ್ಲಿ ಮೂರು ಗಂಟೆ ಹೊಡೆದಿರುತ್ತಿತ್ತು. ಈ ಸಮಯ ಪ್ರಚಲಿತ ವಿಷಯದ ಮೇಲೆ ಸಮಾಲೋಚನೆ ಮಾಡಲು ಬಹಳ ಅನುಕೂಲವಾಗಿರುವುದು. ಮಿರ್ಜಾ ಅವರಿಗೆ ಮನೆಗೆ ಹೋಗುವ ಸಿದ್ಧತೆಯನ್ನು ಸ್ವಲ್ಪ ಬೇಗ ಮಾಡಿಕೊಳ್ಳಬೇಕಾಗುತ್ತಿತ್ತು. ಅವರ ದೃಷ್ಟಿಯಿಂದಾಗಲೂ ಗಡಿಯಾರದ ಬೆಲೆ ಬೇರೇ. ದಿನದಲ್ಲಿ ಯಾವುದೇ ಸಮಯದಲ್ಲಿ ಅವರನ್ನು ಯಾರಾದರೂ ಗಂಟೆಗಳೆಷ್ಟೆಂದು ಕೇಳಿದರೆ, ತಮ್ಮ ಗಡಿಯಾರ ನೋಡಿ ಬಹಳ ನಿಶ್ಚಿಂತೆಯಿಂದ, “ಗಂಟೆ ಆಗ ಏನು ಕೇಳುತ್ತೀರಿ, ಕಛೇರಿ ಬಿಡಲು ಇನ್ನೂ ಮೂರು ಗಂಟೆ ಹತ್ತು ಮಿನಿಟುಗಳು ಉಳಿದಿವೆ” ಎಂದು ಹೇಳುತ್ತಿದ್ದರು.

ಮಿರ್ಜಾ ಅವರು ತಮ್ಮ ಇಡೀ ಜೀವನವನ್ನು ಹೀಗೆಯೇ ಕಳೆದರು. ಕಛೇರಿ ಬಿಡುವ ಸಮಯ ಯಾವಾಗ ಆಗುವುದೆಂದು ಸದಾ ಗಡಿಯಾರವನ್ನು ನೋಡುತ್ತಿದ್ದರು.

ಜಾರ್ ಅವರಿಗೆ ಇಷ್ಟೊಂದು ಹಂದಿಯರು, ಹಾವುಗಳು ಹೇಗೆ ಬಂದಿರಬಹುದೆಂಬುದೇ ತಿಳಿಯುವರಿಗೆ ಆಶ್ಚರ್ಯವಾಯಿತು. ಅವರನ್ನು ಈ ವಿಚಾರವಾಗಿ ಕೇಳಿದಾಗ, ಯಿರಿ! ನಾನು ಸ್ವತಃ ನನ್ನ ಹಂದಿಯನ್ನು ಸೃಷ್ಟಿಸುತ್ತೇನೆ. ಅವಶ್ಯಕ ರಜೆ ಕಾದಾಗ ಅವರನ್ನು ಸಾಯಿಸುತ್ತೇನೆ. ಕಛೇರಿಯ ಕಾಯಿದೆ ಕಾನೂನುಗಳನ್ನು ಲಿಸುವುದಕ್ಕೆ ಮನುಷ್ಯನಿಗೆ ಏನೆಲ್ಲ ಮಾಡದಿರುವುದಕ್ಕಾಗುತ್ತದೆಯೆ?" ಎನ್ನು ದ್ದರು.

ತಮ್ಮ ಅಸ್ವಸ್ಥತೆಯಲ್ಲಿ ಮಿಜಾರ್ ಕಛೇರಿಗೆ ತಪ್ಪದೇ ಬರುತ್ತಿದ್ದರು. ಏಕೆಂದರೆ ವರ ವಿಚಾರದಲ್ಲಿ ಅವರು ರಜೆ ಪಡೆದು ಮನೆಯಲ್ಲಿ ಕುಳಿತರೆ, ಅವರ ಖಾಸಗಿ ವ್ಯಾಪಾರಗಳು ಬಹಳ ಕೆಟ್ಟುಹೋಗುತ್ತಿದ್ದವು. ಅವರ ಹೆಂಡತಿ, ಮಿಜಾರ್ ಅವರಿಂದ ಡೆದು ಅನೇಕ ಹೊಡಿಂಗ್ ಕೆಲಸಗಳನ್ನು ಮಾಡಿಸುತ್ತಿದ್ದರು. ಒಂದು ಸಲ ಮಿಜಾರ್ ವರು ತಮ್ಮ ಖಾಸಗಿ ಕೆಲಸದ ಪ್ರಯುಕ್ತ ಎರಡು ತಿಂಗಳ ಪಕ್ಕಾ ರಜೆಯನ್ನು ಡೆದರು. ಆದರೆ ಇನ್ನೂ ರಜೆಪಡೆದು ಎಂಟು ದಿನಗಳೂ ಆಗಿರಲಿಲ್ಲ. ಕಛೇರಿಗೆ ಡಿಕಲ್ ಸರ್ಟಿಫಿಕೇಟ್ ಲಗತ್ತಿಸಿದ ಮಿಜಾರ್ ಅವರ ಅರ್ಜಿಯೊಂದು ಬಂದಿತು. ದರಲ್ಲಿ, "ಸಮಾನ್ಯರೆ! ಈ ಬಡ ಸೇವಕ ತನ್ನ ಖಾಸಗಿ ಕೆಲಸದ ಪ್ರಯುಕ್ತ ಎರಡು ಂಗಳ ಪಕ್ಕಾ ರಜೆಯನ್ನು ಪಡೆದಿದ್ದ. ಆದರೆ ಈ ಅವಧಿಯಲ್ಲಿ ಅವನ ಆರೋಗ್ಯ ಂಪೂರ್ಣ ಕೆಟ್ಟುಹೋಯಿತು. ಡಾಕ್ಟರು ಅವನಿಗೆ ಸಂಪೂರ್ಣ ವಿಶ್ರಾಂತಿಯನ್ನು ಡೆಯಬೇಕು. ಇಲ್ಲವಾದಲ್ಲಿ ಜೀವಕ್ಕೇ ಅಪಾಯವಿದೆ ಎಂದು ಸಲಹೆ ನೀಡಿದರು. ದಕ್ಕಾಗಿ ಬಡ ಸೇವಕನ ರಜೆಯನ್ನು ರದ್ದುಮಾಡಿ ಕೂಡಲೇ ಅವನನ್ನು ಕಛೇರಿಗೆ ಜರ್ ಪಡಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ಈ ಸಂಬಂಧದಲ್ಲಿ ಡಾಕ್ಟರ್ ರ್ಟಿಫಿಕೇಟನ್ನೂ ಲಗತ್ತಿಸಿದ್ದೇನೆ" ಎಂದು ಬರೆದಿತ್ತು.

ಮಿಜಾರ್ ಅವರ ಮೂವತ್ತು ವರ್ಷದ ಸೇವಾ ಅವಧಿ ಯಶಸ್ವಿಯಾಗಿ ಗಿದುದರ ರಹಸ್ಯವೆಂದರೆ, ಅವರು ತಮ್ಮ ಮೇಲಧಿಕಾರಿಗಳನ್ನು ಸಂತೋಷವಾಗಿಡುವ ಲೆಯನ್ನು ಬಹಳ ಚೆನ್ನಾಗಿ ಸಾಧಿಸಿಕೊಂಡಿದ್ದರು. ಮೇಲಧಿಕಾರಿಗಳ ಸುಖದುಃಖದಲ್ಲಿ ವತ್ತಕರೆಗಿಂತಲೂ ಹೆಚ್ಚಾಗಿಯೇ ಭಾಗೀದಾರರಾಗಿರುತ್ತಿದ್ದರು. ಮೇಲಧಿಕಾರಿಗಳ ಗ ಪರೀಕ್ಷೆಯಲ್ಲಿ ಪಾಸಾಗುತ್ತಲೂ, ಸ್ವತಃ ತಮ್ಮ ಮಗನೇ ಪಾಸಾಗಿದ್ದುದಕ್ಕಿಂತಲೂ ಚ್ಚಿನ ಸಂತೋಷವನ್ನು ವ್ಯಕ್ತ ಮಾಡುತ್ತಿದ್ದರು. ನಾನು ಎಷ್ಟೋ ಸಲ ಅವರಿಗೆ, ಮಿಜಾರ್, ನೀವು ನಿಮ್ಮ ಅಧಿಕಾರಿಗಳ ಸುಖದುಃಖದಲ್ಲಿ ಅಷ್ಟು ಅತಿಯಾಗಿ ಭಾಗೀದಾರ ಗಬೇಡಿ ಎಂದು ತಿಳಿಸಿಕೊಳ್ಳಬೇಡಿ. ಇದರಿಂದ ನಿಮಗೆ ಹಾನಿಯಾಗುವ ಭವವೂ ಉಂಟೆಂದು ಹೇಳಿದೆ. ಆದರೆ ಅವರು ಒಪ್ಪಲಿಲ್ಲ. ಹೀಗಾಗಿ ಒಂದು ಸಲ ಜಾರ್ ಅವರಿಗೆ ಇದರಿಂದ ಶಿಕ್ಷೆಯೂ ಆಯಿತು. ಅದು ಆದದ್ದು ಹೀಗೆ—ಅವರ ಸಿಸ್ಟೆಂಟ್ ಸೆಕ್ರೆಟರಿಯವರ ಹೆಂಡತಿ, ಯಾವುದೋ ಕಾಯಿಲೆಯಿಂದ ತೀರಿಕೊಂಡರು. ವಿಷಯ ತಿಳಿಯುತ್ತಲೂ ಮಿಜಾರ್ ಅವರು, ಅತಿದುಃಖ ಪ್ರಕಟನೆಯ ಫಲವಾಗಿ, ಕ್ಕೆ ತಕ್ಕ ಬದ್ದೇ ಬಿಟ್ಟರು. ಅತ್ತುಅತ್ತು ತಮ್ಮ ದೇಹಸ್ಥಿತಿಯನ್ನೇ ಕೆಡಿಸಿಕೊಂಡರು. ಸಿಸ್ಟೆಂಟ್ ಸೆಕ್ರೆಟರಿಯವರ ಹೆಂಡತಿಯ ಹೆಸರನ್ನು ತೆಗೆದುಕೊಳ್ಳುವುದು, ಎದೆ ಎದೆ

ಬಡಿದುಕೊಂಡು ಅಳುವುದಕ್ಕೆ ಪ್ರಾರಂಭಿಸಿದರು. ತಮ್ಮ ಹೆಂಡತಿಯ ಹೆಸರನ್ನು ಪದೆ ಪದೇ ನುಡಿಯುವ, ಇವರ ಹುಚ್ಚುಚ್ಚಾದ ಸ್ಥಿತಿಯನ್ನು ಕಂಡು ಅಸಿಸ್ಟೆಂಟ್ ಸೆಕ್ರೆಟ ಯವರಿಗೂ ದಂಗು ಬಡಿದಂತಾಯಿತು. ಮಾರನೇ ದಿವಸವೇ ಮಿರ್ಜಾರವರಿಗೆ, "ನನ ಹೆಂಡತಿಯ ಸಾವಿಗೆ ನೀವು ಇಷ್ಟು ಕಣ್ಣೀರು ಹಾಕುವ ಅವಶ್ಯಕತೆ ಏನಿತ್ತು? ಈ ಬಗ್ಗೆ ನೀವು ನಿಜವಾದ ವಿವರಣೆಯನ್ನು ಕೊಡದೇ ಇದ್ದರೆ ನಿಮ್ಮನ್ನು ಅಮಾನತ್ತಿನಲ್ಲಿ (suspend) ಇಡಲಾಗುವುದು" ಎಂದು ಮೆಮೊ ಕೊಡಲಾಯಿತು. ಮಿರ್ಜಾ ಅವರಿಗೆ ತಲೆ ಸುತ್ತುವಂತಾಗಿ, ಯಾವುದಕ್ಕೂ ತಿಳಿಯದೇ, ನೆಪಕೂಡಿ ರಜೆ ಹಾ ಮನೆಯಲ್ಲಿ ಕುಳಿತುಬಿಟ್ಟರು. ಆ ಅಸಿಸ್ಟೆಂಟ್ ಸೆಕ್ರೆಟರಿಯವರ ವರ್ಗವಾದ ಮೇಲೆಯ ಕಛೇರಿಗೆ ಹಾಜರ್ ಆದರು.

ಮಿರ್ಜಾ ಅವರು ತಮ್ಮ ಅಧಿಕಾರಿಗಳಿಗೆ ತಿಂಡಿ, ತೀರ್ಥ, ಕಾಣಿಕೆಗಳನ್ನು ಒಪ್ಪಿಸ ವುದರಲ್ಲಿಯೂ ಬಹಳ ಚತುರರಾಗಿದ್ದರು. ಈ ವಿಷಯದಲ್ಲಿ ಅವರು ಅನುಸರಿಸುತ್ತಿದ ರೀತಿ ಬಹಳ ವಿಚಿತ್ರ. ಹತ್ತಿರವಿರುವ ಯಾವುದೋ ಮಿಠಾಯಿ ಅಂಗಡಿಯಲ್ಲಿ ಸ್ವೀಟ್ ಗಳನ್ನು ತೆಗೆದುಕೊಳ್ಳುವುದು, ತಮ್ಮ ಮೇಲಧಿಕಾರಿಗಳ ಮನೆಗೆ ಹೋಗಿ, "ಸಾಹೇಬ್ರೆ ನನ್ನ ತಮ್ಮ ಲಖ್ನೋದಿಂದ ಮಿಠಾಯಿ ಕಳಿಸಿದ್ದಾನೆ. ಏನೋ ತಮ್ಮ ಸನ್ನಿಧಿಯಲ್ಲ ಸ್ವಲ್ಪ ಕೊಡಬೇಕೆನಿಸಿತು. ಅದಕ್ಕೇ ಬಂದಿದ್ದೆ" ಅನ್ನುತ್ತಿದ್ದರು.

ಒಂದು ಸಲವಂತೂ ಅವರು ತಮ್ಮ ಅಧಿಕಾರಿಯ ಮನೆಗೆ ಒಂದು ಎಮ್ಮೆಯನ್ನ ತೆಗೆದುಕೊಂಡು ಹೋಗಿ ಅದನ್ನು ಅವರ ಮನೆಯಲ್ಲಿ ಕಟ್ಟಿಬಿಟ್ಟರು. ಈ ಬಗ್ಗೆ ಅಧಿಕಾ ವಿಚಾರಿಸುತ್ತಲೂ, "ಸಾಹೇಬ್ರೆ! ನನ್ನ ಮನೆಯಲ್ಲಿ ನಾಲ್ಕಾರು ಎಮ್ಮೆಗಳು ಸುಮ್ಮನೆ ನಿಂತಿವೆ. ಅವುಗಳಿಂದ ಏನು ಕೆಲಸ ತೆಗೆದುಕೊಳ್ಳಬೇಕೆಂಬುದೂ ತಿಳಿಯದಾಗಿದೆ. ಏನೋ ಒಂದನ್ನು ತಮ್ಮ ಸನ್ನಿಧಿಯಲ್ಲಿ ಬಿಡಬೇಕೆಂದು ಮನಸ್ಸಾಯಿತು. ಈ ಬಡವನ ಕಿರ ಕಾಣಿಕೆಯನ್ನು ದಯವಿಟ್ಟು ಸ್ವೀಕರಿಸಬೇಕು" ಎಂದು ಹೇಳಿಬಿಟ್ಟರು.

ನಾನು ಮಿರ್ಜಾ ಅವರನ್ನು, "ಈ ಎಮ್ಮೆ ಅಧಿಕಾರಿಗಳಿಗೆ ಕಾಣಿಕೆ ಎಂದ ಕೊಡುವುದರಲ್ಲಿ ಏನು ನಿಮ್ಮ ಹೆಚ್ಚುಗಾರಿಕೆ ಇದೆ?" ಎಂದು ಗದರಿದೆ. ಅದಕ್ಕೆ "ಸ್ವಾಮಿ! ಕಾಲ ಸುಧಾರಿಸಿದೆ. ಈಗ ಬೆಣ್ಣೆ ಹಚ್ಚುವ ಈ ಹಳೆಯ ವಿಧಾನವೂ ಬದಲಿ ಆಗಿದೆ. ಈ ಎಮ್ಮೆ ಕಾಣಿಕೆಯು ಅಪರೋಕ್ಷವಾಗಿ ಬೆಣ್ಣೆ ಹಚ್ಚುವುದೇ ಆಗಿದೆ. ಸ್ವತ ನೀವೇ ಹಿಂಡಿಕೊಂಡು ಹಾಲು ಪಡೆಯಿರಿ ಬೆಣ್ಣೆ ತೆಗೆದು ಹಚ್ಚಿಕೊಳ್ಳಿರಿ ಅಂದ ಹಾಗೆ ಈ ಎಮ್ಮೆ ಕಟ್ಟಿದ್ದು" ಎಂದು ಮಿರ್ಜಾರವರು ಹೇಳಿದರು.

ಮೊದಲನೇ ತಾರೀಖು ಬರುತ್ತಲೂ ಮಿರ್ಜಾಗಿಂತಲೂ ಮೊದಲು, ಅವರಿ ಸಾಲ ಕೊಟ್ಟವರು ಕಛೇರಿಗೆ ಬಂದುಬಿಡುತ್ತಿದ್ದರು. ಮಿರ್ಜಾ ಅವರು, ಬಂದವರನ್ನ ಉಪಚರಿಸುವ ರೀತಿಯೇ ಬಹಳ ಚಾಣಾಕ್ಷತನದ್ದು. ಪಾಪ! ಉಪಚಾರ ಪಡೆದು ಹಣ ಪಡೆಯಲು ಬಂದವರು ತುಟಿಪಿಟಕ್ ಅನ್ನುತ್ತಿರಲಿಲ್ಲ. ಮಿರ್ಜಾ ಅವರು ಮಧು ಮಾತನ್ನಾಡಿ, ಸಾಲ ಕೇಳಬಂದವರಿಗೆ ಹಣ ಕೊಡುವುದಂತೂ ದೂರ ಉಳಿಯಿತು ಇನ್ನಿಷ್ಟು ಸಾಲವನ್ನು ಪಡೆದು, ಅವರನ್ನು ಹಿಂದಿರುಗುಸುತ್ತಿದ್ದರು.

ಇದೇ ಕಾರಣದಿಂದಾಗಿ ಮಿರ್ಜಾ ಅವರಿಗೆ ಸಾಲ ಕೊಟ್ಟವರು ಇನ್ನೊಂದು ಸಲ ಅವರನ್ನು ನೋಡದಿರುವುದೇ ಒಳ್ಳೆಯದೆಂದು ಬಗೆಯುತ್ತಿದ್ದರು. ನಾನೂ ಇದನ್ನ

ತ್ಯಕ್ಷ ನೋಡಿದ್ದೇನೆ. ಮಿರ್ಜಾ ಅವರನ್ನು ರಸ್ತೆಯ ಮೇಲೆ ಎದುರಿಗೆ ಕಂಡೊಡನೆ ಾಲ ಕೊಟ್ಟವರು ಧಡಧಡನೇ ಪಕ್ಕದ ರಸ್ತೆಗೆ ಹೊರಟು, ಮುಖ ತಪ್ಪಿಸಿಕೊಳ್ಳು ದ್ದರು. ನೋಡು ನೋಡುತ್ತಲೇ ಕ್ಷಣಾರ್ಧದಲ್ಲಿ ರಸ್ತೆಯೆಲ್ಲ ಖಾಲೀ ಖಾಲಿ ಕಾಣಿಸು ತ್ತಿತ್ತು. ಈ ಮಾತಿನಿಂದ ಮಿರ್ಜಾ ಅವರಿಗೆ ಸಾಲ ಕೊಟ್ಟವರ ಸಂಖ್ಯೆ ಎಷ್ಟಿರಬಹು ಂಬ ಅಂದಾಜು ತಮಗೆ ಆಗಿರಲಿಕ್ಕೆ ಸಾಕು. ನಾನು, "ಮಿರ್ಜಾ ಅವರೆ! ನೀವು ಸಾಲ ೊಟ್ಟವರದೇ ಒಂದು ಆಯ್ದ ಗುಂಪನ್ನು ಮಾಡಿಕೊಂಡರೆ, ನೀವು ಅಸೆಂಬ್ಲಿ ಸದಸ್ಯ ಾಗುವುದರಲ್ಲಿ ಏನೂ ಸಂಶಯವೇ ಇಲ್ಲ" ಎಂದು ಹೇಳುತ್ತಿದ್ದೆ. ಆದರೆ ಮಿರ್ಜಾ ಅವರಿಗೆ ಕಾರಕೂನಗಿರಿ ರಕ್ತಗತ ಸ್ವಭಾವವೇ ಆಗಿಬಿಟ್ಟಿತ್ತು. ಮಿರ್ಜಾ ನನ್ನನ್ನು ಾಣುತ್ತಲೂ ಆದರಿಸಿ ಬಹಳ ಉಪಚರಿಸುತ್ತಿದ್ದರು. ನನ್ನ ಮೇಲೆ ಬಹಳಷ್ಟು ಹಣವನ್ನು ಖರ್ಚುಮಾಡುತ್ತಿದ್ದರು. ನಾನು, "ಮಿರ್ಜಾ ಅವರೆ! ನೀವು ಕ್ಲಾರ್ಕ್. ಈ ಹಣ ಂಗೇಕೆ ವ್ಯಯ ಮಾಡುತ್ತೀರಿ" ಎಂದು ಕೇಳುತ್ತಿದ್ದೆ.

ಅದಕ್ಕೆ ಅವರು, "ಮಿತ್ರಾ! ನಾನು ಸ್ವತಃ ದುಡಿದುದನ್ನು ನಿಮಗಾಗಿ ಖರ್ಚು ಮಾಡುತ್ತಿಲ್ಲ. ನೀವು ಚಿಂತೆ ಮಾಡಬೇಡಿ. ನನ್ನ ಜೇಬಿಗೆ ಅದರಿಂದೇನೂ ಹಾನಿಯಾಗು ವುದಿಲ್ಲ. ನಾನಂತೂ ಬೇರೆಯವರಿಂದ ಸಾಲ ತರುತ್ತೇನೆ. ಅದನ್ನು ನಿಮ್ಮ ಮೇಲೆ ಖರ್ಚು ಮಾಡುತ್ತೇನೆ. ನನ್ನದೇನು ಹೋಗುತ್ತದೆ! ನಾನು ದೇವರು ಸೃಷ್ಟಿಸಿದ ಒಬ್ಬ ಕಾರಣ ಕರ್ತ. ನನ್ನಿಂದ ಅವರವರ ಅನ್ನ ಅವರವರಿಗೆ ಮುಟ್ಟುತ್ತದೆ. ನನ್ನ ಕೆಲಸ ಒಬ್ಬ ಮಧ್ಯವರ್ತಿಯ ಕರ್ತವ್ಯವನ್ನು ಪೂರೈಸುವುದು ಮಾತ್ರ" ಎಂದು ಹೇಳುತ್ತಿದ್ದರು.

ಮಿರ್ಜಾ ಎರಡನೇ ತಾರೀಖಿನಿಂದಲೇ ತಮ್ಮ ಸಂಗಡಿಗರಿಂದ ಸಾಲ ಕೇಳು ವುದಕ್ಕೆ ಪ್ರಾರಂಭಿಸುತ್ತಿದ್ದರು. ತಿಂಗಳ ಕೊನೆಯ ತಾರೀಖು ಮಿರ್ಜಾ ಅವರಿಗೆ, ಎರಡನೇ ತಾರೀಖಿನಿಂದಲೇ ಮೊದಲಾಗುತ್ತಿತ್ತು. ತಿಂಗಳ ಪ್ರಾರಂಭಿಕ ದಿವಸಗಳೆಲ್ಲ ಅವರ ಪಾಲಿಗೆ ಮೊದಲನೇ ತಾರೀಖಿಗೇನೇ ಮುಗಿದುಹೋಗುತ್ತಿದ್ದವು. ತಿಂಗಳದಲ್ಲಿ ಉಳಿದದ್ದರಲ್ಲಿ ಒಂದೇ ಒಂದು ತಾರೀಖು ಆನಂದದಿಂದ ಕಳೆಯುವುದು. ಅದು ೩೧ ಅಥವಾ ೩೦ನೇ ತಾರೀಖು.

ಮಿರ್ಜಾ ಅವರಿಗೆ ಸಾಲ ಪಡೆಯಲು ಹೊಸ ಹೊಸ ತಂತ್ರಗಳು ಗೊತ್ತಿದ್ದವು. ಅವರು, "ಸಾಲ ಪಡೆಯುವ ರೀತಿ" ಎಂಬ ಬಗ್ಗೆ ಪುಸ್ತಕ ಬರೆದಿದ್ದರೆ, ಜನ ಕ್ಯೂದಲ್ಲಿ ನಿಂತು ಕ್ಷಣಾರ್ಧದಲ್ಲಿ ಪುಸ್ತಕ ಕೊಂಡುಕೊಳ್ಳುತ್ತಿದ್ದರು, ಸಾಲಾ ಕೊಟ್ಟವರಿಗೆ ಒಂದೊಂದು ಪೈಸೆಯನ್ನೂ ತಿರುಗಿಕೊಟ್ಟು ಸಾಲ ತೀರಿಸುವಷ್ಟು ರಾಯಲ್ಟಿ ಅವರಿಗೆ ಸಿಕ್ಕುತ್ತಿತ್ತು.

ಮಿರ್ಜಾ ತಮ್ಮ ಬಾಳಿನುದ್ದಕ್ಕೂ ತಮ್ಮ ಬಢತಿಗಾಗಿ ಪ್ರಯತ್ನಿಸಿದರು. ಅವರ ಅನೇಕ ಸಂಗಡಿಗರು ಬಢತಿ ಪಡೆದು, ಗೆಜೆಟೆಡ್ ಆದರು. ಆದರೆ ಮಿರ್ಜಾಮಾತ್ರ ಯಾವ ಹುದ್ದೆಯ ಮೇಲೆ ನೇಮಕವಾಗಿದ್ದರೋ ಆ ತಮ್ಮ ಹುದ್ದೆಯ ಮೇಲೆ ಪಟ್ಟು ಹಿಡಿದು ಅಚಲವಾಗಿ ನಿಂತರು. ಬಢತಿ ಪಡೆದ ತಮ್ಮ ಇತರ ಸಂಗಡಿಗರ ವಿಷಯಕ್ಕೆ ಬಹಳ ಹೇಯವಾಗಿ ಮಾತನಾಡುತ್ತಿದ್ದರು. ಅವರು ಒಳಗಿಂದೊಳಗೇ ಹೊಟ್ಟೆಕಿಚ್ಚಿನಿಂದ ಕುದಿಯುತ್ತಿದ್ದರು. ಒಂದು ಸಲ ಅವರ ಸಂಗಡಿಗರೊಬ್ಬರಿಗೆ ಗೆಜೆಟೆಡ್ ಹುದ್ದೆಯ

ಮೇಲೆ ಬಢತಿಸಿಕ್ಕಿತು. ವಿಜಾರ್‌ರವರ ಕಣ್ಣುಗಳಲ್ಲಿ ಆ ದೃಶ್ಯ ಈಗಲೂ ಅಚ್ಚಳಿಯದೆ ನಿಂತಿದೆ. ಬಢತಿ ಆದೇಶ ಸಿಕ್ಕುತ್ತಲೂ, ಅವರ ಸಂಗಡಿಗ ಯಾರಿಗೂ ಏನನ್ನು ಹೇಳಲಿಲ್ಲ. ಅವರನ್ನು ವಿಜಾರ್ ಪ್ರಶ್ನಾರ್ಥಕವಾಗಿಯೇ ದಿಟ್ಟಿಸುತ್ತಿದ್ದರು. ಬಢತಿ ಪಡೆದ ಸಂಗಡಿಗರು ತಕ್ಷಣ ತಮ್ಮ ಕುರ್ಚಿಯಿಂದ ಎದ್ದರು. ಬಢತಿ. ಆದೇಶ ಕೈಯಲ್ಲಿ ಹಿಡಿದಿದ್ದರು. ಎಲ್ಲ ನಾನ್‌ಗೆಜೆಟೆಡ್‌ ಸಿಬ್ಬಂದಿಯನ್ನು ತುಚ್ಛ ದೃಷ್ಟಿಯಿಂದ ನೋಡುತ್ತ ರೂಮಿನ ಹೊರಕ್ಕೆ ಬಂದರು. ಮತ್ತು ಪೂರ್ಣ ಬಿಂಕದಿಂದ ಗೆಜೆಟೆಡ್ ಆಫೀಸರ್ಸ್ ಟಾಯಲೆಟ್ ರೂಮಿನೊಳಕ್ಕೆ ಹೋದರು. ಅವರ ಈ ಚಲನೆ ತಾವು ಗೆಜೆಟೆಡ್ ಆಗಿದ್ದಾರೆಂಬ ಘೋಷಣೆಯ ಪ್ರತೀಕವಾಗಿತ್ತು. ವಿಜಾರ್‌ಕೂಡ ಜೀವನಾದ್ಯಂತ ಗೆಜೆಟೆಡ್ ಆಫೀಸರ್ಸ್ ಟಾಯಲೆಟ್ ರೂಮಿನ ಲಾಭ ಪಡೆಯಬೇಕೆಂಬ ಅಭಿಲಾಷೆ ಯನ್ನು ಮನಸ್ಸಿನಲ್ಲಿಯೇ ಬೆಳೆಸುತ್ತ ಬಂದಿದ್ದರು. ಆದರೆ ಕೊನೆಗೆ ಅವರು ಸೇವೆಯಿಂದ ನಿವೃತ್ತರಾಗುವ ಸಮಯ ಬಂದೇಬಿಟ್ಟಿತು. ಅವರು ಸೇವೆಯಿಂದ ನಿವೃತ್ತಿ ಹೊಂದಿದ ದಿನ, ಎಲ್ಲ ರೂಮುಗಳಿಗೂ ಹೋಗಿ ಎಲ್ಲ ಅಧಿಕಾರಿಗಳನ್ನು ಭೇಟಿಯಾದರು. ಕೊನೆಗೆ ತಮ್ಮ ಸೆಕ್ರೆಟರಿಯವರ ರೂಮಿಗೂ ಹೋದರು. ಎಲ್ಲರಿಂದಲೂ ಬೀಳ್ಕೊಂಡು ಕಛೇರಿ ಯಿಂದ ಹೊರಗೆ ಹೊರಡುವಾಗ, ಗೆಜೆಟೆಡ್ ಆಫೀಸರ್ಸ್ ಟಾಯಲೆಟ್ ರೂಮಿನ ಎದುರಿಗೆ ಸ್ವಲ್ಪ ಸಮಯ ನಿಂತರು. ಆಕಸ್ಮಿಕವಾಗಿ ಅವರ ಕಣ್ಣುಗಳಲ್ಲಿ ನೀರು ತುಂಬಿ ಬಂದವು. ಟಾಯಲೆಟ್ ರೂಮಿನತ್ತ ಬಹಳ ದುಃಖಪೂರಿತ ದೃಷ್ಟಿಯನ್ನು ಬೀರಿ ಒಂದು ಸುದೀರ್ಘ ದುಃಖೋದ್ಗಾರ ತೆಗೆದು, ನುಡಿದರು.

"ಬೆಳೆಸಿಕೊಂಡ ಅಭಿಲಾಷೆ, ಕೊನೆಗೂ ಮಣ್ಣುಗೂಡಿತೆ !!!"

ಅನು : ಮಾಧವರಾವ್ ಮುಧೋಳ್

ಕುರಿಯು ತೋಳವನ್ನು ನಂಬುವದಕ್ಕಿಂತ, ತೋಳದ ಹತ್ತಿರ ಹೋಗದಂತೆ ಎಚ್ಚರವಾಗಿರುವದೇ ಲೇಸು.

ನಾಗರಿಕತೆ ಎಂದರೆ ತಾಳ್ಮೆ ಸಹಿಷ್ಣುತೆಗಳ ತವರು. ಹಿಂಸೆ, ಪ್ರತಿ ಹಿಂಸೆಗಳ ಸಮುದ್ರವಲ್ಲ.

ಗಾಂಧೀಜಿ

ಟೈಕೊಬ್ರಾಹೆ ಮತ್ತು ಜಾನ್ ಕೆಪ್ಲರ್

ಡಾ. ಎಚ್. ಸಂಜೀವಯ್ಯ

ಕೋಪರ್ನಿಕಸನ ಸಂಶೋಧನೆಗಳಿಗೆ ತಕ್ಷಣ ಖಗೋಳಶಾಸ್ತ್ರಜ್ಞರ ಸ್ವಯಂಪ್ರೇರಿತ ಸ್ವೀಕಾರ ದೊರೆಯಲಿಲ್ಲ. ಅವರು ಆ ಸಂಶೋಧನೆಗಳು ಲೆಕ್ಕಾಚಾರಗಳನ್ನು ಸರಳಗೊಳಿಸುವ ಗಣಿತ ಸಾಧನಗಳೆಂದೇ ಭಾವಿಸಿದರು. ನಿಸ್ಪೃಷ್ಟ ಅಳತೆಗಳಿಗೆ ಹೆಸರಾಗಿದ್ದ ಟೈಕೊಬ್ರಾಹೆ ಕೂಡ ಇದಕ್ಕೆ ಹೊರತಾಗಿರಲಿಲ್ಲ. ಅವನು ಟಾಲೆಮಿ ಮತ್ತು ಕೋಪರ್ನಿಕಸರ ವ್ಯವಸ್ಥೆಗಳ ನಡುವಿನ ಸ್ಥಾನದಲ್ಲಿ ನಿಂತು, ಭೂಮಿ ಸ್ಥಾಯಿಯಾಗಿದೆಯೆಂದೂ, ಸೂರ್ಯ ಚಂದ್ರ ಅದರ ಸುತ್ತ ತಿರುಗುತ್ತವೆಂದೂ ಉಳಿದ ಗ್ರಹಗಳು ಸೂರ್ಯನ ಸುತ್ತ ತಿರುಗುತ್ತವೆಂದೂ ತಿಳಿಸಿದ. ವಿಪರ್ಯಾಸವೆಂದರೆ, ಈ ವಿಶ್ವ ಚಿತ್ರವನ್ನು ಭದ್ರಗೊಳಿಸಲು ಅವನು ಮಾಡಿದ ಖಗೋಳ ಕಾಯಗಳ ಸ್ಥಾನ ನಿರ್ದೇಶಕ ಅಳತೆಗಳು ಕೋಪರ್ನಿಕಸನ ಸೂರ್ಯ ಕೇಂದ್ರ ಸಿದ್ಧಾಂತದ ಮರುಸ್ಥಾಪನೆಗೆ ಅವಕಾಶ ಮಾಡಿಕೊಟ್ಟದ್ದೇ ಅಲ್ಲದೆ ಪರಿಪೂರ್ಣ ಆಕೃತಿಯಾದ ವೃತ್ತವನ್ನೂ ಭಗ್ನಗೊಳಿಸಿದವು.

ಟೈಕೊಬ್ರಾಹೆಯ ಪೂರ್ವಜರು ಸ್ವೀಡನ್ ಮೂಲದವರು; ಅವರು ಅದೃಷ್ಟವನ್ನು ಅರಸಿಕೊಂಡು ಡೆನ್ಮಾರ್ಕಿನ ಸ್ಕ್ಯಾನಿ ಪ್ರಾಂತದ ನಡ್‌ಸ್ಟ್ರಪ್ಪಿನಲ್ಲಿ ನೆಲೆಸಿದ್ದರು. ಅಲ್ಲಿ ಬ್ರಾಹೆ ಜನಿಸಿದ್ದು ೧೪-೧೨-೧೫೪೬ರಂದು. ಸರ್ಕಾರಿ ಸೇವೆಗೆ ತರಬೇತಿಗೊಳಿಸುವ ಉದ್ದೇಶ್ಯದಿಂದ ಹಿರಿಯರು ಅವನನ್ನು ೧೩ ವರ್ಷ ತುಂಬುತ್ತಲೆ ಕೋಪನ್‌ಹೇಗನ್ ವಿಶ್ವವಿದ್ಯಾಲಯಕ್ಕೆ ಸೇರಿಸಿದರು. ಅಲ್ಲಿ ಅವನು ಲ್ಯಾಟಿನ್ ಭಾಷೆಯ ಅಧ್ಯಯನದಲ್ಲಿ ವಿಶೇಷ ಆಸಕ್ತಿಯನ್ನು ತೋರಿಸಿದ. ಆದರೆ ಆಗ ಸಂಭವಿಸಿದ ಸೂರ್ಯ ಗ್ರಹಣ ಅವನನ್ನು ಖಗೋಳಶಾಸ್ತ್ರದ ಕಡೆಗೆ ತಿರುಗಿಸಿತು. ಅವನ ಸೋದರ ಮಾವ ಸ್ಟೀನ್ ಬಿಲ್ಲೆ ನಂತರ ಅವನನ್ನು ನ್ಯಾಯ ಶಾಸ್ತ್ರದ ವ್ಯಾಸಂಗಕ್ಕಾಗಿ ಲೀಪ್‌ಜಿಗ್‌ಗೆ ಕಳುಹಿಸಿದ. ನ್ಯಾಯ

ಶಾಸ್ತ್ರ ಅವನ ಆಸಕ್ತಿಯು ನೆಲೆಯಾಗಲಿಲ್ಲ. ಅವನು ನಕ್ಷತ್ರ ವೀಕ್ಷಣೆಯಲ್ಲಿ ಮಗ್ನನಾದ. ೧೫೬೩ರ ಸುಮಾರಿನಲ್ಲಿ ಅವನು ಹಿಂದಿನ ನಕ್ಷತ್ರಗಳ ಪಟ್ಟಿಗಳಲ್ಲಿದ್ದ ತಪ್ಪುಗಳನ್ನು ತಿದ್ದಿದ.

೧೫೭೧ರಲ್ಲಿ ಸ್ಟೇನೊಬೆಲ್ಲೆ ಸೋದರಳಿಯನಿಗೆ ತನ್ನ ಹೆರಿಟ್ಜವಾಡ್ ಕೋಟೆ ಮನೆಯಲ್ಲಿ ಒಂದು ವೇದಶಾಲೆಯನ್ನು ಸ್ಥಾಪಿಸಿಕೊಳ್ಳಲು ಅನುಮತಿ ಕೊಟ್ಟ. ಅಲ್ಲಿ ಬ್ರಾಹೆ ೧೧-೧೧-೧೫೭೨ರ ರಾತ್ರಿ ಕ್ಯಾಸಿಯೋಪಿಯ ನಕ್ಷತ್ರ ಪುಂಜದಲ್ಲಿ ಒಂದು ಹೊಸ ನಕ್ಷತ್ರವನ್ನು ನೋಡಿದ. ಹೊಸ ನಕ್ಷತ್ರದ ವೀಕ್ಷಣೆಯನ್ನು ಅವನು ಡಿನೊವಸ್ಟೆಲ್ಲ ಪತ್ರಿಕೆಯಲ್ಲಿ ೧೫೭೩ರಲ್ಲಿ ಪ್ರಕಟಿಸಿದ. ಈ ನಕ್ಷತ್ರ ದೈನಂದಿನ ಲಂಬನವನ್ನು ತೋರಿಸದೆ ಇದ್ದುದರಿಂದ ಅದು ಚಂದ್ರನಿಗಿಂತ ಬಹಳ ದೂರದಲ್ಲಿದೆ ಎಂದು ಅವನು ತಿಳಿಸಿದ. [ಭೂಕೇಂದ್ರದಿಂದ ನೋಡಿದಾಗ ಕಾಣುವ ಖಗೋಳ ಕಾಯದ ದಿಕ್ಕಿಗು ಭೂಮಿಯ ಮೇಲೆ ನಿಂತು ನೋಡಿದಾಗ ಅದು ಕಾಣುವ ದಿಕ್ಕಿಗು ನಡುವೆ ಇರುವ ಕೋನಕ್ಕೆ ಲಂಬನ ಎಂದು ಹೆಸರು. ಭೂಮಿ ಮೇಲಿಂದ ನೋಡಿದ ಕಾಯ ಬಹಳ ದೂರದಲ್ಲಿದ್ದರೆ ಅದರ ಲಂಬನ ಸೊನ್ನೆಯಾಗಿರುತ್ತದೆ]. ಇದು ಚಾಂದ್ರಗೋಳದಿಂದ ಹೊರಗಿರುವ ಕಾಯಗಳು ಬದಲಾಗದ ಚೈತನ್ಯದಿಂದ ಆಗಿವೆ ಎಂಬ ಅರಿಸ್ಟಾಟಲನ ಅಭಿಪ್ರಾಯವನ್ನು ಅಳಿಸಿಹಾಕಿತು. ಕ್ಯಾಸಿಯೋಪಿಯ ನಕ್ಷತ್ರ ಪುಂಜದಲ್ಲಿ ಒಂದು ಹೊಸ ತಾರೆ ಉದಿಸಿತ್ತು !

೧೫೭೪ರಲ್ಲಿ ರಾಜಾಜ್ಞೆಯನ್ನು ಹೊತ್ತು ಬ್ರಾಹೆ ಕೋಪನ್‌ಹೇಗನ್ನಿನಲ್ಲಿ ಉಪನ್ಯಾಸಗಳನ್ನು ಕೊಟ್ಟ. ಇದಕ್ಕೆ ಹಿಂದೆ ಅವನು ಒಂದು ರೈತಾಪಿ ಹುಡುಗಿಯನ್ನು ಮದುವೆಯಾಗಿದ್ದ. ಮುಂದಿನ ವರ್ಷ ಅವನು ಜರ್ಮನಿ ಮತ್ತು ಇಟಲಿ ದೇಶಗಳಿಗೆ ಭೇಟಿಯಿತ್ತ. ಹಿಂತಿರುಗಿದ ಮೇಲೆ ಅವನು ಎರಡನೆ ಫ್ರೆಡರಿಕ್ಕನಿಂದ ಕೋಪನ್ ಹೇಗನ್ನಿಗೆ ಸಮೀಪದ ಹೇವನ್ ದ್ವೀಪವನ್ನು ದತ್ತಿಯಾಗಿ ಪಡೆದ. ಅಲ್ಲಿ ಒಂದು ವೇದ ಶಾಲೆಯನ್ನು ಸ್ಥಾಪಿಸಲು ಅವನು ಸಾಕಷ್ಟು ಧನ ಸಹಾಯವನ್ನೂ ಪಡೆದ. ಇದಕ್ಕೆ ಪ್ರತಿಯಾಗಿ ಅವನು ರಾಜನ ಕುಟುಂಬದವರ ಜಾತಕಗಳನ್ನು ಬರೆಯುವ ಮತ್ತು ಪಂಚಾಂಗಗಳನ್ನು ರಚಿಸುವ ಕಾರ್ಯವನ್ನು ಕೈಕೊಳ್ಳಬೇಕಾಯಿತು. ಹೇವನ್ ದ್ವೀಪ ದಲ್ಲಿ ಅವನು ಎರಡು ವೇದಶಾಲೆಗಳನ್ನು ಸ್ಥಾಪಿಸಿದ ; ಒಂದರ ಹೆಸರು ಆಕಾಶಕೋಟೆ (uraniborg) ಇನ್ನೊಂದರ ಹೆಸರು ನಕ್ಷತ್ರಕೋಟೆ (stellaborg), ೧೫೭೨ರಲ್ಲಿ ಕಾಣಿಸಿಕೊಂಡ ಹೊಸ ನಕ್ಷತ್ರ ಅವನಲ್ಲಿ ನಕ್ಷತ್ರಗಳ ನಿಷ್ಕೃಷ್ಟವಾದ ಪಟ್ಟಿಯನ್ನು ತಯಾರಿಸುವ ಇಚ್ಛೆಯನ್ನು ನಟ್ಟಿತ್ತು. ಈ ಕೆಲಸವನ್ನು ಅವನು ಮುಂದಿನ ೨೦ ವರ್ಷಗಳ ಕಾಲ ಅತಿ ಶ್ರದ್ಧೆಯಿಂದ ಮಾಡಿದ. ೧೫೯೬ರಲ್ಲಿ ಫ್ರೆಡರಿಕ್ಕನನ್ನು ಪದಚ್ಯುತಿ ಗೊಳಿಸಿ ನಾಲ್ಕನೆ ಕ್ರಿಶ್ಚಿಯನ್ ಅಧಿಕಾರಕ್ಕೆ ಬಂದ. ಬ್ರಾಹೆಗೆ ಕ್ರಿಶ್ಚಿಯನ್ನನ ಬೆಂಬಲ ಸಿಗಲಿಲ್ಲ. ಅವನು ಹೇವನ್ ದ್ವೀಪವನ್ನು ಬಿಟ್ಟು ಪ್ರೇಗಿಗೆ ಬಂದು ನೆಲೆಸಿದ. ಅಲ್ಲಿ ಅವನಿಗೆ ಚಕ್ರವರ್ತಿ ಎರಡನೆ ರುಡಾಲ್ಫನ ಆಶ್ರಯ ಸಿಕ್ಕಿತು.

ಟೈಕೊಬ್ರಾಹೆ ಖಗೋಳ ಕಾಯಗಳ ವೀಕ್ಷಣೆಗೆ ಬೇಕಾದ ಉತ್ಕೃಷ್ಟ ಸಾಧನ ಗಳನ್ನು ಹೊಂದಿದ್ದ. ಅವನು ದಾಖಲಿಸಿದ ಅಳತೆಗಳೆಲ್ಲಾ ಕರಾರುವಾಕ್ಕಾಗಿದ್ದವು.

ವಾಯುಮಂಡಲದಲ್ಲಿ ಬೆಳಕಿನ ದೂಲಗಳು ಅನುಭವಿಸುವ ವಕ್ರೀಭವನದಿಂದ ಅಳತೆಗಳಲ್ಲಿ ಕಾಣಿಸಿಕೊಳ್ಳುವ ದೋಷಗಳನ್ನು ತೋರಿಸಿ ಅವುಗಳ ನಿವಾರಣೆಯ ಉಪಾಯವನ್ನು ಅವನು ಸೂಚಿಸಿದ. ಇದಲ್ಲದೆ ಅವನು ಅಳತೆ ಉಪಕರಣಗಳಲ್ಲಿರುವ ದೋಷಗಳನ್ನು ನಿವಾರಿಸಿಕೊಳ್ಳುವ ಮತ್ತು ಅಡ್ಡಾದಿಡ್ಡಿ ದೋಷಗಳ ಸರಾಸರಿಯನ್ನು ಗಣಿಸುವ ವಿಧಾನಗಳನ್ನೂ ತೋರಿಸಿದ.

೧೬೦೦ ರ ಜನವರಿಯಲ್ಲಿ ಕೆಪ್ಲರ್ ಪ್ರೇಗಿಗೆ ಬಂದು ಅವನನ್ನು ಕೂಡಿಕೊಂಡ. ಆಗ ಶಿಷ್ಯನಿಗೆ ೨೮ ವರ್ಷ ಗುರುವಿಗೆ ೫೪ ವರ್ಷ. ಟೈಕೊಬ್ರಾಹೆ ತನ್ನ ಎಲ್ಲ ವಿದ್ವತ್ತನ್ನೂ ಕೆಪ್ಲರನಿಗೆ ಧಾರೆ ಎರೆದ. ಅಲ್ಲಿಂದ ಮುಂದೆ ಅವನು ಹೆಚ್ಚು ಕಾಲ ಬದುಕಲಿಲ್ಲ; ೧೪-೧೦-೧೬೦೧ರಂದು ನಿಧನನಾದ. ಅವನು ಬಡವರಿಗೆ ಉಚಿತವಾಗಿ ಔಷಧಿಯನ್ನು ಕೊಡುತ್ತಿದ್ದ.

ಟೈಕೊಬ್ರಾಹೆ ನಾಲ್ಕು ಗ್ರಂಥಗಳನ್ನು ರಚಿಸಿದ್ದ. ಅವುಗಳನ್ನು ಕೆಪ್ಲರ್ ಸಂಪಾದನೆ ಮಾಡಿದ. ಮೊದಲನೆಯ ಗ್ರಂಥದಲ್ಲಿ ಸೂರ್ಯ ಮತ್ತು ಚಂದ್ರರ ವಿವರವಿದೆ. ಇದರ ಜೊತೆಗೆ ೭೭೭ ಸ್ಥಿರ ನಕ್ಷತ್ರಗಳ ಸ್ಥಾನಗಳ ಉಲ್ಲೇಖವಿದೆ. ೧೬೨೭ ರಲ್ಲಿ ಕೆಪ್ಲರ್ ರುಡಾಲ್ಫೈನ್ ಪಟ್ಟಿಯನ್ನು ಪ್ರಕಟಿಸಿದಾಗ ಈ ನಕ್ಷತ್ರಗಳ ಸಂಖ್ಯೆ ೧೦೦೫ನ್ನು ಮುಟ್ಟಿತು. ೧೫೮೮ರಲ್ಲಿ ಖಾಸಗಿಯಾಗಿ ಮುದ್ರಿತವಾದ ಎರಡನೆ ಗ್ರಂಥದಲ್ಲಿ ೧೫೭೭ರ ಧೂಮಕೇತದ ಪ್ರಸ್ತಾಪವಿದೆ. ಇದು ಭೂಮಿಗೆ ಹೊರಗಿನ ಪ್ರಕೃತಿ ಸಂಗತಿಯೆಂದು ಅವನು ಶ್ರುತಪಡಿಸಿದ್ದ. ಗೆಲಿಲಿಯೊಗೆ ಪತ್ರ ಬರೆದು ಬ್ರಾಹೆ ಅವನನ್ನು ಕೋಪರ್ನಿಕನ್ ವ್ಯವಸ್ಥೆಯಿಂದ ವಿಮುಖಗೊಳಿಸಲು ಪ್ರಯತ್ನಿಸಿದ. ಆದರೆ ಗೆಲಿಲಿಯೊ ತನ್ನ ನಿಲುವನ್ನು ಬಿಡಲಿಲ್ಲ. ಅವನು ಟೈಕೊಬ್ರಾಹೆಯನ್ನು ತನ್ನ ಎರಡು ಪ್ರಮುಖ ವ್ಯವಸ್ಥೆಯ ಸಂವಾದದಲ್ಲಿ ಅರಿಸ್ಟಾಟಲ್ ಮತ್ತು ಟಾಲೆಮಿಯ ಗುಂಪಿಗೆ ಸೇರಿಸಿ ಗೇಲಿ ಮಾಡಿದ. ಉಳಿದ ಎರಡು ಗ್ರಂಥಗಳಲ್ಲಿ ಟೈಕೊಬ್ರಾಹೆ ತಾನು ಬಳಸಿದ ಉಪಕರಣಗಳ ವಿವರಣೆಯನ್ನು ಕೊಟ್ಟಿದ್ದಾನೆ.

ಕೋಪರ್ನಿಕಸ್ ಕ್ರಾಂತಿಗೆ ಅಂತಿಮ ರೂಪ ಕೊಟ್ಟವನು ಕೆಪ್ಲರ್. ಕೆಪ್ಲರ್ ಮತ್ತು ಕೋಪರ್ನಿಕಸ್ ನಡುವೆ ಅನೇಕ ಸಾಮ್ಯಗಳಿವೆ. ಇಬ್ಬರೂ ಗಣಿತ ಚತುರರು. ದತ್ತಾಂಶಗಳ ವಿಶ್ಲೇಷಣೆಯಲ್ಲಿ ರಾಜಿ ಮಾಡಿಕೊಳ್ಳದ ಗಡಸು ನಿಲುವು ಅವರದು. ತಾಳ್ಮೆಯನ್ನು ಕಳೆದುಕೊಳ್ಳದೆ ನಿರಂತರವಾಗಿ ದುಡಿಯುವ ಪ್ರಕೃತಿ ಅವರದು. ಈ ಸಂಯೋಗವೆ ಅವರ ಗೆಲುವಿನ ಗುಟ್ಟು.

ಕೋಪರ್ನಿಕಸನ ಸಾಧನೆ ಅದ್ಭುತವಾದದ್ದು. ಅದರಲ್ಲಿ ಕೆಪ್ಲರನ ಆವಿಷ್ಕಾರ ಅಂತರ್ಗತವಾಗಿತ್ತು. ಅದನ್ನು ಹೊರಕ್ಕೆ ತಂದವು ಟೈಕೊಬ್ರಾಹೆಯ ನಿಷ್ಕೃಷ್ಟ ಅಳತೆಗಳು; ನಿಯಮಗಳನ್ನು ಅಚ್ಚಿಗೆ ಹಾಕಿದಂತಿದ್ದವು ಅವು.

೨೭-೧೨-೧೫೭೧ರಂದು ಜರ್ಮನಿಯ ವುರ್ಟೆಂಬರ್ಗಿನಲ್ಲಿ ಜಾನ್ ಕೆಪ್ಲರ್ ಜನಿಸಿದ. ಅವನ ತಂದೆ ಹೆನ್ರಿಕೆಪ್ಲರ್ ಒಬ್ಬ ನಿರ್ಲಕ್ಷ್ಯ ಶ್ರೀಮಂತ ಸೈನಿಕ; ಅವನ ತಾಯಿ ಕ್ಯಾತರೀನ್ ಗಬ್ಲ್ಮನ್ ಶಿಸ್ತು ಮೀರಿದ ಅವಿದ್ಯಾವಂತೆ. ನೀತಿಗೆಟ್ಟ ಈ ಸಂಸಾರದ ಹಿರಿಯ ಮಗ ಕೆಪ್ಲರ್. ಅವನು ನಾಲ್ಕು ವರ್ಷದವನಿದ್ದಾಗ ಸಿಡುಬು

ರೋಗಕ್ಕೆ ಗುರಿಯಾದ. ಇದರಿಂದ ಅವನ ಕೈಗಳು ಊನಗೊಂಡವು ಮತ್ತು ಅವನ ದೃಷ್ಟಿ ಶಾಶ್ವತವಾಗಿ ದುರ್ಬಲವಾಯಿತು. ೧೫೭೭ ರಲ್ಲಿ ಅವನು ಲಿಯೊನ್ಬರ್ಗ್ ಶಾಲೆಯನ್ನು ಸೇರಿ ಓದು ಪ್ರಾರಂಭಿಸಿದ. ಅವನು ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದು ಎಲ್ಲ ಹಂತದಲ್ಲೂ ವಿದ್ಯಾರ್ಥಿವೇತನಕ್ಕೆ ಅರ್ಹತೆ ಪಡೆಯುತ್ತಿದ್ದ. ಅಲ್ಲಿಂದ ಮುಂದೆ ಅವನ ವ್ಯಾಸಂಗ ಆಡೆಲ್ಬರ್ಗ್ ಮತ್ತು ಮಾಲ್ಬ್ರಾನ್ ಗುರುಮಠಗಳಲ್ಲಿ ನಡೆಯಿತು. ೧೫೮೮ ರಲ್ಲಿ ಸ್ನಾತಕ ಪದವಿಗಾಗಿ ನಡೆದ ಅತ್ಯುತ್ತಮ ಪರೀಕ್ಷೆ ಅವನಿಗೆ ಟ್ಯೂಬಿಂಗೆನ್ ವಿಶ್ವವಿದ್ಯಾಲಯಕ್ಕೆ ಪ್ರವೇಶವನ್ನು ದೊರಕಿಸಿಕೊಟ್ಟಿತು. ಅಲ್ಲಿ ಅವನು ಖಾಸಗಿಯಾಗಿ ಅವನ ಉಪಾಧ್ಯಾಯ ಮೈಕೆಲ್ ಮ್ಯಾಸಲಿನಿಯಿಂದ ಕೊಪರ್ನಿಕಸನ ಮೂಲತತ್ತ್ವಗಳನ್ನು ಕಲಿತುಕೊಂಡ. ಮ್ಯಾಸಲಿನ್ ಮತ್ತು ಕೆಪ್ಲರ್ ನಡುವಿನ ಸ್ನೇಹ ಅವರು ಬದುಕಿರುವವರೆಗೂ ಉಳಿದಿತ್ತು.

೧೫೯೪ರ ಆದಿಭಾಗದಲ್ಲಿ ಕೆಪ್ಲರ್ ಗ್ರ್ಯಾಟ್ಜ಼ ನಗರದಲ್ಲಿ ತೆರವಾಗಿದ್ದ ವಿಜ್ಞಾನ ಪೀಠಕ್ಕೆ ನೇಮಕಗೊಂಡ. ಅಲ್ಲಿ ಅವನು ಪಾಠ ಪ್ರವಚನ, ಸಂಶೋಧನೆ ಇವುಗಳ ಜೊತೆಗೆ ಜ್ಯೋತಿಷ್ಯ ಹೇಳುತ್ತಿದ್ದ, ಜಾತಕ ಬರೆಯುತ್ತಿದ್ದ. ೧೫೯೬ ರಲ್ಲಿ ಪ್ರಕಟವಾದ ಅವನ ಸಂಶೋಧನ ಲೇಖನ ಅವನಿಗೆ ಟೈಕೊಬ್ರಾಹೆ ಮತ್ತು ಗೆಲಿಲಿಯೊ ಅವರ ಸ್ನೇಹವನ್ನು ಸಂಪಾದಿಸಿಕೊಟ್ಟಿತು. ಮರುವರ್ಷ ಅವನು ವಿಪುಲ ಸಂಪತ್ತಿಗೆ ಉತ್ತರಾಧಿಕಾರಿಣಿಯಾಗಿದ್ದ ಬಾರ್ಬರ ವಾನ್ ಮ್ಯೂಲಕಳನ್ನು ಮದುವೆಯಾದ.

ಮತೀಯ ಕ್ಷೋಭೆಯಿಂದಾಗಿ ಕೆಪ್ಲರ್ ಹೆಚ್ಚು ಕಾಲ ಗ್ರ್ಯಾಟ್ಜ಼ನಲ್ಲಿ ಉಳಿಯಲಾಗಲಿಲ್ಲ. ೧೬೦೦ರ ಜನವರಿ ತಿಂಗಳಲ್ಲಿ ಟೈಕೊಬ್ರಾಹೆಯ ಆಹ್ವಾನವನ್ನು ಸ್ವೀಕರಿಸಿ ಪ್ರೇಗ್ ನಗರವನ್ನು ಸೇರಿದ. ಬ್ರಾಹೆ ತೀರಿಕೊಂಡ ಮೇಲೆ ಕೆಪ್ಲರ್ ಅವನ ಎಲ್ಲ ಸಂಶೋಧನ ಫಲಗಳ ಸಹಜ ವಾರಸುದಾರನಾದ. ಚಕ್ರವರ್ತಿ ಅವನನ್ನು ಬ್ರಾಹೆಯ ಜಾಗದಲ್ಲಿ ಸಾಮ್ರಾಜ್ಯ ಗಣಿತಜ್ಞನನ್ನಾಗಿ ನೇಮಿಸಿದ. ಇಲ್ಲೂ ಅವನು ಚಕ್ರವರ್ತಿಯ, ಅವನ ಬಳಗದವರ ಮತ್ತು ಶ್ರೀಮಂತರ ಜಾತಕಗಳನ್ನು ಬರೆಯುವ ಕೆಲಸ ಮುಂದುವರಿಸಿದ. ಈ ಕೆಲಸ ಅವನು ಮಾಡುತ್ತಿದ್ದದ್ದು ಅವನಿಗೆ ಜಾತಕಗಳಲ್ಲಿ ನಂಬಿಕೆ ಇದ್ದುದ್ದರಿಂದ ಎಂದು ನಾವು ತಿಳಿಯಬೇಕಾಗಿಲ್ಲ.

ಟೈಕೊಬ್ರಾಹೆಗೆ ಮೊದಲು ಪರಿಚಯವಾದ ಸಮಯದಿಂದಲೆ ಮಂಗಳ ಗ್ರಹದ ವಿಚಿತ್ರ ವರ್ತನೆ ಕೆಪ್ಲರನ ಗಮನವನ್ನು ಸೆಳೆದಿತ್ತು. ಈಗ ಖಗೋಳ ಕಾಯಗಳ ಸ್ಥಾನ ನಿರ್ದೇಶಕಗಳ ಮಾಹಿತಿಯೆಲ್ಲಾ ಅವನ ಮುಂದಿತ್ತು. ವೃತ್ತ ಕಕ್ಷೆಯ ಕೇಂದ್ರದಲ್ಲಿ ಸೂರ್ಯನನ್ನು ಉಳಿಸಿಕೊಂಡರೆ ಮಂಗಳದ ಚಲನೆಯನ್ನು ಸುಸಂಗತವಾಗಿ ವಿವರಿಸಲು ಆಗುವುದೇ ಇಲ್ಲ ಎಂದು ಅವನಿಗೆ ಖಾತ್ರಿಯಾಯಿತು. ಸೂರ್ಯನನ್ನು ಅವನು ಕೇಂದ್ರದಿಂದ ವ್ಯಾಸದ ಮೇಲೆ ತುಸು ಎಡಕ್ಕೆ ಸರಿಸಿದ. ಚಿತ್ರ ೧ ರಲ್ಲಿ ಇದನ್ನು ತೋರಿಸಿದೆ. ಈಗ S ಸೂರ್ಯನ ಸ್ಥಾನ. ಆ ಸ್ಥಾನವನ್ನು ಪರಾಮರ್ಶ ಬಿಂದುವಾಗಿಟ್ಟುಕೊಂಡು ಕೆಪ್ಲರ್ ವೃತ್ತವನ್ನು ಸಮಸಲಿಗಳ ಖಂಡಗಳಾಗಿ ವಿಭಾಗಿಸಿದ. SAB, SCD, SEF ಮತ್ತು SGH ಇಂಥ ಖಂಡಗಳು. ಹಿಂದಿನ ದತ್ತಾಂಶಗಳಿಂದ ಗ್ರಹವು A ಯಿಂದ B ಗೆ, C ಯಿಂದ D ಗೆ, E ಯಿಂದ F ಗೆ ಮತ್ತು G ಯಿಂದ H ಗೆ


ಹೋಗಲು ತೆಗೆದುಕೊಳ್ಳುವ ಕಾಲ ಒಂದೆ ಎಂಬುದು ಅವನಿಗೆ ತಿಳಿಯಿತು. ಅಂದರೆ ಮಂಗಳ ಸೂರ್ಯನನ್ನು ಕುರಿತಂತೆ ಸಮ ಅವಧಿಯಲ್ಲಿ ಸಮ ಸಲೆಯನ್ನು ಹಾಯುತ್ತದೆ ಎಂದಾಯಿತು. ಈ ವಿಚಾರ ಹೊಳೆದಾಗ ಕೆಪ್ಲರನಿಗಾದ ಆನಂದಕ್ಕೆ ಪಾರವೆ ಇರಲಿಲ್ಲ.

ಮಂಗಳಕ್ಕೆ ಸರಿಹೊಂದಿದಂತೆ ಕಂಡ ವೃತ್ತ ಕಕ್ಷೆ ಉಳಿದ ಗ್ರಹಗಳ ವಿಚಾರದಲ್ಲಿ ಸರಿಹೊಂದಲಿಲ್ಲ. ಪರೀಕ್ಷೆಗಾಗಿ ಕೆಪ್ಲರ್ ವೃತ್ತವನ್ನು ಬಿಟ್ಟು ದೀರ್ಘ ವೃತ್ತವನ್ನು ಆರಿಸಿಕೊಂಡ. ಸೂರ್ಯನನ್ನು ದೀರ್ಘ ವೃತ್ತದ ಒಂದು ನಾಭಿಯಲ್ಲಿ ಸ್ಥಾಪಿಸಿ ಆ ಕಕ್ಷೆಯಲ್ಲಿ ಸುತ್ತುವ ಗ್ರಹ ಸಮಸಲೆ ನಿಯಮವನ್ನು ಪಾಲಿಸುತ್ತದೆಯೊ ಇಲ್ಲವೊ ಎಂಬುದನ್ನು ನೋಡಿದ. ಎಲ್ಲ ಗ್ರಹಗಳೂ ಈ ನಿಯಮದ ತೆಕ್ಕೆಗೆ ಬರುವುದು ಕಂಡಿತು. ಈ ವಿಚಾರವನ್ನು ಅವನು ಎರಡು ನಿಯಮಗಳ ರೂಪದಲ್ಲಿ ೧೬೦೯ರ ಅಸ್ಟ್ರೋನೋಮಿಯ ನೋವದಲ್ಲಿ ಪ್ರಕಟಿಸಿದ:


೧. ಪ್ರತಿಯೊಂದು ಗ್ರಹವೂ ಸೂರ್ಯ ಒಂದು ನಾಭಿಯಲ್ಲಿರುವ ದೀರ್ಘ ವೃತ್ತ ಕಕ್ಷೆಯಲ್ಲಿ ಚಲಿಸುತ್ತದೆ.

೨. ಪ್ರತಿಯೊಂದು ಗ್ರಹವೂ ಸೂರ್ಯ ಪರಾಮರ್ಶ ಬಿಂದುವಾಗಿರುವಂತೆ ಸಮ ಅವಧಿಯಲ್ಲಿ ಸಮ ಸಲೆಯನ್ನು ಹಾಯುತ್ತದೆ.

ಚಿತ್ರ ೨ರಲ್ಲಿ ಈ ನಿಯಮದ ನಿರೂಪಣೆಯಿದೆ.



ಚಿತ್ರ ೧



ಚಿತ್ರ ೨

ಚಿತ್ರ ೧: O ವೃತ್ತದ ಕೇಂದ್ರ: S ಸೂರ್ಯನ ಸ್ಥಾನ. SAB, SCD, SEF, SGH ಇತ್ಯಾದಿ ಸಮಸಲೆಯ ಖಂಡಗಳು.

ಚಿತ್ರ ೨: S ಮತ್ತು S' ದೀರ್ಘ ವೃತ್ತದ ನಾಭಿಗಳು. SA'E ಮತ್ತು SE'A ಸಮ ಸಲೆಯ ಖಂಡಗಳು.

ಗೆಲಿಲಿಯೊ ನಿರ್ಮಿಸಿದ್ದಂಥ ದೂರದರ್ಶಕವನ್ನು ಉಪಯೋಗಿಸಿಕೊಂಡು ಕೆಪ್ಲರ್ ಖಗೋಳ ಕಾಯಗಳ ವೀಕ್ಷಣೆ ನಡೆಸಿದ. ಇದೂ ಅಲ್ಲದೆ ಎರಡು ಪೀನ ಮಸೂರಗಳನ್ನು ಅಳವಡಿಸಿ ಖಗೋಳ ದೂರದರ್ಶಕವನ್ನು ತಯಾರಿಸುವುದು ಹೇಗೆಂದು ತಿಳಿಸಿದ. ಅಂಥ ಒಂದು ದೂರದರ್ಶಕವನ್ನು ಸ್ಕೀನರ್ ಕೆಲವು ವರ್ಷಗಳ ನಂತರ ತಯಾರಿಸಿದ. ದೋಷಮುಕ್ತವಾದ ಮಸೂರ ವ್ಯವಸ್ಥೆಯನ್ನು ನಿರ್ಮಿಸುವುದು ಅಸಾಧ್ಯವೆಂದು ಕೆಪ್ಲರ್ ಬಗೆದಿದ್ದ. ಇದೇ ಸಮಯದಲ್ಲಿ ಅವನು ವಕ್ರೀಭವನದ ನಿಯಮಗಳನ್ನು ಕುರಿತು ಆಲೋಚಿಸುತ್ತಿದ್ದ.

೧೬೧೧ರಲ್ಲಿ ಬಾರ್ಬರ ಮೃತಳಾದಳು. ಎರಡುವರ್ಷ ಕಳೆದ ಮೇಲೆ ಕೆಪ್ಲರ್ ಸೂಸಾನ್ ರೂಟ್ಲಿಂಗರ್ ಎಂಬ ಅನಾಥ ಹುಡುಗಿಯನ್ನು ಮದುವೆಯಾದ. ಗ್ರಹಗಳು ಪಾಲಿಸುವ ನಿಯಮಗಳ ಬಗ್ಗೆ ಯೋಚಿಸುವುದು ನಡದೇ ಇತ್ತು. ಗುರುಗ್ರಹದ ಉಪಗ್ರಹಗಳೂ ಅವನ ಎರಡು ನಿಯಮಗಳ ಪ್ರಕಾರವೆ ಚಲಿಸುತ್ತವೆಂಬುದನ್ನು ಅವನು ಖಾತ್ರಿ ಮಾಡಿಕೊಂಡ. ೧೬೧೯ ರಲ್ಲಿ ಅವನು ತನ್ನ ಮೂರನೆ ನಿಯಮವನ್ನು ಪ್ರಕಟಿಸಿದ. ಇದು ಗ್ರಹಕ್ಕು ಸೂರ್ಯನಿಗು ನಡುವೆ ಇರುವ ಸರಾಸರಿ ದೂರ ಮತ್ತು ಗ್ರಹ ಸೂರ್ಯನನ್ನು ಒಂದು ಸುತ್ತು ಬರಲು ತೆಗೆದುಕೊಳ್ಳುವ ಕಾಲ ಇವುಗಳ ನಡುವಿನ ಸಂಬಂಧವನ್ನು ತಿಳಿಸುತ್ತದೆ.

೩. ಗ್ರಹದ ವರ್ಷದ ವರ್ಗ ಸೂರ್ಯನಿಗು ಅದಕ್ಕು ಇರುವ ಸರಾಸರಿ ದೂರದ ಘನಕ್ಕೆ ಅನುಲೋಮವಾಗಿದೆ.

ಈ ವಿಚಾರವನ್ನು ಪಟ್ಟಿ ೧ ರಲ್ಲಿ ಸಂಕ್ಷಿಪ್ತವಾಗಿ ಕಾಣಿಸಿದೆ.

ಪಟ್ಟಿ ೧: ಭೂಮಿಯ ವರ್ಷ ೧ ಮತ್ತು ಸೂರ್ಯನಿಗು ಭೂಮಿಗು ಇರುವ ದೂರ ೧ ಎಂದು ಭಾವಿಸಲಾಗಿದೆ.

ಗ್ರಹ	ಗ್ರಹದ ವರ್ಷ T	ಸೂರ್ಯನಿಗು ಗ್ರಹಕ್ಕೂ ಇರುವ ಸರಾಸರಿ ದೂರ d	T^2/d^3
ಬುಧ	೦.೨೪	೦.೩೮೭	೧
ಶುಕ್ರ	೦.೬೧	೦.೭೨೩	೧
ಭೂಮಿ	೧.೦೦	೧.೦	೧
ಮಂಗಳ	೧.೮೮	೧.೫೨೪	೧
ಗುರು	೧೧.೮೬	೫.೨೦೨	೧
ಶನಿ	೨೯.೪೬	೯.೫೩೯	೧

೧೬೨೦ರಲ್ಲಿ ಕೆಪ್ಲರನ ತಾಯಿ ಮಾಟಮಾಡಿದ ಆರೋಪದಮೇಲೆ ದಸ್ತಗಿರಿಯಾದಳು. ತಕ್ಷಣ ಅವನು ವುರ್ಟಂಬರ್ಗಿಗೆ ಪ್ರಯಾಣ ಮಾಡಿದ. ಅಲ್ಲಿ ಅವನು ತನ್ನ ಪ್ರಭಾವವನ್ನೆಲ್ಲಾ ಬಳಸಿದರು ಅವಳು ೧೩ ತಿಂಗಳು ಸೆರೆವಾಸ ಅನುಭವಿಸಬೇಕಾಯಿತು. ಸೆರೆಮನೆಯಿಂದ ಹೊರಗೆ ಬಂದಮೇಲೆ ಅವಳು ಹೆಚ್ಚುಕಾಲ ಉಳಿಯಲಿಲ್ಲ. ಆರೋಗ್ಯ ಮತ್ತು ಸಾಂಸಾರಿಕ ಸಂಬಂಧದಲ್ಲಿ ಕೆಪ್ಲರ್ ಹೆಚ್ಚು ನಷ್ಟವನ್ನೆ ಅನುಭವಿಸಿದ.

ವಿಶ್ವ ಪರಿಮಿತಿಯುಳ್ಳದ್ದು ಮತ್ತು ಅದರಲ್ಲಿರುವ ನಕ್ಷತ್ರಗಳ ಸಾಂದ್ರತೆ ತೀರ ಕಡಿಮೆ ಮೌಲ್ಯದ್ದು ಎಂದು ಕೆಪ್ಲರ್ ನಂಬಿದ್ದ. (ನಕ್ಷತ್ರಗಳು ಸೂರ್ಯನಂತೆ ಸ್ವಯಂ ಪ್ರಕಾಶಿಗಳಾದ ಕಾಯಗಳು ಎಂಬ ವಿಚಾರ ಅಷ್ಟರಲ್ಲಿ ತಿಳಿದಿತ್ತು). ಆದುದರಿಂದ ರಾತ್ರಿ ಕತ್ತಲಾಗಿರುತ್ತದೆ ಎಂದು ಅವನು ತಿಳಿಸಿದ. ಥಾಮಸ್ ಡಿಗ್ಗಿಸ್ ಎಂಬ ಖಗೋಳ ಶಾಸ್ತ್ರಜ್ಞ ವಿಶ್ವ ಅನಂತ ವ್ಯಾಪ್ತಿಯುಳ್ಳದ್ದೆಂದೂ, ಅದರಲ್ಲಿರುವ ನಕ್ಷತ್ರಗಳ ಸಂಖ್ಯೆಯೂ ಅನಂತವಾದುದೆಂದೂ ಪ್ರಚಾರಮಾಡಿದ್ದ. ಡಿಗ್ಗಿಸ್ಸನ ಅಭಿಪ್ರಾಯ ನಿಜವಾಗಿದ್ದ ಪಕ್ಷಕ್ಕೆ ಇಡೀ ಆಕಾಶ ಎಲ್ಲಕಾಲದಲ್ಲೂ ಸೌರತಟ್ಟೆಯಂತೆ ಝಗಝಗಿಸುತ್ತಿರಬೇಕು. ವಾಸ್ತವಾಂಶ ಹಾಗಿಲ್ಲ: ಸೂರ್ಯ ಇಲ್ಲದಾಗ ಕತ್ತಲಾಗಿರುತ್ತದೆ. ನಕ್ಷತ್ರಗಳ ಮಿನುಗು ಅದನ್ನು ಪೂರ್ಣವಾಗಿ ನಿವಾರಿಸುವುದಿಲ್ಲ. ಆದುದರಿಂದ ಕೆಪ್ಲರನ ಪರಿಮಿತ ವಿಶ್ವ ಚಿತ್ರಕ್ಕೇ ಹೆಚ್ಚು ಬೆಲೆ ದೊರೆಯಿತು. ಈ ವಿಚಾರದಲ್ಲಿ ಮಾತ್ರ ಅರಿಸ್ಟಾಟಲನ ಕಲ್ಪನೆ ನಿಜಕ್ಕೆ ಹತ್ತಿರವಾದಂತಿದೆ. ಉಳಿದ ಕಡೆ ಅವನ ಅಭಿಪ್ರಾಯಗಳು ಪೂರ್ಣವಾಗಿ ಕುಸಿದು ಬಿದ್ದಿದ್ದವು.

ಲೆಕ್ಕಾಚಾರಗಳಲ್ಲಿ ಮೊದಲು ಲಘು ಗಣಕವನ್ನು (ಲಾಗರಿತಮ್) ಉಪಯೋಗಿಸಿದವನು ಕೆಪ್ಲರ್. ನೇಪಿಯರ್ ಲಘುಗಣಕವನ್ನು ೧೬೧೪ರಲ್ಲಷ್ಟೆ ಸ್ಥಾಪಿಸಿದ್ದ. ಲೆಕ್ಕಾಚಾರಗಳ ಸಮಯವನ್ನು ತಗ್ಗಿಸುವ ವಿಧಾನಗಳ ಮಹತ್ವವನ್ನು ಕೆಪ್ಲರ್ ಆಗಲೆ ಮನಗೊಂಡಿದ್ದ. ೧೬೨೭ರಲ್ಲಿ ಅವನು ರುಡಾಲ್ಫೈನ್ ಪಟ್ಟಿಯನ್ನು ಜಗತ್ತಿಗೆ ಕೊಟ್ಟ. ಈ ಪಟ್ಟಿ ಮುಂದೆ ಸುಮಾರು ಒಂದು ನೂರು ವರ್ಷಗಳಕಾಲ ಖಗೋಳ ಶಾಸ್ತ್ರಜ್ಞರಿಗೆ ಅತ್ಯಂತ ಉಪಯುಕ್ತವಾದ ಸಹಾಯ ಸಂಪತ್ತಾಗಿತ್ತು. ಕೆಪ್ಲರ್ ಅವಿಚಾರಕ ಆಧಾರ ಕಲ್ಪನೆಗಳ ಅಡಿಪಾಯವನ್ನು ತೆಗೆದುಹಾಕಿ ಖಗೋಳ ಶಾಸ್ತ್ರ ವಾಸ್ತವಿಕ ಭೌತಕಾರಣಗಳ ಮೇಲೆ ನಿಲ್ಲುವಂತೆ ಮಾಡಿದ. ಅವನನ್ನು ಅಮರನನ್ನಾಗಿ ಮಾಡಿದ ಕೆಲಸ ಇದು.

ಅವಿಶ್ರಾಂತ ದುಡಿಮೆ, ಸಾಂಸಾರಿಕ ಜಂಜಾಟ, ಮತೀಯಕ್ಷೋಭೆ, ಆರ್ಥಿಕ ಸಂಕಷ್ಟ ಇವುಗಳಿಂದ ಕೆಪ್ಲರ್ ಕಡುನೊಂದ. ಟೈಕೊಬ್ರಾಹೆಯ ನಿಷ್ಕೃಷ್ಟ ಅಳತೆಗಳ ಸಂಪತ್ತು ದೊರೆಯದೆ ಹೋಗಿದ್ದರೆ ಅವನು ಬಹುಬೇಗ ಕುಸಿದು ಬೀಳುತ್ತಿದ್ದನೇನೊ. ೧೫–೧೧–೧೬೩೦ ರಂದು ಅವನು ರಾಟಿಸ್ಬಾನಿನಲ್ಲಿ ಮೃತನಾದ. ವೈಜ್ಞಾನಿಕ ನಿಯಮಗಳನ್ನು ಗಣಿತರೂಪದಲ್ಲಿ ಮೊದಲು ಬರೆದ ಕೀರ್ತಿ ಸಲ್ಲುವುದು ಕೆಪ್ಲರನಿಗೆ.

ಬಡವರ ಬಂಧು

ಅಶೋಕ್ ಮಹಾದೇವನ್

ರಾತ್ರಿ ಹನ್ನೊಂದೂವರೆ ಘಂಟೆ. ಕರಾಚಿಯ ಹಳೇ ಟೌನಿನ ಕಿಕ್ಕಿರಿದ ಪೇಟೆಬೀದಿಯಲ್ಲೊಂದು ಮನೆ. ಹೇಗೆಂದರೆ ಹಾಗೆ ಕುರ್ಚಿ, ಮೇಜು, ಸ್ಟೂಲು, ಬೆಂಚು, ಪುಸ್ತಕ, ಫೈಲುಗಳು ತುಂಬಿದ್ದ ಆಫೀಸಿನಲ್ಲಿ ಇನ್ನೂ ಕೆಲಸಮಾಡುತ್ತ ಕೂತಿದ್ದ ಅಬ್ದುಲ್‌ಸತ್ತಾರ್ ಎಧಿ ಎರಡು ನಿಮಿಷ ಕೆಲಸ ನಿಲ್ಲಿಸಿ ಮೈಮುರಿದು ಆಕಳಿಸಿದರು. ಬೆಳಗಿನಿಂದ ಇಡೀ ದಿನ ಕೆಲಸ. ಬೆಳಿಗ್ಗೆ ಪ್ರಾಂತದ ಮುಖ್ಯಮಂತ್ರಿ ಅಖ್ತರ್‌ಆಲಿ ಖಾನ್‌ಜಿಯವರೊಂದಿಗೆ ಮಾತುಕತೆ. ನಗರದಲ್ಲಿ ಎರಡು ಜನಾಂಗಗಳ ಘರ್ಷಣೆಯಿಂದುಂಟಾದ ಹಿಂಸಾಚಾರಗಳನ್ನು ತಡೆಗಟ್ಟಿ ವಾತಾವರಣವನ್ನು ತಿಳಿಗೊಳಿಸುವುದು ಹೇಗೆ, ಶಾಂತಿಪಾಲನೆ ಮಾಡುವುದು ಹೇಗೆ ಎನ್ನುವ ಬಗ್ಗೆ ಮುಖ್ಯಮಂತ್ರಿಗಳ ಜೊತೆ ನಡೆದ ಸಮಾಲೋಚನೆ. ನಂತರ ಅನಾಥಾಲಯಕ್ಕೆ ಭೇಟಿ. ಅದಾದ ಮೇಲೆ ದಿಕ್ಕಿಲ್ಲದ ಹೆಣ್ಣುಮಕ್ಕಳಿಗಾಗಿ ಸ್ಥಾಪಿಸಿದ್ದ ಅಭಯ ಧಾಮಕ್ಕೆ, ಕಡೆಯಲ್ಲಿ ಮನೋರೋಗಕ್ಕೋ ಮಾದಕ ವಸ್ತುಗಳ ಚಟಕ್ಕೋ ಬಲಿಯಾಗಿ ಚಿಕಿತ್ಸೆ ಪಡೆಯುತ್ತಿದ್ದ ಪುರುಷರ ವಿಶ್ರಾಂತಿ ಧಾಮಕ್ಕೆ ಹೋಗಿ ಬಂದರು. ಹೀಗೆ ಮಧ್ಯಾಹ್ನ ಹಾಗೂ ಸಂಜೆ ಕಳೆದವು. ರಾತ್ರಿ ಊಟವನ್ನೂ ಆತುರಾತುರವಾಗಿ ಮಾಡಿ ಆಫೀಸಿಗೆ ಬಂದವರು ಕೆಲವು ಕಾಗದಪತ್ರಗಳನ್ನು ನೋಡುವುದರಲ್ಲಿ ತೊಡಗಿದ್ದರು. ಅಷ್ಟರಲ್ಲಿ ಕರಾಚಿಯ ಸಿವಿಲ್ ಆಸ್ಪತ್ರೆಯಿಂದ ಅಜ್ಞಾತ ಶವವೊಂದನ್ನು ಕಳಿಸಿದ್ದಾರೆಂದು ತಿಳಿಯಿತು. ಆಫೀಸು ಪಕ್ಕದ ಚಿಕ್ಕ ರೂಮಿನಲ್ಲಿ ಅದನ್ನಿರಿಸಿದ್ದರು. ಕೂಡಲೆ ಎಧಿ ಪೇಪರುಗಳನ್ನು ಬದಿಗಿರಿಸಿ ಅಲ್ಲಿಗೆ ಹೋದರು. ಕ್ಷಣದಲ್ಲಿ ಸಿದ್ಧರಾಗಿ ಬಹು ಶ್ರದ್ಧಾಗೌರವಗಳಿಂದ ಶವಕ್ಕೆ ಸ್ವಚ್ಛವಾಗಿ

೧೯೮೯ರ ಜೂನ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಸಂಚಿಕೆಯಲ್ಲಿನ ಅಶೋಕ್ ಮಹಾದೇವನ್‌ರವರ 'ಪಾಕಿಸ್ತಾನ್ಸ್ ಛಾಂಪಿಯನ್ ಆಫ್ ದಿ ಪೂರ್' ಎಂಬ ಲೇಖನದ ಅನುವಾದ.

ಸ್ನಾನ ಮಾಡಿಸತೊಡಗಿದರು. ಇಸ್ಲಾಮ್ ಧರ್ಮದ ಪ್ರಕಾರ ಹೂಳುವ ಮೊದಲು ಶವವನ್ನು ಸ್ವಚ್ಛವಾಗಿ ತೊಳೆಯುವುದು ಶವಸಂಸ್ಕಾರದ ಒಂದು ವಿಧಿ. "ಪಾಪ, ಈ ಬಡಪಾಯಿಗೆ ಹಾಗೆ ಸ್ನಾನ ಮಾಡಿಸುವವರು ಯಾರೂ ಇಲ್ಲ," ಎಂದು ನನಗೆ ವಿವರಿಸುತ್ತ ಆ ಅಜ್ಞಾತ ವೃದ್ಧನ ಶವಕ್ಕೆ ಸ್ನಾನ ಮಾಡಿಸಿ ಮುಂದಿನ ಕಾರ್ಯಗಳನ್ನು ನಡೆಸಲು ಜನರನ್ನು ಬಿಟ್ಟು ಆಫೀಸಿಗೆ ಮರಳಿದರು.

ರಸ್ತೆಯಲ್ಲಿ ಪೆನ್ನಿನಿಂದ ತನಗೆ ತಾನು ತಿವಿದುಕೊಳ್ಳುತ್ತಿದ್ದಳೆಂದು ಒಬ್ಬ ಹದಿಹರೆಯದ ಹುಡುಗಿಯನ್ನು ಹಿಡಿದು ಆಫೀಸಿಗೆ ಕರೆತಂದಿದ್ದರು. "ನಿನ್ನ ಹೆಸರೇನು ಮಗು?" ಎಂದು ತುಂಬ ಪ್ರೀತಿಯಿಂದ ಮೃದುವಾಗಿ ಕೇಳಿದರು ಎಧಿ. ಆ ಹುಡುಗಿಯ ದೊಡ್ಡ, ಸುಂದರವಾದ, ಕಪ್ಪು ಕಣ್ಣುಗಳು ಮತ್ತಷ್ಟು ಅಗಲವಾದವು. "ನನಗೆ ಗೊತ್ತಿಲ್ಲ," ಎಂದಳು ಕ್ಷೀಣಸ್ವರದಲ್ಲಿ. "ಎಲ್ಲಿ ವಾಸವಾಗಿದೀಯೆ?" "ಗೊತ್ತಿಲ್ಲ." "ಇಲ್ಲೇ ಇರುತ್ತೀಯಾ?" ಎಂದು ಕೇಳಿದರು ಕಡೆಯದಾಗಿ. "ಓಹೊ. ಇರುತ್ತೇನೆ," ಎಂದಳು ಆಕೆ. ಸರಿ. ಆಕೆಯನ್ನು ಅಭಯಧಾಮಕ್ಕೆ ಕರೆದೊಯ್ಯುವ ಏರ್ಪಾಟಾಯಿತು. ಸಹವರ್ತಿಯೊಬ್ಬ ನಗರದ ನ್ಯಾಯಾಧೀಶರಿಂದ ಬಂದಿದ್ದ ಕಾಗದವನ್ನು ಕೊಟ್ಟ. ಕರಾಚಿ ಸೆಂಟ್ರಲ್ ಜೈಲಿನಲ್ಲಿದ್ದ ಖೈದಿಯೊಬ್ಬ ತನ್ನ ಚಿಕ್ಕ ಮಕ್ಕಳನ್ನು ನೋಡಲು ಬಯಸಿದ್ದ. ಆ ಹುಡುಗರು ಎಧಿ ನಡೆಸುತ್ತಿದ್ದ ಅನಾಥಾಲಯದಲ್ಲಿದ್ದರು. ಅವರನ್ನು ಸೆಂಟ್ರಲ್ ಜೈಲಿಗೆ ಕಳಿಸಿಕೊಡಲು ಕೇಳಿ ನ್ಯಾಯಾಧೀಶರು ಬರೆದಿದ್ದರು. ಪತ್ರವನ್ನು ಓದಿ ಮುಗಿಸಿ ಈ ವಿಚಾರವನ್ನು ನನಗೆ ತಿಳಿಸುತ್ತ, "ಈ ಮನುಷ್ಯ ತನ್ನ ಹೆಂಡತಿಯನ್ನು ಕೊಲೆಗೈದ ಆರೋಪದ ಮೇಲೆ ಜೈಲಿನಲ್ಲಿದ್ದಾನೆ," ಎಂದರು ಎಧಿ. ನಂತರ ಸಹಾಯಕನಿಗೆ, "ನಾಳೆ ಆ ಹುಡುಗನನ್ನು ಜೈಲಿಗೆ ಕರೆದುಕೊಂಡು ಹೋಗು. ಅವರ ತಂದೆ ನೋಡಲಿ," ಎಂದು ಆದೇಶವಿತ್ತರು. ಇಷ್ಟೆಲ್ಲ ಮುಗಿಸಿ ಮಲಗಲು ಹೋಗುವ ವೇಳೆಗೆ ರಾತ್ರಿ ೧ ಘಂಟೆಯಾಗಿತ್ತು. ಆಫೀಸು ಪಕ್ಕದಲ್ಲೇ ಇದ್ದ ಕಿರು ಕೋಣೆಯೇ ಮಲಗುವ ಮನೆ. ಎಧಿಯವರ ದಿನಚರಿಯ ಒಂದು ಕಿರುನೋಟ ಪಡೆದು ನಾನು ಹಿಂತಿರುಗಿದೆ. ಪ್ರಾಯಶಃ ರಾತ್ರಿ ಮುಗಿಯುವುದರಲ್ಲಿ ಇನ್ನೆಷ್ಟುಬಾರಿ ಎಧಿಯನ್ನು ಎಬ್ಬಿಸುತ್ತಾರೊ!

ಇದು ಏನೊ ಒಂದೆರಡು ದಿನ, ಒಂದೆರಡು ತಿಂಗಳು, ಒಂದೆರಡು ವರ್ಷಗಳು ಹೀಗೆ ಎನ್ನುವಂತಹ ಮಾತಲ್ಲ. ಕಳೆದ ೩೯ ವರ್ಷಗಳಿಂದ ನಡೆದುಕೊಂಡು ಬರುತ್ತಿರುವ ಪರಿಪಾಠ. ಸಹಮಾನವರ ಸೇವೆ ಮಾಡುವುದರಲ್ಲಿ, ಅವರ ಅಗತ್ಯಗಳನ್ನು ಪೂರೈಸುವುದರಲ್ಲಿ ಎಧಿ ಅದೆಷ್ಟು ನಿದ್ರೆಗೆಟ್ಟ ರಾತ್ರಿಗಳನ್ನು ಕಳೆದಿದ್ದಾರೆ! ಅದೆಲ್ಲೊ ಮಳೆ ಬಾರದೆ ಬರ ಬಿದ್ದು ಹೊಟ್ಟೆಗಿಲ್ಲದೆ ಸಾಯುತ್ತಿರುವ ರೈತರಿಗೆ ನೆರವನ್ನು ನೀಡುವುದಿರಬಹುದು; ತಿಪ್ಪೆಯ ಮೇಲೆ ಎಸೆದ ಬೇಡದ ಹಸುಳೆಗಳನ್ನೆತ್ತಿಕೊಂಡು ಬಂದು ಸಾಕುವ ಕೆಲಸವಾಗಿರಬಹುದು; ಚಿಕಿತ್ಸೆಗೆ ಒಂದು ಚಿಕ್ಕಾಸೂ ಇಲ್ಲದಷ್ಟು ಬಡತನವಿರುವ ರೋಗಿಗಳಿಗೆ ಸೂಕ್ತ ವೈದ್ಯ ಸಹಾಯ, ಶುಶ್ರೂಷೆಗಳಿಗೆ ಏರ್ಪಾಟು ಮಾಡುವುದಾಗಿರಬಹುದು, ಇಂತಹ ನೂರುಬಗೆಯ ದಾರುಣ ಪರಿಸ್ಥಿತಿಗಳಿಗೆ ಸ್ಪಂದಿಸುವ ದಯಾರ್ದ್ರ ಹೃದಯ ಎಧಿಯವರದು. ಅವರ ಅನುಕಂಪ ಈ ಎಲ್ಲ ಬಗೆಯ ಸಂಕಟಗಳ ಮೇಲೂ ಹರಿಯು

ತ್ತದೆ. "ಸೇವೆ ಮಾಡುವುದು, ಯಾರ ಸಹಾಯಕ್ಕಾದರೂ ಹೋಗುವುದು, ಇವೇ ನನಗೆ ಬಹು ಪ್ರಿಯವಾದ ಕೆಲಸಗಳು," ಎನ್ನುತ್ತಾರೆ ಎಧಿ ತೀರ ಸಹಜವಾಗಿ. ಅದು ೨೪ ತಾಸೂ ಸಾಲದು ಎಂಬಂತಹ ಕೆಲಸ.

ಎಧಿ ಮತ್ತು ಅವರ ಪತ್ನಿ (ಸಹಧರ್ಮಿಣಿಯಾಗಿ ೨೦ ವರ್ಷಗಳಾಗಿರುವ) ಬಲ್ಕೀಸ್ ಜೊತೆಗೂಡಿ ಒಂದು ಅಸಾಧಾರಣವಾದ ಮತ್ತು ಅದ್ಭುತವಾದ, ಅನೇಕ ಶಾಖೋಪಶಾಖೆಗಳಿರುವ, ಸಮಾಜ ಸೇವಾ ಜಾಲವನ್ನು ರಚಿಸಿದ್ದಾರೆ. ಸಹಸ್ರಾರು ಜನ ಬಡವರು ಅದರ ನೆರವನ್ನು ಪಡೆಯುತ್ತಿದ್ದಾರೆ. ಈ ಸೇವಾಲೋಕದಲ್ಲಿ ಆಸ್ಪತ್ರೆಗಳಿವೆ. ಪ್ರಸೂತಿಗೃಹಗಳಿವೆ. ಆ್ಯಂಬ್ಯುಲೆನ್ಸ್ ಸೇವಾ ಸಾರಿಗೆಯ ವ್ಯವಸ್ಥೆಯಿದೆ. ರಕ್ತಸಂಗ್ರಹಾಲಯಗಳಿವೆ. ರೋಗ ಪತ್ತೆಮಾಡುವ ಪರೀಕ್ಷಾ ಪ್ರಯೋಗಾಲಯಗಳಿವೆ. ಎಕ್ಸ್‌ರೇ ಚಿಕಿತ್ಸಾಲಯಗಳು, ಶಿಶುಕಲ್ಯಾಣ ಕೇಂದ್ರಗಳು, ಶಿಶುವಿಹಾರಗಳು, ಅನಾಥರಿಗೆ, ದೈಹಿಕ, ಮಾನಸಿಕ ವೈಕಲ್ಯವಿರುವವರಿಗೆ, ಮನೆಬಿಟ್ಟು ಓಡಿಬಂದ ಹೆಣ್ಣು ಮಕ್ಕಳಿಗೆ, ಮಾದಕ ವಸ್ತುಗಳ ಚಟ ಇರುವವರಿಗೆ ಮತ್ತು ವೃದ್ಧರಿಗೆ ಪುನರ್ವಸತಿ ಕಲ್ಪಿಸಿಕೊಡುವ ಆಶ್ರಯಧಾಮಗಳು ಹೀಗೆ ಅನೇಕ ಸೇವಾ ಕೇಂದ್ರಗಳಿವೆ. ಕರಾಚಿಯಲ್ಲಿ ಮಾತ್ರವಲ್ಲ ಪಾಕಿಸ್ತಾನದ ಎಲ್ಲಾ ಕಡೆ ನಗರ, ಊರುಗಳು ಸೇರಿ ೧೯೯ ಸ್ಥಳಗಳಲ್ಲಿ ಎಧಿಯವರ ಸೇವಾಸಂಸ್ಥೆಯ ಶಾಖೆ, ಉಪಶಾಖೆಗಳಿವೆ. ಈ ಎಲ್ಲವನ್ನು ನಿಯಂತ್ರಿಸುವ ಪ್ರಧಾನ ಆಡಳಿತ ಕಾರ್ಯಾಲಯ ಇರುವುದು ಕರಾಚಿಯಲ್ಲಿ.

ಇಷ್ಟೊಂದು ಸೇವಾ ಕೇಂದ್ರಗಳನ್ನು ಸ್ಥಾಪಿಸಿ ನಡೆಸುತ್ತಿರುವುದು ನಿಜಕ್ಕೂ ಎಧಿಯವರ ಅದ್ಭುತ ಸಾಧನೆ. ಏಕೆಂದರೆ ಅವರು ಯಾವ ಧಾರ್ಮಿಕ ಸಂಸ್ಥೆಯಿಂದಾಗಲಿ, ಸಾರ್ವಜನಿಕ ಸಂತ್ರಸ್ತ ಪರಿಹಾರ ನಿಧಿಗಳಿಂದಾಗಲಿ, ಕಡೆಗೆ ಸರ್ಕಾರದಿಂದ ಕೂಡ ಧನಸಹಾಯವನ್ನು ಕೇಳದೆ, ಅನುದಾನವನ್ನು ಪಡೆಯದೆ ಈ ಕೇಂದ್ರಗಳನ್ನು ನಡೆಸುತ್ತಿದ್ದಾರೆ. ಪಾಕಿಸ್ತಾನದ ಪ್ರೆಸಿಡೆಂಟರಾಗಿದ್ದ ದಿವಂಗತ ಜಿಯಾ ಉಲ್ ಹಕ್ ೮ ವರ್ಷಗಳ ಹಿಂದೆ ೫ ಲಕ್ಷ ರೂಪಾಯಿಗಳ (ಪಾಕಿಸ್ತಾನದ ೧ ರೂಪಾಯಿ ಭಾರತದ ೮೦ ಪೈಸೆ) ಬ್ಯಾಂಕ್ ಚೆಕ್ಕನ್ನು ಕಳಿಸಿದಾಗ ಎಧಿಯವರು ಅತ್ಯಂತ ಸ್ವಾಭಿಮಾನದಿಂದ ಮತ್ತು ಅಷ್ಟೇ ವಿನಯದಿಂದ ಅದನ್ನು ನಿರಾಕರಿಸಿದರು. "ಇವು ಜನರ ಸೇವೆಗಾಗಿ ಜನರೇ ನಡೆಸಬೇಕಾದ ಕೇಂದ್ರಗಳಾದುದರಿಂದ ಜನರೇ ಹಣ ಕೂಡಿಸಿ ಒದಗಿಸಬೇಕು," ಎನ್ನುತ್ತಾರೆ ಎಧಿ. ಅದರಂತೆ ಜನರಾದರೂ ತಮ್ಮ ತಮ್ಮ ಶಕ್ತ್ಯನುಸಾರ ಅಲ್ಪಸ್ವಲ್ಪ ಕಾಣಿಕೆ ಕಳಿಸುತ್ತಾರೆ. ಹೀಗೆ ಜನಸಾಮಾನ್ಯರಿಂದ ಪ್ರತಿ ವರ್ಷ ೩ ಕೋಟಿ ರೂಪಾಯಿ ನಗದು, ೭ ಕೋಟಿ ರೂಪಾಯಿ ಮೌಲ್ಯದಷ್ಟು ವಿವಿಧ ಸಾಮಗ್ರಿಗಳು ಬರುತ್ತಿವೆ. ಈ ಬಗ್ಗೆ ವಿಷಯ ಸಂಗ್ರಹಿಸಲು ನಾನು ಸಂದರ್ಶಿಸಿದವರಲ್ಲಿ ಒಬ್ಬ ತರುಣ ವರ್ತಕ, ಎಧಿಯವರಿಗೆ ಕಳಿಸಲೆಂದು ೫೦ ಸಾವಿರ ರೂಪಾಯಿಗಳ ಚೆಕ್ಕು ಬರೆಯುತ್ತ, "ನಾನು ಎಧಿಯವರಿಗೆ ಕಳಿಸುವ ಹಣ ಸರಿಯಾಗಿ ಉಪಯೋಗವಾಗುತ್ತೆ. ಒಂದು ಕಾಸು ಸಹ ದುರುಪಯೋಗವಾಗುವುದಿಲ್ಲ ಎಂದು ನನಗೆ ಪೂರ್ಣ ನಂಬಿಕೆಯಿದೆ," ಎಂದು ಹೇಳಿದ. ೮೦ ವರ್ಷ ವಯಸ್ಸಿನ ಕೂಲಿ ಕಂಟ್ರಾಕ್ಟರ್ ಒಬ್ಬ ಎಧಿಯವರ ಸಂಸ್ಥೆಗಳ ಸ್ವಯಂಸೇವಕನ

ಕೈಯಲ್ಲಿ ೧೦೦ ರೂಪಾಯಿ ಇಡುತ್ತ "ಎಧಿಯವರು ಅಪೇಕ್ಷಿಸಿದರೆ ನನ್ನ ಪ್ರಾಣವೊಪ್ಪಿಸುವುದಕ್ಕೂ ಸಿದ್ಧ. ಅವರಲ್ಲಿ ನನಗೆ ಅಷ್ಟು ವಿಶ್ವಾಸ, ನಂಬಿಕೆ ಇವೆ" ಎಂದು ಹೇಳಿದ.

ಎಧಿಯವರ ಬಗ್ಗೆ ಕರಾಚಿಯ (ಘೋರ ಅಪರಾಧಗಳನ್ನೆಸಗುವ) ಮಹಾ ದುಷ್ಟರಿಗೂ ಸಹ ಅಪಾರ ಗೌರವ, ಮೆಚ್ಚುಗೆ, ಒಂದು ಸಲ ಕರಾಚಿಯ ಉಪನಗರವೊಂದರಲ್ಲಿ ಪೋಲಿಸರಿಗೂ ಡಕಾಯಿತರ ತಂಡವೊಂದಕ್ಕೂ ಗುಂಡಿನ ಚಕಮಕಿ ನಡೆಯುತ್ತಿರುವ ಸುದ್ದಿ ಬಂದಿತು. ಎಧಿ ತಕ್ಷಣ ತಮ್ಮ ಆ್ಯಂಬ್ಯುಲೆನ್ಸ್ ವ್ಯಾನಿನಲ್ಲಿ ಅಲ್ಲಿಗೆ ಹೋದರು. ಎಧಿಯವರ ವ್ಯಾನ್ ಎಂದು ನೋಡುತ್ತ ತಿಳಿದ ಡಕಾಯಿತರು ಗುಂಡುಹಾರಿಸುವುದನ್ನು ನಿಲ್ಲಿಸಿದರು. ಗುಂಡೇಟಿನಿಂದ ಸತ್ತುಬಿದ್ದಿದ್ದ ಪೋಲಿಸ್ ಸಬ್‌ಇನ್ಸ್‌ಪೆಕ್ಟರ್‌ರ ದೇಹವನ್ನು ಎಧಿಯವರು ಎತ್ತಿ ವ್ಯಾನಿನಲ್ಲಿ ಹಾಕಿಕೊಳ್ಳಲು ಅವಕಾಶ ಮಾಡಿಕೊಟ್ಟರು. ಇತರ ಗಾಯಾಳುಗಳನ್ನೂ ವ್ಯಾನಿನಲ್ಲಿ ಕೂರಿಸಿಕೊಂಡು ಎಧಿ ಹೊರಟಾಗ ಡಕಾಯಿತರು ಕೈ ಆಡಿಸಿ ಬೀಳ್ಕೊಟ್ಟು ಅವರು ಹೋದಬಳಿಕ ಮತ್ತೆ ಗುಂಡಿನ ಚಕಮಕಿಯನ್ನು ಮುಂದುವರಿಸಿದರಂತೆ.

೫೭–೫೮ ವರ್ಷ ವಯಸ್ಸಿನ ಎಧಿ ಅಷ್ಟು ಎತ್ತರವಲ್ಲದ ಕಟ್ಟುಮಸ್ತಾದ ಆಳು. ನೀಳವಾದ ಗಡ್ಡ. ಮುಖದ ಮೇಲೆ ಅರಳಲು ಸದಾ ಸಿದ್ಧವಾದ ಮುಗುಳು ನಗೆ. ಪದೇ ಪದೇ ಕಿವಿಗೆ ಬೀಳುವ ಹೊಗಳಿಕೆಯಿಂದ ಎಧಿಯವರಿಗೆ ಮುಜುಗರವಾಗುತ್ತದೆ. ಅವತ್ತೊಂದು ಮಧ್ಯಾಹ್ನ ಕಲ್ಯಾಣಕೇಂದ್ರವೊಂದರಲ್ಲಿ ಕೆಲಸ ಮುಗಿಸಿ ಹೊರಟ ಎಧಿಯವರೊಂದಿಗೆ ನಾನೂ ಇದ್ದೆ. ಅಷ್ಟರಲ್ಲಿ ವಯಸ್ಸಾದ ಹಿರಿಯನೊಬ್ಬ ಎಧಿಯವರನ್ನು ನೋಡಿ ಓಡಿಬಂದ. ಅವರ ಕೈಗಳನ್ನು ಎತ್ತಿಕೊಂಡು ಮುತ್ತು ಕೊಟ್ಟ. ನಂತರ ತನ್ನ ಕಣ್ಣಿಗೊತ್ತಿಕೊಂಡು ತಲೆಯಮೇಲಿರಿಸಿಕೊಂಡ. ಕೈ ಹಿಂದಕ್ಕೆಳೆದುಕೊಳ್ಳುತ್ತ ಎಧಿ ನನಗೆ ಹೇಳಿದರು,"ನೋಡಿ,ನಾನು ಭಯಪಡುವುದು ಇದಕ್ಕೇ. ಕೊನೆಗೆ ನಾನೊಬ್ಬ ಸಂತ ಎಂಬ ಭಾವನೆ ನನಗೇ ಬಂದುಬಿಟ್ಟರೆ ಕಷ್ಟ." ಅಂತಹ ಭಾವನೆ ಅವರಿಗೆ ಬಹುಶಃ ಯಾವತ್ತೂ ಬರಲಾರದು. ಬರುವ ಭಯವೂ ಇಲ್ಲ. ಅದರಲ್ಲೂ ಜೊತೆಗೆ ಅವರ ಹೆಂಡತಿಯಿರುವಾಗ ಈ ಬಗೆಯ ಭ್ರಮೆಗೆ ಆಕೆಯೇ ಅವಕಾಶ ಕೊಡುವುದಿಲ್ಲ. ಆಕೆಗೆ ೪೨ ವರ್ಷ ವಯಸ್ಸು. ಪ್ರೀತಿ ತುಂಬಿದ ಹೃದಯ. ಸದಾ ಸಂತೋಷವಾಗಿ ಲವಲವಿಕೆಯಿಂದಿರುವ ಸ್ವಭಾವ. ಗಂಡಹೆಂಡಿರಿಬ್ಬರೂ ಲೋಕಸಹಜವಾದ ಪ್ರೇಮ, ಸರಸ ಸಲ್ಲಾಪಗಳಲ್ಲಿ ಸಮವಾಗಿ ತೊಡಗುವಂತಹವರು. ಎಷ್ಟೋ ಬಾರಿ ಬಲ್ಕೀಸ್ ಗಂಡನನ್ನು ಹಾಸ್ಯ ಮಾಡುವುದುಂಟು. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಎಧಿ ಫೇಲಾದ ಸಂಗತಿಯನ್ನು ನನ್ನೆದುರು ಹೇಳುತ್ತಿದ್ದುದು ಆತನ ಕಿವಿಗೂ ಕೇಳಿಸಿತು. ಕೂಡಲೆ ಆತ ಬಳಿಗೆ ಬಂದು, "ಈಗ ನಾನು ಆ ಪರೀಕ್ಷೆ ಕಟ್ಟಿದರೆ ಪಾಸಾಗುವುದಿಲ್ಲ ಎಂದು ಕೊಂಡಿದೀಯಾ ?" ಎಂದು ಹೆಂಡತಿಯನ್ನು ಕೇಳಿದರು. ಆಕೆಯ ಕಣ್ಣಲ್ಲಿ ವಿನೋದ ಮಿಂಚಿತು. "ಹೌದು. ಖಂಡಿತಾ ಪಾಸಾಗುವುದಿಲ್ಲ. ನಿಮಗೆ ಅದು ತೀರಾ ಕಷ್ಟವಾದ ಪರೀಕ್ಷೆ", ಎಂದುಬಿಡುವುದೇ!

ಎಧಿ ಹುಟ್ಟಿದುದು ೧೯೨೦ರ ಆರಂಭದಲ್ಲಿ. ಗುಜರಾತಿನ ಬಂಟ್ವಾ ಎಂಬ ಸಣ್ಣ ಊರಿನಲ್ಲಿ. ಚಿಕ್ಕ ಮಗುವಾಗಿದ್ದಾಗಲೆ ಭಾರೀ ಜೋರು, ಕೆಚ್ಚು, ಅದಮ್ಯವಾದ

ಚೈತನ್ಯವಿದ್ದ ಹುಡುಗ. ಮಹಾ ತುಂಟ. ಏನಾದರೂ ಚೇಷ್ಟೆ ಮಾಡುತ್ತಿರುವುದೇ ಸ್ವಭಾವ. "ಅವನೇ ನಮ್ಮೆಲ್ಲರ ಮುಂದಾಳಾಗಿದ್ದ. ಆತ ಹೇಳಿದ ಹಾಗೆ ಕೇಳು ತ್ತಿದ್ದೆವು," ಎಂದು ಹೇಳುತ್ತಾರೆ ಹಳೆಯದನ್ನೆಲ್ಲ ನೆನಪುಮಾಡಿಕೊಳ್ಳುತ್ತಾ ಗುಲ್ ಮಹ್ಮದ್ ಬರೂಚ ಎಂಬ ಬಾಲ್ಯ ಸ್ನೇಹಿತ. ಈಗ ಎಧಿಯವರ ಸೇವಾಕಾರ್ಯದ ಒಬ್ಬ ಸಹವರ್ತಿ, ಸ್ವಯಂಸೇವಕ. ಅವರಿವರ ತೋಟಕ್ಕೆ ದಾಳಿ ಮಾಡುವುದು, ಹಣ್ಣು, ಕಾಯಿ ಕಿತ್ತು ತಪ್ಪಿಸಿಕೊಂಡು ಓಡುವುದು, ಇಂಥದಕ್ಕೆಲ್ಲ ಬೇಕಾಗುವ ಎಲ್ಲ ಬಗೆಯ ಸರ್ಕಸ್ ಮಾಡುವುದರಲ್ಲಿ ತರಬೇತಿ ಕೊಡುತ್ತಿದ್ದ ನಾಯಕ ಎಧಿ. ಕೋತಿಚೇಷ್ಟೆ ಗಳಿಗೆ ಲೆಕ್ಕವಿಲ್ಲ. ಆದರೆ ಇವೆಲ್ಲದರ ಹಿಂದೆ ಬಹುಬೇಗ ಕರಗುವ ಮೃದುವಾದ ಮನಸ್ಸು ಆತನದು. ಅದು ಯಾರೊ ವಯಸ್ಸಾದ ಹೆಂಗಸೊಬ್ಬಳು ಖಾಯಿಲೆಯಿಂದ ನರಳುತ್ತಿದ್ದಾಳೆ ಎಂದು ತಿಳಿದರೆ ಕೂಡಲೆ ಆಕೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಮುಂದಾಗುತ್ತಿದ್ದ. ರಸ್ತೆಯಲ್ಲಿ, ಅಂಗವಿಕಲನೊ ಬುದ್ಧಿಮಾಂದ್ಯನೊ ಆದ ಯಾರಾದರೂ ಹುಡುಗನನ್ನು ಬೀದಿಯ ಹುಡುಗರೆಲ್ಲ ದುಂಡುಗಟ್ಟಿಕೊಂಡು ಪೀಡಿಸುತ್ತಿರುವುದು ಕಣ್ಣಿಗೆ ಬಿದ್ದರೆ ಅಬ್ದುಲ್ (ಸತ್ತಾರ್ ಎಧಿ) ಅವರ ಮೇಲೆ ಬಿದ್ದು ಹೊಡೆದೋಡಿಸುವನು.

ಭಾರತ ವಿಭಜನೆಯಾದಾಗ ಬಂಟ್ವಾದ ಅನೇಕ ಮುಸ್ಲಿಮ್ ಕುಟುಂಬಗಳೊಡನೆ ಎಧಿ ಕುಟುಂಬದವರೂ ಪಾಕಿಸ್ತಾನಕ್ಕೆ ಹೋಗಿ ನೆಲೆಸಿದರು. ಕರಾಚಿಯಲ್ಲಿ ಮನೆ ಮಾಡಿದರು. ಅಬ್ದುಲ್ ಬಟ್ಟೆ ಅಂಗಡಿಯೊಂದರಲ್ಲಿ ಕೆಲಸದ ಹುಡುಗನಾದ. ಕೆಲ ದಿನಗಳ ನಂತರ ಒಂದು ಔಷಧಿ ಅಂಗಡಿಯ ಕೆಲಸಗಾರನಾದ. ಆದರೆ ಅದಾವುದೂ ಅವನಿಗೆ ಸರಿಬೀಳಲಿಲ್ಲ. ಜೀವನದಲ್ಲಿ ಏನಾದರೂ ಒಂದು ದೊಡ್ಡದನ್ನು ಸಾಧಿಸಬೇಕು, ಹೆಚ್ಚು ಪ್ರಯೋಜನಕರವಾದ ಕೆಲಸ ಮಾಡಬೇಕು ಎಂದು ಹಂಬಲಿಸುತ್ತಿದ್ದ.

ಹೀಗಿರುವಾಗ ಅವನ ತಾಯಿಗೆ ಲಕ್ವ ಹೊಡೆಯಿತು. ಅನಂತರ ಆಕೆಯ ಬುದ್ಧಿ ಸ್ವಾಸ್ಥ್ಯವೂ ನಷ್ಟವಾಯಿತು. "ನಾನೇ ಆಕೆಯ ಎಲ್ಲ ಸೇವೆಯನ್ನೂ ಮಾಡತೊಡಗಿದೆ. ಸ್ನಾನ ಮಾಡಿಸುವುದು, ಬಟ್ಟೆ ಬದಲಿಸುವುದು, ಊಟ ಮಾಡಿಸುವುದು ಹೀಗೆ ಸಂಪೂರ್ಣವಾಗಿ ಆಕೆಯ ದೇಖರೇಖೆ ನನ್ನ ಜವಾಬ್ದಾರಿಯಾಯಿತು. ಆಕೆಯ ಸ್ಥಿತಿ ನೋಡಿ ಹೀಗೆಯೇ ಇನ್ನೆಷ್ಟು ತಾಯಂದಿರು, ಇನ್ನೆಷ್ಟು ಜನ ನರಳುತ್ತಿದ್ದಾರೊ; ನನ್ನ ತಾಯಿಗಾದರೂ ನಾನಿದ್ದೇನೆ. ಅವರಲ್ಲೆಷ್ಟೊ ಜನಕ್ಕೆ ಯಾರೂ ಗತಿಯಿಲ್ಲದಿರಬಹುದು. ಅಂತಹವರಿಗೆ ಏನಾದರೂ ಸಹಾಯ ಮಾಡಬೇಕು. ಉಚಿತ ಆಸ್ಪತ್ರೆಗಳು, ಅನಾಥಾ ಲಯಗಳು, ಇರುವುದಕ್ಕೊಂದು ನೆಲೆ—ಇಂಥವನ್ನು ಕಟ್ಟಿಸಬೇಕು. ಆದರೆ ಅದಕ್ಕೆಲ್ಲ ನನ್ನಲ್ಲಿ ಹಣವಿರಲಿಲ್ಲ," ಎಂದು ಆಗಿನ ದಿನಗಳನ್ನು ನೆನೆದುಕೊಂಡು ಎಧಿ ಹೇಳುತ್ತಾರೆ.

ಎಧಿಯವರು ತಮ್ಮ ಸಮಾಜದ ಕೆಲವು ಶ್ರೀಮಂತರನ್ನು ಜೊತೆಗೂಡಿಕೊಂಡು ೧೯೫೧ರಲ್ಲಿ ಒಂದು ಚಿಕ್ಕ ಧರ್ಮಾರ್ಥದ ಔಷಧಾಲಯವನ್ನು ಸ್ಥಾಪಿಸಿದರು. ಆದರೆ ಅದರಿಂದ ಅವರಿಗೆ ಅಷ್ಟು ಸಮಾಧಾನವಾಗಲಿಲ್ಲ. ಏಕೆಂದರೆ ಅದರ ನೆರವು ಕೇವಲ ಬಂಟ್ವಾ ಮುಸಲ್ಮಾನರಿಗೆ ಮಾತ್ರ ಸೀಮಿತವಾಗಿತ್ತು. "ನಾವೆಲ್ಲರೂ ಮನುಷ್ಯರೇ ಅಲ್ಲವೇ ? ಮುಸಲ್ಮಾನರಾಗಲಿ, ಹಿಂದೂಗಳಾಗಲಿ, ಕ್ರಿಶ್ಚಿಯನ್ನರಾಗಲಿ, ಯೆಹೂದ್ಯ

ರಾಗಲಿ, ನೆರವಿನ ಅಗತ್ಯವಿರುವವರು ಯಾವ ಜಾತಿಯಾದರೇನು ಎಲ್ಲರೂ ಮನುಷ್ಯರೇ. ನಮ್ಮೆಲ್ಲರಿಗೂ ಸಹಾಯದ ಅಗತ್ಯವಿದೆ," ಎನ್ನುವುದು ಎಧಿಯವರ ದೃಷ್ಟಿ.

೧೯೫೩ರಲ್ಲಿ ಎಧಿಯವರು ಮತ್ತು ಅವರ ಮಿತ್ರಬಳಗ ಇಪ್ಪತ್ತುನಾಲ್ಕು ಗಂಟೆಯೂ ತೆರೆದಿರುವ ಉಚಿತ ಚಿಕಿತ್ಸಾಲಯವನ್ನು ಆರಂಭಿಸಿದರು. ಯಾವ ಜಾತಿಯವರಾದರೂ ಅಲ್ಲಿಗೆ ಹೋಗಬಹುದಿತ್ತು. ಅಲ್ಲಿ ವಯಸ್ಕರಿಗೆ ಅಕ್ಷರ ಕಲಿಸುವ ತರಗತಿಗಳನ್ನೂ ನಡೆಸತೊಡಗಿದರು. ಸರಿಸುಮಾರು ಇದೇ ಕಾಲದಲ್ಲಿ ಎಧಿಯವರಿಗೆ ಕರಾಚಿಯಲ್ಲಿ ಒಂದು ಸರಿಯಾದ ಆಂಬ್ಯುಲೆನ್ಸ್ ಸರ್ವಿಸ್ ಇಲ್ಲ ಎಂದು ಅನಿಸಿತು. ಅನೇಕ ನಿರ್ಗತಿಕರು ಖಾಯಿಲೆಯಾಗಿ ರಸ್ತೆಯಲ್ಲೇ ನರಳುತ್ತ ಬಿದ್ದಿರುತ್ತಾರೆ. ತುರ್ತಾಗಿ ಅವರನ್ನು ಆಸ್ಪತ್ರೆಗೆ ಸಾಗಿಸಲು ಸಾರ್ವಜನಿಕ ಆಸ್ಪತ್ರೆಯ ಆ್ಯಂಬ್ಯುಲೆನ್ಸ್‌ಗೆ ಹೇಳಿ ಕಳಿಸಿದರೆ ಅದು ಬರುವುದೇ ಅಪರೂಪ. ಯಾವ ವೈದ್ಯಕೀಯ ನೆರವೂ ದೊರೆಯದೆ ಅಂತಹ ರೋಗಿಗಳು ರಸ್ತೆಬದಿಯಲ್ಲೇ ಸಾಯುವ ದಾರುಣ ದೃಶ್ಯ ಎಧಿಯವರ ಕಣ್ಣಿಗೆ ಬೀಳುತ್ತಿತ್ತು. ಆದ್ದರಿಂದ ಒಂದು ಆ್ಯಂಬ್ಯುಲೆನ್ಸ್ ವ್ಯಾನ್ ಇಟ್ಟುಕೊಳ್ಳಬೇಕು ಎಂದುಕೊಂಡರು. ದಾನದಿಂದ ಬಂದ ಹಣದಿಂದ ಕೆಲವು ದಿನಗಳಲ್ಲಿ ಒಂದು ಹಳೆಯ ಟ್ರಕ್ಕನ್ನು ಕೊಂಡು ಅದನ್ನೇ ವ್ಯಾನ್ ತರಹ ಬದಲಾಯಿಸಿದರು. ಹೀಗೆ ಆರಂಭವಾದುದು ಈಗ ೨೪೫ ಅತ್ಯುತ್ತಮವಾದ ವಾಹನಗಳುಳ್ಳ ದೊಡ್ಡ ಆ್ಯಂಬ್ಯುಲೆನ್ಸ್ ಸೇವಾಸಾರಿಗೆಯ ಘಟಕವೇ ಬೆಳೆದಿದೆ. ಇಡೀ ಪಾಕಿಸ್ತಾನದಲ್ಲೇ ಅತ್ಯಂತ ಶ್ರೇಷ್ಠವಾದ, ವ್ಯವಸ್ಥಿತವಾದ ಆ್ಯಂಬ್ಯುಲೆನ್ಸ್ ಸೇವಾಸಾರಿಗೆ ಎನಿಸಿದೆ. ಇದರ ಕೇಂದ್ರ ಕಾರ್ಯಾಲಯ ಕರಾಚಿಯಲ್ಲಿದೆ. ಪಾಕಿಸ್ತಾನದ ನಾನಾ ಊರುಗಳಿಗೆ; ನಗರಗಳಿಗೆ, ಹಳ್ಳಿಗಳಿಗೆ, ಎಲ್ಲೆಲ್ಲಿ ತುರ್ತು ಅವಶ್ಯಕತೆ ಇದೆಯೊ ಅಲ್ಲಿಗೆ ಕರೆದಾಗ ಮೊದಲು ತಲುಪುವ ವಾಹನ ಎಧಿಯವರ ಆ್ಯಂಬ್ಯುಲೆನ್ಸ್ ಸರ್ವಿಸ್ಸಿನದು. "ಹೆದ್ದಾರಿ ಅಪಘಾತಗಳಲ್ಲಿ ಸಕಾಲಿಕ ವೈದ್ಯಸಹಾಯ ದೊರೆಯದೆ ಬಹುಜನ ಸಾಯುತ್ತಿದ್ದರು. ಈಗ ಎಧಿಯವರ ಆ್ಯಂಬ್ಯುಲೆನ್ಸ್ ಸಾರಿಗೆಯ ದಕ್ಷತೆಯಿಂದಾಗಿ ಆ ಸಾವಿನ ಸಂಖ್ಯೆ ಶೇಕಡಾ ಳಂಕ್ಕಿಳಿದಿದೆ. ನೂರಕ್ಕೆ ೬೦ ಜನ ಈಗ ತಕ್ಷಣ ವೈದ್ಯ ಸಹಾಯ ಪಡೆಯುವುದರಿಂದ ಪ್ರಾಣಾಪಾಯದಿಂದ ಪಾರಾಗುತ್ತಿದ್ದಾರೆ," ಎಂದು ಅನ್ವರ್ ಕಾಜಿಮಿ ಹೇಳಿದರು. ಅನ್ವರ್ ಬಹಳ ವರ್ಷಗಳಿಂದ ಎಧಿಯವರ ಸಹಾಯಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. "ಇತ್ತೀಚೆಗೆ ಜನಾಂಗಗಳ ಘರ್ಷಣೆಯ ದೊಂಬಿಯಲ್ಲಿ ಗಾಯಗೊಂಡವರನ್ನೆಲ್ಲ ಭೇದವಿಲ್ಲದೆ ಆಸ್ಪತ್ರೆಗೆ ಕರೆತಂದು ಚಿಕಿತ್ಸೆ, ಶುಶ್ರೂಷೆ ಮಾಡುತ್ತಿರುವಾಗ ಆ ಸಂತ್ರಸ್ತರು, "ನಾವು ಬದುಕಿ ಉಳಿದುದಕ್ಕೆ ಮೇಲೆ ಇರುವ ದೇವರ ಕೃಪೆ ಮತ್ತು ಇಲ್ಲೇ ನೆಲದಲ್ಲಿರುವ ಎಧಿಯವರ ಆ್ಯಂಬ್ಯುಲೆನ್ಸ್ ಸರ್ವಿಸ್ ಕಾರಣ" ಎಂದು ಕೃತಜ್ಞತೆಯಿಂದ ಉದ್ಗರಿಸಿದರು.

೧೯೮೬ರ ಸೆಪ್ಟೆಂಬರ್ ೬ ರಂದು ಪ್ಯಾನ್ ಅಮೆರಿಕನ್ ಜೆಟ್ ಲೈನರ್ ವಿಮಾನವನ್ನು ಅಪಹರಣಕಾರರು ಕರಾಚಿ ವಿಮಾನ ನಿಲ್ದಾಣದಲ್ಲಿ ಹಿಡಿದಿಟ್ಟಾಗ, ನಿಲ್ದಾಣದ ಅಧಿಕಾರವರ್ಗದವರು ಸಹಾಯಕ್ಕಾಗಿ ಎಧಿಯವರನ್ನು ಕೇಳಿಕೊಂಡು ಕರೆಸಿದರು. ಅಪಹರಣಕಾರರು ಮತ್ತು ಪಾಕ್ ಸರ್ಕಾರದ ನಡುವೆ ಆರಂಭವಾದ ಚರ್ಚೆ ಇಡೀ ದಿನ ಎಳೆಯಿತು. ಎಧಿ ಮತ್ತು ಅವರ ಸಂಗಡಿಗರು ೫೪ ಆ್ಯಂಬ್ಯುಲೆನ್ಸ್ ವ್ಯಾನ್

ಗಳನ್ನು ಸಿದ್ಧವಾಗಿರಿಸಿಕೊಂಡು ನಿಂತಿದ್ದರು. ಇಳಿ ಬೈಗಿನಲ್ಲಿ ಸಂಧಾನ ವಿಫಲವಾಗಿ ಅಪಹರಣಕಾರರು ಪ್ರಯಾಣಿಕರ ಮೇಲೆ ಗುಂಡು ಹಾರಿಸತೊಡಗಿದಾಗ, ಪಾಕಿಸ್ತಾನಿ ಕಮ್ಯಾಂಡೊಗಳು ವಿಮಾನಕ್ಕೆ ಮುತ್ತಿಗೆ ಹಾಕಿ ಅಪಹರಣಕಾರರ ಮೇಲೆ ಗುಂಡಿನ ಮಳೆಗರೆಯುತ್ತಿದ್ದಾಗ ಮಧ್ಯೆ ನುಸುಳಿ, ನುಣುಚಿ ಸತ್ತವರನ್ನೂ ಗಾಯಗೊಂಡವರನ್ನೂ ಆ್ಯಂಬ್ಯುಲೆನ್ಸ್‌ಗೆ ಎತ್ತಿಹಾಕುವ ಕಾರ್ಯ ನಡೆದಿತ್ತು. ಸ್ವತಃ ಎಧಿಯವರೇ, ಧೀರತನದಿಂದ ಪ್ರಾಣವರ್ಪಿಸಿದ ಗಗನಸಖಿ ನೀರಜಾಮಿಶ್ರಾರ ಶವವನ್ನು, ಹೊತ್ತು ತಂದರು. ಆಕೆಗೆ ಆಮೇಲೆ ಮರಣೋತ್ತರ ವೀರಪ್ರಶಸ್ತಿಯನ್ನಿತ್ತು ಗೌರವ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

೧೯೫೦ರ ಮಧ್ಯೆ ಕರಾಚಿ ನಗರವನ್ನೆಲ್ಲ ಇನ್‌ಫ್ಲೂಯೆಂಜಾ ಸಾಂಕ್ರಾಮಿಕ ರೋಗ ವ್ಯಾಪಿಸಿದಾಗ ಎಧಿಯವರ ಬಳಿ ಇದ್ದುದು ಅದೇ ಮೊದಲನೆಯ ಒಂದೇ ಒಂದು ಆ್ಯಂಬ್ಯುಲೆನ್ಸ್ ವ್ಯಾನು. ಆದರೆ ಅದನ್ನೆ ಬಳಸಿ ಎಧಿ ಮತ್ತು ಅವರ ಬಳಗದ ಸ್ವಯಂ ಸೇವಕರು ಎಷ್ಟೊಂದು ಜನರಿಗೆ ನೆರವನ್ನು ನೀಡಿದರು, ಆಸರೆಯಾದರು ಎಂಬುದು ಇಡೀ ದೇಶಕ್ಕೇ ಗೊತ್ತು. ಅವರ ಮಹತ್ತರವಾದ ಸೇವೆಗಾಗಿ ತಮ್ಮ ಕೃತಜ್ಞತೆಯನ್ನು ತೋರಿಸಲು ಜನತೆ ಸೇವಾಕೇಂದ್ರಕ್ಕೆ ೨೬ ಸಾವಿರ ರೂಪಾಯಿ ವಂತಿಗೆಯನ್ನು ಸಂಗ್ರಹಿಸಿ ತಕೊಟ್ಟಿತು. ಆ ಹಣದಿಂದಲೇ ಎಧಿ ಒಂದು ಹೆರಿಗೆ ಆಸ್ಪತ್ರೆಯನ್ನೂ, ನರ್ಸ್ ತರಬೇತಿ ಶಾಲೆಯನ್ನೂ ಆರಂಭಿಸಿದರು. ಮೊದಮೊದಲು ಬಂಟ್ವಾ ಮುಸಲ್ಮಾನ್ ಯುವತಿಯರು ಮಾತ್ರ ನರ್ಸ್ ತರಬೇತಿಗೆ ಬಂದರು. ಕ್ರಮೇಣ ಹಿಂದೂ, ಕ್ರಿಶ್ಚಿಯನ್ನರಾದಿಯಾಗಿ ಎಲ್ಲ ಜಾತಿಯ ಹೆಣ್ಣುಮಕ್ಕಳೂ ತರಬೇತಿ ಶಾಲೆಯನ್ನು ಸೇರತೊಡಗಿದರು.

೧೯೬೦ರ ಮಧ್ಯೆ ಹೆರಿಗೆ ಆಸ್ಪತ್ರೆಯಲ್ಲಿದ್ದ ನರ್ಸ್‌ಗಳಲ್ಲಿ ಹದಿಹರೆಯದ ಬಿಲ್ಕೀಸ್ ಎಂಬಾಕೆ ಎಧಿಯವರಂತೆಯೆ ಬಂಟ್ವಾ ಮುಸಲ್ಮಾನ್ ಸಂಜಾತೆ. ಎಧಿಯವರಿಗಿಂತ ೧೫ ವರ್ಷ ಚಿಕ್ಕವಳು. ಆದರೇನು ಎಧಿ ಆಕೆಯೊಂದಿಗೆ ಮದುವೆ ಪ್ರಸ್ತಾಪ ಮಾಡಿದರು. ಈಚೆಗೆ ಒಂದು ಸಲ ಹಳೆಯದನ್ನೆಲ್ಲ ನೆನೆಸಿಕೊಂಡು ನಗುತ್ತ ಬಿಲ್ಕೀಸ್ ಹೇಳಿದರು, "ನನಗಿಂತ ಮುಂಚೆ, ಮದುವೆಯಾಗುವೆಯಾ ಎಂದು ಒಬ್ಬರಾದ ಮೇಲೆ ಒಬ್ಬರಂತೆ ೬ ಜನ ನರ್ಸ್‌ಗಳನ್ನು ಎಧಿ ಕೇಳಿ ಇಲ್ಲ ಎನಿಸಿಕೊಂಡಿದ್ದರು. ಇಂತಹ ಗೀಳಿರುವ ಹುಚ್ಚರನ್ನು ಮದುವೆಯಾಗಲು ಯಾರು ತಾನೆ ಒಪ್ಪುತ್ತಾರೆ? ಮೂರು ಹೊತ್ತೂ ಸೇವೆ ಸೇವೆ ಎಂದು ಸಾಯುತ್ತಾರೆ." ಬಿಲ್ಕೀಸ್‌ರ ಗೆಳತಿಯರು, "ಬೇಡ. ಅವರೊಂದಿಗೆ ಮದುವೆಯಾಗಲು ಖಂಡಿತಾ ಒಪ್ಪಿಕೊಳ್ಳಬೇಡ," ಎಂದು ಬುದ್ಧಿ ಹೇಳಿದರು. ಬಹಳ ಮಟ್ಟಿಗೆ ಆಕೆ ಅವರನ್ನು ಮದುವೆಯಾಗುವುದಿಲ್ಲ ಎಂದೇ ಭಾವಿಸಿದ್ದರು. ಆದರೆ ಕಡೆಗೆ ಆಕೆ ಒಪ್ಪಿದಳು. ಅವರ ಮದುವೆ ಗೊತ್ತಾಗಿದೆ ಎಂದು ತಿಳಿದಾಗ ಅವರೆಲ್ಲರಿಗೂ ಪರಮಾಶ್ಚರ್ಯ! ಮದುವೆಯಾಯಿತು. ಸರಿ. ಪ್ರಥಮ ರಾತ್ರಿಯೇ ಮುಂದೆ ಯಾವ ಬಗೆಯ ದಾಂಪತ್ಯ ಜೀವನ ಅವರದಾಗಬಹುದು ಎಂಬುದು ಚೆನ್ನಾಗಿಯೇ ಸೂಚಿತವಾಯಿತು. ಮದುವೆಯ ಧಾರ್ಮಿಕ ವಿಧಿಗಳೆಲ್ಲ ಮುಗಿದ ಮೇಲೆ ಎಧಿ ತಮ್ಮ ಉಚಿತ ಚಿಕಿತ್ಸಾಲಯವೊಂದಕ್ಕೆ ಸುಮ್ಮನೆ ನೋಡಿ ಬರಲು ಹೋದರು. ಅದೇ ಸಮಯಕ್ಕೆ ತಲೆಗೆ ತೀವ್ರವಾದ ಪೆಟ್ಟಾಗಿದ್ದ ೧೨ ವರ್ಷದ

ಹುಡುಗಿಯೊಬ್ಬಳನ್ನು ಯಾರೊ ಕರೆತಂದಿದ್ದರು. ಎಧಿ ಕೂಡಲೆ ಆಕೆಯನ್ನು ಕರಾಚಿಯ ಸಿವಿಲ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ಇಡೀ ರಾತ್ರಿ ಆ ಹುಡುಗಿಗೆ ರಕ್ತ ಕೊಡಿಸುವುದರಲ್ಲಿ, ಆಕೆಯ ಮನೆಯವರಿಗೆ ಧೈರ್ಯ, ಸಮಾಧಾನ ಹೇಳುವುದ ರಲ್ಲಿ ಕಳೆದರು. "ಪ್ರಥಮ ರಾತ್ರಿಯೇ ಹೀಗಾಯಿತೆಂದು ನನಗೇನೂ ಕೆಟ್ಟದೆನಿಸಲಿಲ್ಲ. ಆ ಹುಡುಗಿ ಈಗ ಮದುವೆಯಾಗಿ ಮಕ್ಕಳಾಗಿ ಸುಖವಾಗಿದ್ದಾಳೆ. ಅದು ಮುಖ್ಯ," ಎಂದರು ಬಲ್ಕೀಸ್.

ಎಧಿಯವರ ಸೇವಾಸಂಸ್ಥೆಗಳ ಪ್ರಧಾನ ಕಚೇರಿ ಕರಾಚಿಯಲ್ಲಿದೆ. ಅಲ್ಲಿ ಒಂದು ಉಚಿತ ಹೆರಿಗೆ ಆಸ್ಪತ್ರೆಯನ್ನು ನಡೆಸುವ ಪೂರ್ಣ ಜವಾಬ್ದಾರಿಯನ್ನು ಬಲ್ಕೀಸ್ ಹೊತ್ತಿದ್ದಾರೆ. ನೀತಿಬಾಹಿರವಾಗಿ ಹುಟ್ಟಿದ, ಪರಿತ್ಯಕ್ತನಾದ ಶಿಶುಗಳನ್ನು ದತ್ತು ಪಡೆದು ಸಾಕುವಂತೆ ಮಕ್ಕಳಿಲ್ಲದವರನ್ನು ಪ್ರೇರೇಪಿಸುವ, ಪ್ರೋತ್ಸಾಹಿಸುವ ಕಾರ್ಯವೂ ಅವರದೇ. ದತ್ತುಸ್ವೀಕಾರದ ವ್ಯವಸ್ಥೆಯನ್ನೂ ಮಾಡುತ್ತಾರೆ. ಹೀಗೆ ಇದುವರೆಗೆ ಒಂದು ಸಾವಿರಕ್ಕೂ ಹೆಚ್ಚು ಶಿಶುಗಳನ್ನು ಮಕ್ಕಳಿಲ್ಲದ ತಾಯಿತಂದೆಯರ ಮಡಿಲಿಗೆ ಹಾಕಿ ಪ್ರೀತಿಯ ನೆಲೆ ಒದಗಿಸಿದ್ದಾರೆ. ಹಾಗೆ ತಾನು ನೋಡಿಕೊಳ್ಳುತ್ತಿದ್ದ ಮಗು ವನ್ನು ದತ್ತುಕೊಟ್ಟು ಒಪ್ಪಿಸುವಾಗ ಪ್ರತಿಸಲವೂ ಕರುಳು ಕಿತ್ತು ಬರುತ್ತದೆ ಎನ್ನು ತ್ತಾರೆ ಸ್ವತಃ ನಾಲ್ಕು ಮಕ್ಕಳ ತಾಯಿಯಾಗಿರುವ ಬಲ್ಕೀಸ್. "ನಮಗೆ ಸಿಕ್ಕಾಗ ಎಷ್ಟೋ ಶಿಶುಗಳು ಸಾಯುವ ಸ್ಥಿತಿಯಲ್ಲಿದ್ದವು. ಬಹಳ ಕಷ್ಟದಿಂದ ಅವುಗಳ ಶುಶ್ರೂಷೆ ಮಾಡಿ ಬದುಕಿಸಿ, ಆರೋಗ್ಯಸ್ಥಿತಿಗೆ ತರಬೇಕಾಗುತ್ತಿತ್ತು. ಅಷ್ಟಾದ ಮೇಲೆ ಅವುಗಳನ್ನು ಅಗಲುವ ಸಂದರ್ಭ ಬಂದಾಗ ಮನಸ್ಸಿಗೆ ಅತೀವ ವೇದನೆಯಾಗುತ್ತಿತ್ತು," ಎಂದು ಆಕೆ ಹೇಳುತ್ತಿದ್ದರು.

ತುಂಬಾ ಸಂಪ್ರದಾಯಸ್ಥ ಮುಸಲ್ಮಾನ್ ಕುಟುಂಬದಲ್ಲಿ ಹುಟ್ಟಿದ್ದರೂ, (ಪಾಕಿಸ್ತಾನಿಗಳು ಮೌಲಾನಾ ಎಂದೇ ಕರೆಯುವ) ಎಧಿಯವರು ಮಹಿಳೆಯನ್ನು ಎಂದೂ ಹಳೆಯ ಕಂದಾಚಾರದ ದೃಷ್ಟಿಯಲ್ಲಿ ನೋಡುವುದಿಲ್ಲ. "ಗಂಡಸರಿಗಿಂತ ಹೆಚ್ಚು ಕಷ್ಟಪಟ್ಟು ಕೆಲಸ ಮಾಡುತ್ತಾರೆ. ಅವರಲ್ಲಿ ಹೆಚ್ಚು ಪ್ರಾಮಾಣಿಕತೆ, ಶ್ರದ್ಧೆ ಮತ್ತು ಅರ್ಪಣಾ ಮನೋಭಾವ ಇವೆ," ಎಂದು ಮಹಿಳೆಯರ ಬಗ್ಗೆ ಅವರ ಅಭಿ ಪ್ರಾಯ. ಎಷ್ಟೋ ಜನ ಸ್ತ್ರೀಯರನ್ನೇ ತಮ್ಮ ಆ್ಯಂಬ್ಯುಲೆನ್ಸ್ ಡ್ರೈವರುಗಳನ್ನಾಗಿ ನೇಮಿಸಿದ್ದಾರೆ. ಶವಗಳನ್ನು ಸಾಗಿಸುವ, ಅಪಘಾತಕ್ಕೊಳಗಾದವರನ್ನು ತುರ್ತು ಚಿಕಿತ್ಸೆಗೆ ಒಯ್ಯುವ, ಧೈರ್ಯ ದಿಟ್ಟತನ ಅಗತ್ಯವಿರುವ ಕೆಲಸಗಳಿಗೂ ಹೆಣ್ಣುಮಕ್ಕ ಳನ್ನು ಹಚ್ಚುತ್ತಾರೆ. ಅದು ಗಂಡಸರ ಕೆಲಸ ಎನ್ನುವುದಿಲ್ಲ.

ತಮ್ಮ ಬಳಿಗೆ ಸಹಾಯ ಬೇಡಿ ಬರುವ ಹೆಣ್ಣುಮಕ್ಕಳ ಮರ್ಯಾದೆ, ಗೌರವ ಗಳನ್ನು ಕಾಪಾಡುವ ಬಗ್ಗೆ ಕಾಳಜಿ ವಹಿಸುತ್ತಾರೆ. ಮದುವೆಯಾಗದೆ ಗರ್ಭವತಿಯ ರಾದ ಮಹಿಳೆಯರು ಎಧಿಯವರ ಹೆರಿಗೆ ಆಸ್ಪತ್ರೆಗೆ ಬಂದಾಗ ಅವರಿಗೆ ನೀತಿಬೋಧಕ ಭಾಷಣ ಕೊಡುವುದಿಲ್ಲ. ತಾವು ಪತಿತರೆಂಬ ಭಾವನೆ, ನಾಚಿಕೆ, ಅವರಲ್ಲುಂಟಾಗು ವಂತಹ ಯಾವ ಮಾತನ್ನೂ ಆಡುವುದಿಲ್ಲ. ಆಸ್ಪತ್ರೆಯವರು ಯಾರೂ ಅವರನ್ನು ತಿರಸ್ಕಾರ ಭಾವದಿಂದ ಕಾಣಲು ಅವಕಾಶ ಕೊಡುವುದಿಲ್ಲ. ಒಮ್ಮೆ ಸಿಜೇರಿಯನ್

ಆಪರೇಷನ್ ಮಾಡಿ ಹೆರಿಗೆ ಮಾಡಿಸಬೇಕಾಗಿ ಬಂದ ಒಬ್ಬ ಅವಿವಾಹಿತೆಯನ್ನು ಎಧಿ, ತಮ್ಮ ಆಸ್ಪತ್ರೆಯಲ್ಲಿ ಅಂತಹ ಸೌಲಭ್ಯ ಇರದಿದ್ದರಿಂದ, ಕರಾಚಿಯ ಸಿವಿಲ್ ಆಸ್ಪತ್ರೆಗೆ ಕರೆದೊಯ್ಯಬೇಕಾಯಿತು. ಬಾಯಿಗೆ ಬಂದ ಹಾಗೆ ಹಗುರವಾಗಿ ಮಾತಾಡಲು ಅವಕಾಶವಾಗಬಾರದು, ಆಕೆಯ ಮರ್ಯಾದೆಯನ್ನು ಕಾಯಬೇಕು ಎಂದು ಹುಟ್ಟಲಿರುವ ಮಗುವಿನ ತಂದೆ ತಾವೇ ಎಂದು ಹೇಳಿಕೆ ಕೊಟ್ಟು ಬರೆಸಿದರು. "ಮಾರನೆ ದಿನ, ಗಂಡುಮಗು ಹುಟ್ಟಿದನೆಂದು ಖುಷಿ ತೋರಿಸಲು ೫೦೦ ರೂಪಾಯಿ ಬಕ್ಷೀಸು ಹಂಚಿದೆವು. ಎಲ್ಲರೂ ಎಧಿಯವರ ಎರಡನೇ ಹೆಂಡತಿ ಎಂದೇ ತಿಳಿದರು," ಎಂದು ಅಂದಿನ ಪ್ರಸಂಗವನ್ನು ಜ್ಞಾಪಿಸಿಕೊಳ್ಳುತ್ತಾರೆ ಬಲ್ಕೀಸ್.

ಬಹುಶಃ ತಮ್ಮ ತಾಯಿ ಪಟ್ಟ ಪಾಡನ್ನು ನೋಡಿದ್ದರಿಂದಲೊ ಏನೊ, ಮನೋವೈಕಲ್ಯಕ್ಕೆ ಗುರಿಯಾದವರನ್ನು ಕಂಡರೆ, ಎಧಿಯವರಿಗೆ ಕರುಳು ಚುರ್ ಎನ್ನುತ್ತದೆ. ಅವರನ್ನು ಭೆಟ್ಟಿಯಾದ ಸಂದರ್ಭದಲ್ಲಿ ಬುದ್ಧಿಮಾಂದ್ಯರ ಪುನರ್ವಸತಿ ಕೇಂದ್ರಕ್ಕೆ ನನ್ನನ್ನು ಕರೆದೊಯ್ದರು. ಎಧಿಯವರನ್ನು ನೋಡಿದ ಕೂಡಲೆ ಆ ಮಕ್ಕಳು ಓಡಿ ಬಂದು ಸುತ್ತುವರಿದು ಅವರ ಕೈಹಿಡಿಯಲು, ಮೈಮುಟ್ಟಲು, ಪೈಪೋಟಿ ಮಾಡತೊಡಗಿದರು. ಒಂದು ಪುಟ್ಟ ಹುಡುಗನನ್ನು ಬಹು ಮಮತೆಯಿಂದ ಎತ್ತಿ ತೊಡೆಯ ಮೇಲೆ ಕೂಡಿಸಿಕೊಳ್ಳುತ್ತ ನನ್ನ ಕಡೆ ಆವೇದನಾಪೂರ್ಣವಾದ ನಗೆ ಬೀರುತ್ತ, "ನನ್ನ ಮನಸ್ಸೆಲ್ಲ ಬೇರೆಲ್ಲಕ್ಕಿಂತ ಈ ಮಕ್ಕಳ ಕಡೆಯೇ ಹರಿಯುತ್ತದೆ. ಇವರಲ್ಲಿ ನಿಜವಾಗಿಯೂ ನಾನು ಸಾಕ್ಷಾತ್ ದೇವರನ್ನೇ ಕಾಣುತ್ತೇನೆ," ಎಂದರು ಮೃದುವಾಗಿ.

ಎಧಿಯವರ ಪ್ರೀತಿ, ಅನುಕಂಪ ಕೇವಲ ಪಾಕಿಸ್ತಾನಿ ಜನರ ಮೇಲೆ ಮಾತ್ರ ಎಂದು ತಿಳಿಯಬಾರದು. ಎಧಿಯೋಪಿಯಾದಲ್ಲಿ ಭೀಕರ ಕ್ಷಾಮ ಬಂದಾಗ ಅಲ್ಲಿನ ಜನರಿಗೆ ಆಹಾರವೊದಗಿಸಲು ೫೩ ಸಾವಿರ ಡಾಲರ್ ಹಣವನ್ನು ದಾನವಾಗಿ ಕಳಿಸಿಕೊಟ್ಟರು. ಬೈರೂಟ್‌ನ ನಿರಾಶ್ರಿತರ ಶಿಬಿರದ ಮೇಲೆ ದಾಳಿ ಮಾಡಿದ ಫ್ಯಾಲಂಜಿಸ್ಟರು ಘೋರ ಹತ್ಯಾಕಾಂಡ ನಡೆಸಿದಾಗ ಹತರಾದವರ ಕುಟುಂಬಗಳಿಗೆ ಪರಿಹಾರವಾಗಿ ಹಂಚಲು ೬೬ ಸಾವಿರದ ನಾಲ್ಕುನೂರು ಡಾಲರ್ ಹಣವನ್ನು ನೀಡಿದರು. ಬಾಂಗ್ಲಾದೇಶದವರಿಗೆ ಒಂದು ಆ್ಯಂಬ್ಯುಲೆನ್ಸ್ ವ್ಯಾನನ್ನು ದಾನಮಾಡಿದ್ದಾರೆ. ಥೈಲ್ಯಾಂಡಿನಲ್ಲಿ ಮಹಿಳೆಯರ ಹಾಸ್ಟೆಲ್ ಕಟ್ಟಿಸಲು ೧೦ ಸಾವಿರ ಡಾಲರ್ ಮೊತ್ತವನ್ನು ದಾನ ಮಾಡಿದ್ದಾರೆ.

ದೇಶಾದ್ಯಂತ ವ್ಯಾಪಕವಾಗಿ ರಚಿಸಿರುವ ಈ ಸೇವಾಕಾರ್ಯಜಾಲದ ಆಡಳಿತಕ್ಕೆ ಎಧಿಯವರು ತಮ್ಮದೇ ಆದ ವಿಶಿಷ್ಟ ವಿಧಾನವನ್ನು ರೂಪಿಸಿಕೊಂಡಿದ್ದಾರೆ. ಅವರ ಸೇವಾಸಂಸ್ಥೆಗಳಲ್ಲಿ ಇರುವವರು ಗುಡಿಸುವುದು, ಸ್ವಚ್ಛ ಮಾಡುವುದು, ಅಡಿಗೆ ಮಾಡುವುದು ಮುಂತಾದ ತಮಗೆ ಅಗತ್ಯವಾದ ಎಲ್ಲ ಕೆಲಸಗಳನ್ನೂ ತಾವೇ ಮಾಡಿಕೊಳ್ಳುತ್ತಾರೆ. ಸಂಬಳದ ನೌಕರ ಚಾಕರರನ್ನಿಟ್ಟುಕೊಳ್ಳದಿರುವುದರಿಂದ ಎಷ್ಟೋ ಖರ್ಚು ಕಡಿಮೆಯಾಗಿದೆ. ಸಂಬಳವಿಲ್ಲದೆ ಸೇವಾಮನೋಭಾವದಿಂದ ಕೆಲಸಮಾಡುವ ಸ್ವಯಂಸೇವಕರೇ ಹೆಚ್ಚು. "ಪ್ರತಿಯೊಬ್ಬರೂ ಕೆಲಸ ಮಾಡುವುದರಿಂದ ಅವರ ದೈಹಿಕ ಮಾನಸಿಕ ಆರೋಗ್ಯವೂ ಚೆನ್ನಾಗಿರುತ್ತದೆ. ಸ್ವಾವಲಂಬನೆಯ ಮನೋಧರ್ಮವೂ ಬೆಳೆಯುತ್ತದೆ,"

ಎಂದು ಎಧಿಯವರು ಹೇಳುತ್ತಾರೆ. ಕೆಲಸಕಾರ್ಯಗಳ ಜವಾಬ್ದಾರಿಯನ್ನು ಅನೇಕ ಕಾರ್ಯಕರ್ತರಿಗೆ ವಹಿಸಿದರೂ ಎಲ್ಲೋ ದೂರದಲ್ಲಿ ಕುಳಿತು ಕೇವಲ ಸೂತ್ರವಾಡಿಸುವವರಂತಲ್ಲ ಎಧಿಯವರು. ಸ್ವತಃ ತಮ್ಮ ಪಾಲಿನ ಕೆಲಸಗಳನ್ನು ಚಿಕ್ಕದು ದೊಡ್ಡದು ಎನ್ನದೆ ತಾವೇ ಮಾಡುತ್ತಾರೆ. ಫೋನ್ ಕರೆಗಳಿಗೆ ಉತ್ತರಿಸುವುದು, ಕೆಲವು ಸಲ ಆ್ಯಂಬ್ಯುಲೆನ್ಸ್ ವಾಹನಗಳನ್ನು ತಾವೇ ಓಡಿಸುವುದು ನಡೆದು ಬಂದಿರುವ ವಾಡಿಕೆ.

ಎಧಿಯವರಿಗೆ ಕೋಪವೂ ಬರುತ್ತದೆ. ಒಂದು ಸಲ ಅವರ ಆಫೀಸಿನಲ್ಲಿ ನಾನು ಕೂತಿದ್ದಾಗ ಒಬ್ಬ ಹೆಂಗಸು ಅದೇ ಬೀದಿಯ ಆಚೆ ಬದಿಯಿದ್ದ ಎಧಿ ಆಸ್ಪತ್ರೆಯ ಡಾಕ್ಟರೊಬ್ಬರು ರೋಗಿಗಳನ್ನು ಸರಿಯಾಗಿ ನೋಡುತ್ತಿಲ್ಲ ಎಂದು ದೂರು ತಂದಳು. ಕೂಡಲೇ ಅವಳೊಂದಿಗೆ ಎಧಿ ಆಸ್ಪತ್ರೆಗೆ ಹೋದರು. ಡಾಕ್ಟರು ಆರಾಮವಾಗಿ ಕೂತಿದ್ದುದನ್ನು ಕಣ್ಣಾರೆ ಕಂಡರು. ಚೆನ್ನಾಗಿ ಅವರನ್ನು ತರಾಟೆಗೆ ತೆಗೆದುಕೊಂಡರು. ಸರಿಯಾಗಿ ಬೈದು ಅವರ ಮುಖದ ಬೆವರಿಳಿಸಿದರು. ಇನ್ನೊಂದು ಸಲ ಅಂತಹ ದೂರು ಬಂದರೆ ಆ ಕ್ಷಣ ಕೆಲಸದಿಂದ ತೆಗೆದುಹಾಕುವುದಾಗಿ ಬೆದರಿಸಿದರು. ಆಫೀಸಿಗೆ ಮರಳಿ ಬಂದ ಮೇಲೆಯೇ ಕೋಪವಿಳಿದು ಶಾಂತರಾದುದು. ಆಗ, "ಹೀಗೆ ಚುರುಕು ಮುಟ್ಟಿಸಿದರೇನೇ ಈ ವಿದ್ಯಾವಂತರೆಂದುಕೊಳ್ಳುವವರು, ಆಲಸ್ಯ ತೋರದೆ ಕೆಲಸ ಮಾಡಬೇಕು, ಎಂಬುದನ್ನು ಅರಿತುಕೊಳ್ಳುವುದು," ಎಂದರು ನನ್ನ ಕಡೆ ನೋಡಿ ನಗುತ್ತ.

ಇಷ್ಟೊಂದು ಅಪಾರವಾದ ಕೀರ್ತಿ, ಪ್ರತಿಷ್ಠೆಗಳಿದ್ದರೂ, ಕೈಯಲ್ಲಿ ಲಕ್ಷಾಂತರ, ಕೋಟ್ಯಂತರ ಹಣ ಓಡಾಡಿದರೂ ಎಧಿಯವರ ಜೀವನ, ಪಾಕಿಸ್ತಾನದ ಯಾವುದೇ ಕೆಳಮಧ್ಯಮವರ್ಗದ ಕುಟುಂಬ ಎಷ್ಟು ಸರಳವಾದ ಜೀವನ ನಡೆಸಬಹುದೊ, ಅಷ್ಟೇ ಸರಳವಾಗಿದೆ. ಎಧಿ, ಪತ್ನಿ ಬಲ್ಕೀಸ್, ಅವರ ನಾಲ್ಕು ಜನ ಮಕ್ಕಳು, ಬಲ್ಕೀಸ್‌ರ ತಾಯಿ ಇಷ್ಟು ಜನ ಆಫೀಸಿಗೆ ಸಮೀಪದಲ್ಲಿಯೇ ಎರಡು ಬೆಡ್‌ರೂಮಿನ ಒಂದು ಫ್ಲ್ಯಾಟಿನಲ್ಲಿ ವಾಸವಾಗಿದ್ದಾರೆ. ಎಧಿಯವರಾಗಲಿ ಅವರ ಪತ್ನಿ ಬಲ್ಕೀಸ್‌ರಾಗಲಿ ಯಾವ ಸಂಬಳವನ್ನೂ ಪಡೆಯುತ್ತಿಲ್ಲ. ಬಹುಕಾಲದ ಹಿಂದೆ ಎಧಿಯವರು ಸರ್ಕಾರದಿಂದ ಕೊಂಡ ಭದ್ರತಾ ಠೇವಣಿಗಳಿಗೆ ಬರುವ ಬಡ್ಡಿಯಿಂದ ಸಾಧಾರಣವಾದ ಸರಳ ಜೀವನವನ್ನು ನಡೆಸುತ್ತಿದ್ದಾರೆ.

ಇದುವರೆಗೆ ಸಾಧಿಸಿರುವುದೇ ಬೇಕಾದಷ್ಟಾದರೂ ಎಧಿಯವರಿಗೆ ಆ ಬಗ್ಗೆ ಅಹಂಭಾವವಾಗಲಿ, ತೃಪ್ತಿಯಾಗಲಿ ಇಲ್ಲ. ಇನ್ನೂ ಹೆಚ್ಚು ಹೆಚ್ಚು ಸಾಧಿಸುವ ಹಂಬಲವಿದ್ದು ಹೊಸ ಹೊಸ ಯೋಜನೆಗಳನ್ನು ಹಾಕಿಕೊಳ್ಳುತ್ತಲೇ ಇದ್ದಾರೆ. ಇವುಗಳಲ್ಲಿ ಇತ್ತೀಚಿನವು ಎಂದರೆ ಆ್ಯಂಬ್ಯುಲೆನ್ಸ್ ವಿಮಾನ ಸಾರಿಗೆ; ಒಂದು ಅತ್ಯಾಧುನಿಕ ವೈದ್ಯ ಸಲಕರಣೆಗಳುಳ್ಳ ಮಕ್ಕಳ ಆಸ್ಪತ್ರೆ, ಒಂದು ಕುಷ್ಠರೋಗ ಚಿಕಿತ್ಸಾಕೇಂದ್ರ; ಒಂದು ಪಶುವೈದ್ಯಶಾಲೆ; ಮತ್ತು ದಿಕ್ಕುಗೆಟ್ಟ ಬೀದಿಪಾಲಾದ ೨೦೦೦ ಮಹಿಳೆಯರಿಗೆ ಪುನರ್ವಸತಿಯೊದಗಿಸುವ ಸಾಮರ್ಥ್ಯವುಳ್ಳ ಒಂದು ನರ್ಸ್ ಟ್ರೇನಿಂಗಿನ ಬೃಹತ್ ಸಂಕಿರಣ ಹಾಗೂ ಅದಕ್ಕೆ ಹೊಂದಿಕೊಂಡ ದೊಡ್ಡ ಹಾಸ್ಟೆಲ್, ಇಷ್ಟನ್ನು ಸ್ಥಾಪಿಸುವ ಯೋಜನೆಗಳು. "ಇದಕ್ಕೆಲ್ಲ ಭಾರಿ ಮೊತ್ತದ ಹಣ ಬೇಕಾಗುತ್ತೆ, ನಿಜ," ಎಂದು

ನಿಟ್ಟುಸಿರುಗರೆಯುತ್ತಾರೆ. ಆದರೆ ಹತಾಶರಾಗದೆ ಉತ್ಸಾಹದಿಂದ ಮರುಕ್ಷಣ "ಇದಕ್ಕೆ ಎಷ್ಟು ಸಹಾಯ ಒದಗಬಹುದೊ ಅಷ್ಟೂ ಬೇಕಾಗುತ್ತದೆ. ಜನತೆಯಿಂದಲೇ ಈ ನೆರವು ಸಿಕ್ಕುತ್ತದೆ," ಎಂದು ವಿಶ್ವಾಸದಿಂದ ಹೇಳುತ್ತಾರೆ.

ಕರಾಚಿಯನ್ನು ಬಿಡುವ ದಿನ ಮುಘ್ನ್ಯಾಸ್ನ ಎಧಿಯುವವರನ್ನು ಕೇಳಿದೆ, "ಇಷ್ಟೆಲ್ಲ ಮಾಡಿದುದಕ್ಕೆ ನಿಮಗೆ ಯಾವ ಪ್ರತಿಫಲ ದೊರೆತಿದೆ?" ಈ ಪ್ರಶ್ನೆ ಕೇಳುತ್ತಲೆ ಅವರ ಮುಖ ಕೋಪದಿಂದ ಗಂಟಿಕ್ಕಿತು. "ಮಾಡಿದುದಕ್ಕೆ ಏನಾದರೂ ಸ್ವಲ್ಪ ಪ್ರತಿಫಲ ಬಂದೇ ತೀರಬೇಕೆನ್ನುತ್ತೀರಾ?" ಎಂದು ಮರುಪ್ರಶ್ನಿಸಿದರು. ಮತ್ತೆ ಕೋಪವಿಳಿದು ಶಾಂತವಾಗಿ ಮೆತ್ತಗೆ, "ಈ ಒಂದು ಅಲ್ಪವಾದ ಸೇವೆಗೆ ನನಗೆ ದೊರೆತಿರುವ ಅಪಾರವಾದ ಆನಂದವನ್ನು ಮಾತು ಬಣ್ಣಿಸಲಾರದು. ನನ್ನ ಮನಸ್ಸು ಎತ್ತರಕ್ಕೆ ಎತ್ತರಕ್ಕೆ ಏರುತ್ತ ಉಲ್ಲಾಸದಿಂದ ಹಾಡುತ್ತಿದೆ," ಎಂದರು.

ಅನು : ಕೆ. ಬಿ. ಪ್ರಭುಪ್ರಸಾದ್

ರಾಜಕೀಯ ಕ್ಷೇತ್ರದಲ್ಲಿಯ ನನ್ನ ಪ್ರಯೋಗಗಳನ್ನು ಭಾರತವೇ ಅಲ್ಲದೆ ಬಹುಮಟ್ಟಿಗೆ ನಾಗರಿಕ ಜಗತ್ತೂ ಅರಿತಿದೆ. ನನಗಾದರೋ ಅವುಗಳು ಹೆಚ್ಚು ಮೌಲ್ಯವಾದವುಗಳಲ್ಲ. ನಾನು ಸಾಧಿಸಬೇಕೆಂದಿರುವುದು ಆತ್ಮಸಾಕ್ಷಾತ್ಕಾರ; ದೇವರನ್ನು ಮುಖತಃ ದರ್ಶಿಸಿ ಮೋಕ್ಷಸಾಧನೆ ಮಾಡುವುದು.

ಗಾಂಧೀಜಿ

ಅಳು ನುಂಗಿ, ನಕ್ಕ ಮಹಾದೇವಿವರ್ಮಾ —ಒಂದು ಪರಿಚಯ

ಎಚ್. ಎಂ. ಕುಮಾರಸ್ವಾಮಿ

'ಛಾಯಾವಾದ'ವೆಂಬುದು ಹಿಂದಿ ಸಾಹಿತ್ಯದ ಸ್ವರ್ಣಕಾಲ—ಇದರ ಜಾಡಿನಲ್ಲೇ ಮುಂದೆ ಪ್ರಯೋಗವಾದ, ಪ್ರಗತಿವಾದ ಜನ್ಮಿಸಿದವು. ಹಲವಾರು ಕವಿಗಳು ತಂತಮ್ಮ ಜಾಡನ್ನು ಆರಿಸಿಕೊಂಡರು—ಬದಲಿಸಿಕೊಂಡರು. ಆದರೆ ಶ್ರೀಮತಿ ಮಹಾದೇವಿ ವರ್ಮಾ ಮಾತ್ರ ಮೂಲ ಜಾಡನ್ನು ಬಿಡಲಿಲ್ಲ. ಇಂಗ್ಲೀಷಿನಲ್ಲಿ, 'ಮಿಸ್ಟಿಸಿಜಂ' ಎಂದೆನಿಸಿಕೊಳ್ಳುವ, ಕನ್ನಡದಲ್ಲಿ 'ಅನುಭಾವ' ಎನಿಸಿಕೊಳ್ಳುವ ಹಿಂದಿಯ ರಹಸ್ಯವಾದವನ್ನು ಛಾಯವಾದದ ಜೊತೆಗೆ ಬೆರೆಸಿ ತಮ್ಮದೇ ಆದ ವಿಶಿಷ್ಟ 'ರಹಸ್ಯಾತ್ಮಕ ದೃಷ್ಟಿಕೋನ'ದಿಂದ ಬದುಕನ್ನು ವಿಶ್ಲೇಷಿಸಿ ಮುನ್ನಡೆದರು. ಜೀವನ ಹಾಗೂ ಸಾಹಿತ್ಯ ಎರಡೂ ಕ್ಷೇತ್ರಗಳಲ್ಲಿ ತಾದಾತ್ಮ್ಯ ಸ್ಥಾಪಿಸಿ ಎರಡನ್ನು ಏಕ ಸೂತ್ರದಲ್ಲಿ ಕೊಂಡೊಯ್ದ ಕೆಲವೇ ವ್ಯಕ್ತಿಗಳಲ್ಲಿ ಒಬ್ಬರಾಗಿ' ತಮ್ಮ 'ಯಾಮಾ' ಎಂಬ ಕವನ ಸಂಕಲನಕ್ಕಾಗಿ ೧೯೮೨ರ 'ಭಾರತೀಯ ಜ್ಞಾನಪೀಠ' ಪ್ರಶಸ್ತಿ ಪಡೆದ ಶ್ರೀಮತಿ ಮಹಾದೇವಿವರ್ಮಾ ಮೊನ್ನೆ ೧೧-೯-೮೭ (ಜನನ ೧೯೦೭)ರಂದು ತೀರಿಕೊಂಡರು. ಇವರ ಅಂತ್ಯದೊಂದಿಗೆ ಹಿಂದಿ ಸಾಹಿತ್ಯಕ 'ಛಾಯಾವಾದ' ಯುಗದ ಪೂರ್ಣ ಅಂತ್ಯಕೂಡಾ ಆಯಿತು.

ಶ್ರೀಮತಿ ಮಹಾದೇವಿಯವರ ಬದುಕು ಪೂರ್ತಿ 'ವೇದನಾಮಯ'ವಾಗಿತ್ತು. ಹಾಗೆಂದೇ ಏನೋ, ಇವರನ್ನು ಕೆಲವರು 'ಆಧುನಿಕ ಮೀರಾ' ಎಂದು ಕರೆದಿದ್ದಾರೆ. ಈ ಹೋಲಿಕೆ ತಪ್ಪು. ಏಕೆಂದರೆ ಮೀರಾಬಾಯಿಯ 'ಆರಾಧನಾದೈವ 'ಶ್ರೀಕೃಷ್ಣ' ಆಗಿದ್ದ. ಆದರೆ ಶ್ರೀಮತಿ ವರ್ಮಾರವರ ಆರಾಧನೆಯ ಕ್ಷೇತ್ರ 'ಮಾನವೀಯತೆ.' ಸಮಸ್ತ ಜೀವಕೋಟಿಗೆ ಲೇಸನ್ನು ಬಯಸುವ, ಪರರವೇದನೆಯನ್ನು 'ಸ್ವವೇದನೆ' ಎಂದು ಪರಿಗಣಿಸುವ ಪ್ರವೃತ್ತಿಯು ಮಹಾದೇವಿ

ವರ್ಮಾರವರನ್ನು ಬೇಕಿದ್ದರೆ 'ಮಹಾ ಮಾನವತಾವಾದಿ' ಎನ್ನಬಹುದು. ಈ ಎಲ್ಲಾ ಅಂಶಗಳು ಅವರ ಬದುಕನ್ನು ಕೆದಕಿದಾಗ ವೇದ್ಯವಾಗುತ್ತದೆ.

"ನಮ್ಮ ಭೌತಿಕ ಜೀವನ ಸಾಪೇಕ್ಷ ಹಾಗೂ ಅಪೂರ್ಣವಾದದ್ದು. ಅಪೂರ್ಣತೆಯಿಂದ ಪೂರ್ಣತೆಯ ಕಡೆಗೆ ನಡೆಯುವ ಪ್ರವೃತಿ ನಮ್ಮ ಬದುಕಿನದ್ದಾಗಿದೆ"—ಎಂದು ಬದುಕನ್ನು ಅರ್ಥೈಸಿದ ಶ್ರೀಮತಿ ಮಹಾದೇವಿವರ್ಮಾ ಕೊನೇತನಕ ಮಾನವೀಯತೆಯ ಅಂಶ ಇಳಿಮುಖವಾಗುತ್ತಿರುವ ಬಗೆಗೆ ಬಹಳವಾಗಿ ನೊಂದುಕೊಂಡಿದ್ದರು. ಪಂಜಾಬಿನ ಸ್ಥಿತಿ ಬಗ್ಗೆಯಂತೂ ಅವರ ವೇದನೆ ಅಪಾರವಾಗಿತ್ತು.

ಬಾಲ್ಯ – ಬದುಕು

ಉತ್ತರ ಪ್ರದೇಶದ ಫರೂಕಾಬಾದ್‌ನ ಒಂದು ಸಮೃದ್ಧ ಪರಿವಾರದಲ್ಲಿ ಜನಿಸಿದ ಮಹಾದೇವಿವರ್ಮಾರವರ ಬಾಲ್ಯ ಅತ್ಯಂತ ಸ್ವಚ್ಛಂದತೆಯಲ್ಲಿ ಕಳೆಯಿತು. ತಂದೆ ಗೋವಿಂದಪ್ರಸಾದ್‌ವರ್ಮಾ ಹಾಗೂ ತಾಯಿ ರಾಣಿದೇವಿಯ ಪ್ರೀತಿಯ ಮಗಳಾಗಿ ಬೆಳೆದ ಮಹಾದೇವಿಯ ವಿವಾಹ ಅತೀ ಚಿಕ್ಕ ವಯಸ್ಸಿನಲ್ಲಿ ರೂಪನಾರಾಯಣರೊಡನೆ ಆಯಿತು—ಅಷ್ಟೇ ಬೇಗ ಅದು ಮುರಿಯಿತುಕೂಡಾ. ಇವರ ಪ್ರಾರಂಭಿಕ ಶಿಕ್ಷಣ ಇಂದೋರ್‌ನಲ್ಲಿ ನಂತರ ಪ್ರಯಾಗ್ ವಿಶ್ವವಿದ್ಯಾನಿಲಯದಲ್ಲಿ ಆಯಿತು. ಪ್ರಯಾಗ್ ಮಹಿಳಾ ವಿದ್ಯಾಪೀಠದಲ್ಲಿ ಅಧ್ಯಾಪನ ವೃತ್ತಿ ಮುಂದೆ ಇದೇ ಮಹಿಳಾ ವಿದ್ಯಾಲಯದ ಉಪಕುಲಪತಿಯಾಗಿ ನಿವೃತ್ತಿ.

ಬಾಲ್ಯದಿಂದಲೂ ಸಾಹಿತ್ಯದ ಕಡೆಗೆ ಮಹಾದೇವಿಯ ಒಲವು ಏಳನೇ ವರ್ಷದ ಚಿಕ್ಕವಯಸ್ಸಿನಿಂದಲೇ ಕವಿತೆ ಬರೆಯುವ ಗೀಳು, ಅವರ ಮೊದಲನೇ ಕವಿತೆಯ ಸಾಲುಗಳು ಹೀಗಿವೆ—

> "ಬನ್ನಿ ಬನ್ನಿ ಪ್ರೀತಿಯ ತಾರೆಗಳೇ
> ಬಂದು ಅಡಗಿ ಎನ್ನ ಮನದಂಗಳದೊಳಗೆ..."

—ಮುಂದೆ ಅವ್ಯಾಹತವಾಗಿ ಕಾವ್ಯಧಾರೆ ಹರಿಯಿತು. ಸ್ನಾತಕೋತ್ತರ ಪದವಿ ಪಡೆಯುವ ಹೊತ್ತಿಗಾಗಲೇ 'ನೀಹಾರ್' ಹಾಗೂ 'ರಶ್ಮಿ' ಎಂಬೆರಡು ಕವನ ಸಂಕಲನಗಳು ಪ್ರಕಟವಾಗಿದ್ದವು.

ಬಾಲ್ಯದಲ್ಲಿಯೇ ಒದಗಿದ ಒಂಟಿತನ, ತಂದೆಯ ಮನೆಯ ವಿಶಾಲ ಪರಿವಾರದ ಸಹಚರ್ಯ ಎರಡೂ ಮೇಳೈಸಿದ್ದು, ಶ್ರೀಮತಿ ವರ್ಮಾರವರ ನಂತರದ ಬದುಕಿನಲ್ಲಿ. 'ಒಂಟಿತನ'ವನ್ನು ಕಳೆಯಲಿಕ್ಕಾಗಿ, 'ಅವಿಭಕ್ತ' ಕುಟುಂಬದ ಪ್ರಭಾವ ಉಳಿಸಿಕೊಳ್ಳಲಿಕ್ಕಾಗಿ ಮಹಾದೇವಿಯವರು ತಮ್ಮ ಮನೆ 'ಸಾಧನಾ ಕುಟೀರ'ವನ್ನು 'ಪ್ರಾಣಿ ಕುಟೀರ'ವನ್ನಾಗಿ ಮಾರ್ಪಡಿಸಿದರೆಂದೇ ಹೇಳಬೇಕು. ಇವರ ಮನಸ್ಸಿನ ಪದರ ಪದರುಗಳನ್ನು ಇವರೇ ಸಾಕಿದ ನಾಯಿಗಳಾದ ಫ್ಲೋರಾ ಬಸಂತ್, ಹೇಮಂತ್, ಬೆಕ್ಕುಗಳಾದ ಸುನಯನ, ಮುಂತಾದವು, ಅವರ ಪ್ರೀತಿಯ ಗಿಲ್ಲು (ಅಳಿಲು), ಸೋನಾ (ಜಿಂಕೆ), ಅಸಂಖ್ಯೆ ಹಕ್ಕಿಗಳು ಅರ್ಥಮಾಡಿಕೊಂಡಿವೆ. ತಮ್ಮ ಮುದ್ದಿನ ಪ್ರಾಣಿಗಳು ಸತ್ತಾಗ,

ಮಹಾದೇವಿವರ್ಮಾ ತಮ್ಮ ಆತ್ಮೀಯರೊಬ್ಬರನ್ನು ಕಳೆದುಕೊಂಡ ಹಾಗೆ ರೋಧಿಸಿದ್ದಾರೆ. ಈಗ 'ಸಾಧನ ಕುಟೀರ'ದಲ್ಲಿ ಉಳಿದಿರುವ ಪ್ರಾಣಿಗಳು ತಮ್ಮ ಒಡತಿಯ ಕಣ್ಮರೆಯಿಂದಾಗಿ ಅವ್ಯಕ್ತ ಮೂಕವೇದನೆ ಅನುಭವಿಸುತ್ತಿರಬಹುದು.

'ಅಳು ನುಂಗಿ ನಗು'ವ ಮಹಾದೇವಿಯವರ ಪ್ರವೃತ್ತಿ ಹಿಂದಿ ಸಾಹಿತ್ಯ ವಲಯದಲ್ಲಿಯೇ ಮನೆ ಮಾತಾಗಿದೆ. ಶ್ರೀಮತಿ ವರ್ಮಾರವರ ನಿರ್ಮಲ ನಗುವಿಗೆ ಮಾರು ಹೋಗದವರೇ ಇಲ್ಲ. ಇವರ ಸ್ವಚ್ಛ 'ನಗು'ವಿನ ಬಗ್ಗೆ ಹಿಂದಿಯ ಪ್ರಸಿದ್ಧ ಸಾಹಿತಿಗಳಾದ ಶಿವಚಂದ್ರಸಾಗರ್‌ರವರು ಹೀಗೆ ಹೇಳಿದ್ದಾರೆ .."ಸ್ತ್ರೀಯರ ಮುಕ್ತ ನಗು ನನಗೆ ಹಿಡಿಸುವುದಿಲ್ಲ. ಆದರೆ ಇಂಥ ವಾತ್ಸಲ್ಯ ಪೂರ್ಣವಾದ ನಗು ನನಗೆಂದೂ ದೊರೆತಿಲ್ಲ. ಮಹಾದೇವಿಯವರ ನಗು ತುಟಿಯಿಂದ ಹೊರಬಿದ್ದಿರಲಿ ಅಥವಾ ಹೃದಯದ ಆಳದಿಂದ ಹೊರಸೂಸಿರಲಿ, ಅದು ನಿರ್ಮಲವಾಗಿಯೂ, ಅಕೃತ್ರಿಮ ಹಾಗೂ ನಿಶ್ಚಲವಾಗಿರುತ್ತದೆ." ಅತ್ಯಂತ ಸರಳ ಬದುಕಿಗೆ ಅಂಟಿಕೊಂಡಿದ್ದ ಮಹಾದೇವಿವರ್ಮಾರವರು ತಮ್ಮ ಜೀವಿತದ ಕೊನೇ ತನಕ ಸಾಧನೆಗೆ ಒತ್ತು ಕೊಟ್ಟಿದ್ದರು. ಸಾಧನಾರಹಿತ ಬದುಕು ಅರ್ಥಹೀನ ಎಂಬುದು ಅವರ ಅಭಿಮತವಾಗಿತ್ತು.

ಸಾಹಿತ್ಯ ಕೃಷಿ

ಕವಯಿತ್ರಿಯಾಗಿ, ಸಂಸ್ಮರಣ ಲೇಖಕಿಯಾಗಿ, ಗದ್ಯ ಲೇಖಕಿಯಾಗಿ ಮಹಾದೇವಿವರ್ಮಾ ಹಿಂದಿ ಸಾಹಿತ್ಯ ಕಣಜವನ್ನು ಹಲವಾರು ಗ್ರಂಥಗಳಿಂದ ತುಂಬಿದ್ದಾರೆ. ನೀಹಾರ್, ನೀರಜಾ, ರಶ್ಮಿ, ಸಾಂಧ್ಯಗೀತಾ ಹಾಗೂ ದೀಪಶಿಖಾ ಇವು ಇವರ ಕಾವ್ಯ ಕೃತಿಗಳು—ಮೇರು ಕೃತಿಗಳು ಸಹ. 'ಶೃಂಖಲಾಕಿ ಕಡಿಯಾಂ' (ಶೃಂಖಲೆಯ ಬೇಡಿಗಳು) ಎಂಬುದು ಇವರ ಮಹತ್ವದ ಗದ್ಯ ಗ್ರಂಥವಾದರೆ ಹಲವಾರು ಸಂಸ್ಮರಣ ಲೇಖನಗಳು ಹತ್ತಾರು ಪುಸ್ತಕಗಳಲ್ಲಿ ಸಂಕಲಿತಗೊಂಡಿವೆ.

ಕನ್ನಡದ ಶಿವಶರಣೆ ಅಕ್ಕಮಹಾದೇವಿಯ ಅಜ್ಞಾತ ಪ್ರಿಯತಮನನ್ನು 'ಸೇರಲು ಆತುರತೆ, ಕಾಣಲು ಕಾತರತೆ'—ಈ ಅಂಶಗಳು ಮಹಾದೇವಿಯ ಕಾವ್ಯದ ಅಂಶವಾಗಿಯೂ ಕಾಣಸಿಗುತ್ತವೆ. ಮೊದಲೇ ಹೇಳಿದಂತೆ ರಹಸ್ಯವಾದ ಹಾಗೂ ಛಾಯವಾದ ಎರಡನ್ನೂ ತಾದಾತ್ಮೀಕರಿಸಿ ಅವ್ಯಕ್ತ ವಿರಹ ವೇದನೆಯನ್ನು ಆಹ್ವಾನಿಸುತ್ತಾ, ಸಂಯೋಗ ಸುಖವನ್ನು ನಿರಾಕರಿಸುತ್ತಾ ಬದುಕನ್ನು ಸಾಗಿಸಿದ, ವರ್ಮಾ ಒಂದೆಡೆ ಹೀಗೆ ಹೇಳಿಕೊಂಡಿದ್ದಾರೆ—"ಸಂಯೋಗದ ಹೆಸರು ಹೇಳಬೇಡ ನಾನು ಚಿರವಿರಹಿಣಿ." ಈ ವಿರಹವೇ ಅವರ ಕಾವ್ಯದ ಜೀವಾಳ.

> "ನಿನ್ನನ್ನು ದುಃಖದಲ್ಲಿ ಅರಸಿದೆನು
> ನಿನ್ನೊಳಗೆ ದುಃಖವನ್ನು ಅರಸುವೆನು"

—ಎಂಬ ಈ ಸಾಲುಗಳು ಅವರ ಧೋರಣೆಯನ್ನು ಬಿಂಬಿಸುತ್ತದೆ.

'ನೀಹಾರ್' ಮಹಾದೇವಿಯವರ ಪ್ರಾರಂಭಿಕ ಕವಿತೆಗಳ ಸಂಕಲನ. ಇದರಲ್ಲಿನ ಕವಿತೆಗಳಲ್ಲಿ ಕಾವ್ಯ ನಿರ್ಮಾಣಾವಸ್ಥೆಯ ಅಸ್ಪಷ್ಟತೆ ಕಂಡು ಬರುತ್ತದೆ. ಅನುಭೂತಿಯ

ಕುತೂಹಲ ಮಿಶ್ರಿತ ವೇದನೆ ಇಲ್ಲಿನ ಹೆಚ್ಚಿನ ಕವಿತೆಗಳ ಜೀವಾಳ. ಕವಿ ಶ್ರೀ ಸುಮಿತ್ರಾನಂದ ಪಂಥ್‌ರ ಛಾಯಾವಾದದ ಪ್ರಭಾವ ಇಲ್ಲಿನ ಕವಿತೆಗಳಲ್ಲಿದೆ ಎಂದು ಶ್ರೀಮತಿ ವರ್ಮಾರವರು ಹೇಳಿ ಕೊಳ್ಳುತ್ತಾ ...ಇದೆಲ್ಲ ಪ್ರಪಂಚದ ಪ್ರತಿ ಕಣಕಣಕ್ಕೂ ಜೀವ ತುಂಬುವ ಅಜ್ಞಾತ ಪ್ರಿಯತಮನ ಕೊಡುಗೆ ಎಂದು ಭಾವಿಸಿ ಹೀಗೆ ಮುನ್ನಡೆಯುತ್ತಾರೆ.

"ನಾನು ನನ್ನ ಈ ಶೂನ್ಯತೆಯು
ನಿಶ್ಚಿಂತ ಸಾಮ್ರಾಜ್ಞಿಯಾಗಿದ್ದೆನೆ
ಪ್ರಾಣ ಜ್ಯೋತಿಯನು ಬೆಳಗಿಸಿ
ದೀಪಾವಳಿಯನ್ನು ಆಚರಿಸುತ್ತಿದ್ದೆನೆ"

ಅಮೂರ್ತ ವಸ್ತುಗಳ, ಮೂರ್ತ ಕಲ್ಪನೆ, ಭಾವಗಳ ಮತ್ತು ಪ್ರಾಕೃತಿಕ ರೂಪಗಳ ಮಾನವೀಕರಣ ಈ ಸಂಕಲನದ ವಿಶೇಷತೆ.

ರಶ್ಮಿ ಇವರ ಎರಡನೇ ಕೃತಿ. ಇದರಲ್ಲಿ ಕವಯಿತ್ರಿಯವರ ಸಾಹಿತ್ತಿಕ ಬೆಳವಣಿಗೆಯನ್ನು ಗುರುತಿಸಬಹುದು. ಇಲ್ಲಿ ಅಸ್ಪಷ್ಟತೆಗೆ ಎಡೆಯಿಲ್ಲ. ಅನುಭೂತಿಗಿಂತಲೂ ಚಿಂತನೆ, ಅಂತರ್ಮುಖತೆಗರ್ಹವಾದ ದರ್ಶನದ ಅಭಿವ್ಯಕ್ತಿಯು ಪ್ರತಿಪಾದನೆ ಇದರ ಮುಖ್ಯ ಅಂಶ. ಅಲೌಕಿಕ ವಿರಹ ವೇದನೆಯ ಆಧ್ಯಾತ್ಮೀಕರಣ ಇಲ್ಲಿಂದಲೇ ಆರಂಭ ಆಗುತ್ತದೆ.

ಮಹಾದೇವಿಯವರ ಚಿಂತನಾ ಪ್ರಧಾನವಾದ 'ನೀರಜಾ' ಇವರ ಮೂರನೇ ಕೃತಿ. ಇದರ 'ಗೀತಕಾವ್ಯ' ವಿಶೇಷತೆಯನ್ನು ಗಮನಿಸಿ ಇದನ್ನು 'ಮುಕ್ತಕ ಗೀತೆ' ಕಾವ್ಯ ಶ್ರೇಣಿಗೆ ಸೇರಿಸುವ ಯತ್ನ ಕೂಡಾ ನಡೆದಿದೆ. ಈ ಕೃತಿಯಲ್ಲಿ ಕವಯಿತ್ರಿಯ ಚಿಂತನೆ, ಅನುಭೂತಿ, ಭಾವಾಭಿವ್ಯಕ್ತಿ ಮತ್ತು ಗೀತ ಸಂಹಿತೆಗಳ ಸಮನ್ವಯ ಕಾಣಬಹುದು. ಆತ್ಮಾನಂದ ಮಧುರ ಸಂಗೀತಕ್ಕೆ ಈ ಸಾಲುಗಳನ್ನು ಉದಾಹರಿಸಬಹುದು.

"ನೀನು ಪವಡಿಸು ನಾನು ಹಾಡುವೆ
ನಾನು ನಿದ್ರಿಸುತ್ತಾ ಯುಗ ಯುಗ ಕಳೆದವು
ನಿನಗೆ ಜೋಗುಳ ಹಾಡುತ್ತಾ...ಈಗ ಬಾ
ನನ್ನ ರೆಪ್ಪೆಗಳಲ್ಲಿ ಸ್ವಪ್ನದ ಹಾಸಿಗೆ ಹಾಸುವೆ"

—ಲಯ, ತಾಳ, ಧ್ವನಿ ಮುಂತಾದವುಗಳ ಆಧಾರದ ಮೇಲೆ 'ನೀರಜಾ'ವನ್ನು ಛಾಯಾವಾದ ಯುಗದ ಅತ್ಯುತ್ತಮ ಕೃತಿಗಳಲ್ಲೊಂದೆಂದು ಪರಿಗಣಿಸಲಾಗಿದೆ.

'ಸಾಂಧ್ಯಗೀತ'—ಮಹಾದೇವಿವರ್ಮಾರವರ ನಾಲ್ಕನೇ ಕವನ ಸಂಕಲನ. 'ನೀಹಾರ್'ದಲ್ಲಿನ 'ಭಾವ' ಮತ್ತು 'ರಶ್ಮಿ'ಯಲ್ಲಿನ 'ನಿರ್ದಿಷ್ಟ ಗಹನತೆ' ಹಾಗೂ ವ್ಯಾಪಕತೆ ಇಲ್ಲಿ ಕಾಣಸಿಗುತ್ತದೆ. ಕವಯಿತ್ರಿಯ ಆಂತರಿಕ ತುಡಿತಕ್ಕೆ ಇಲ್ಲಿ ನಿರ್ದಿಷ್ಟ ದಿಶೆ ದೊರೆತಿದೆ. ಶ್ರೀಮತಿ ವರ್ಮಾರವರು ತಮ್ಮ ಬದುಕನ್ನು ಸಂಜೆಗೆ ಹೋಲಿಸಿಕೊಂಡು ಹೀಗೆನ್ನುತ್ತಾರೆ—ಇದೇ ಈ ಸಂಕಲನದ ಮೂಲ ಆಶಯ ಕೂಡ.

"ಪ್ರಿಯ, ಸಂಜೆಯ ಆಕಾಶ ನನ್ನ ಜೀವನ
ಧೂಮದಿಂದಾವರಿಸಿದ ಈ ವೈರಾಗಿ ಕ್ಷಿತಿಜ
ನವ ಅರುಣ ಅರುಣ ನನ್ನ ಬಾಷ್ಪ
ನೆರಳಿನಂತೆ ನನ್ನ ತನು ವೀತರಾಗ"

—ವಸ್ತುತಃ ಸಮನ್ವಯ, ಸಾಮಂಜಸ್ಯ, ಸಾಪೇಕ್ಷತೆಗಳಿಂದ ಮೇಲೆ ಏಳಲೆತ್ನಿಸುವ ಭಾವಾವೇಗವೇ 'ಸಾಂಧ್ಯಗೀತ'ದ ಚರಮ ಉಪಲಬ್ಧಿ.

ಶ್ರೀಮತಿ ಮಹಾದೇವಿವರ್ಮಾರವರ ಕಾವ್ಯ ಸೃಷ್ಟಿ ಅಪಾರವಾದದ್ದು. ಅವರ ಎಲ್ಲಾ ಕವಿತೆಗಳಲ್ಲಿ ಛಾಯಾವಾದ, ರಹಸ್ಯವಾದ, ಅನುಭಾವದ ಮಿಶ್ರಣ ಅನುರಣಿತವಾಗಿ ಒಂದು ರೀತಿಯ ಏಕತಾನತೆ ವೇದ್ಯವಾಗುತ್ತಿದ್ದರೂ, ಅದೇ ಕಾರಣಕ್ಕಾಗಿ ಆಕೆ ಒಬ್ಬ ವಿಶಿಷ್ಟ ಕವಯಿತ್ರಿಯಾಗಿ ನಿಲ್ಲುತ್ತಾರೆ. ಉಳಿದಂತೆ ಗದ್ಯ ಲೇಖಕಿಯಾಗಿ ಸಂಸ್ಮರಣೆ ಕ್ಷೇತ್ರದಲ್ಲಿ ಅಸಂಖ್ಯ ಗುಣಾತ್ಮಕ ಲೇಖನಗಳನ್ನು ಬರೆದಿದ್ದಾರೆ. ಅವರ 'ಗಿಲ್ಲು' (ಅಳಿಲು), 'ಸೋನಾ' (ಜಿಂಕೆ) 'ರಾಮಾ' ಮುಂತಾದ ಸ್ಮರಣಾತ್ಮಕ ಗದ್ಯ ಲೇಖನಗಳು ಅವರ ಭಾವ ಪ್ರವಣತೆಗೆ ಸಾಕ್ಷಿಯಾಗುತ್ತವೆ. ಸುಮಾರು ಎಪ್ಪತ್ತು ಕೃತಿಗಳು ಇವರ ಲೇಖನಿಯಿಂದ ಸೃಜಿತವಾಗಿವೆ.

ವೈಶಿಷ್ಟ್ಯಪೂರ್ಣ ವ್ಯಕ್ತಿತ್ವ :

ಶ್ರೀಮತಿ ಮಹಾದೇವಿವರ್ಮಾ ಮೂಲತಃ ಸಂವೇದನಾಶೀಲ ವ್ಯಕ್ತಿತ್ವದವರು ತಾನು ಬದುಕಿನ ಎಲ್ಲಾ ಮಜಲುಗಳಲ್ಲಿ ಕಹಿ ಉಂಡರೂ, ಲೋಕಕ್ಕೆ ಹಿತ ಉಂಟು ಮಾಡಿದವರು. ಬರಗಾಲದಲ್ಲಿ 'ಬರ' ಉಂಟಾದಾಗ ಇವರ ಸಂವೇದನಾ ಶೀಲ ಮನಸ್ಸು ಮಮ್ಮಲ ಮರುಗಿತು. ಅದಕ್ಕಾಗಿ ತಾವು ಸ್ವತಃ ಪಾದಯಾತ್ರೆ ನಡೆಸಿ ಹಣ ಸಂಗ್ರಹಿಸಿದರು. 'ಬರ'ದ ದಾರುಣತೆಯನ್ನು ಅಭಿವ್ಯಕ್ತಿಸುವ ಸುಮಾರು ಅರವತ್ತು ಚಿತ್ರಗಳನ್ನು ರಚಿಸಿದರು. 'ವಂಗದರ್ಶನ' ಎಂಬ ಪುಸ್ತಕ ಪ್ರಕಟಿಸಿ, ಅದರಿಂದ ಬಂದ ಹಣವನ್ನು 'ಅಕಾಲಪೀಡಿತ ಸಹಾಯತಾ ಕೋಶ್'ಗೆ ನೀಡಿದರು. ರಾಷ್ಟ್ರ ಸೇವಕಿಯಾಗಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿ, ೧೯೪೨ ರಲ್ಲಿ ಜೈಲುವಾಸ ಸಹ ಅನುಭವಿಸಿದರು.

'ನೋವಾಖಲಿ' ಎಂಬಲ್ಲಿ 'ಬರ' ಉಂಟಾದಾಗ ಬೇರೆಯೇರೀತಿಯ ಕೈಂಕರ್ಯ ಕೈಗೊಂಡರು. ಹಿಂದಿಯ ಬರಹಗಾರರನ್ನು ಒಟ್ಟುಗೂಡಿಸಿ 'ಲೇಖಕರಸಂಘ'ಯೊಂದನ್ನು ಸ್ಥಾಪಿಸಿ ಸಂಗ್ರಹವಾದ ಹಣವನ್ನು ಬರ ಸಂತ್ರಸ್ಥರಿಗೆ ನೀಡಿದರು. ಚೀನಿ ಆಕ್ರಮಣದ ಸಮಯದಲ್ಲಿ ಹಿಮಾಲಯ್' ಎಂಬ ಕಾವ್ಯ ಸಂಕಲನ ಪ್ರಕಟಿಸಿ ತಮ್ಮ ಅನನ್ಯ ರಾಷ್ಟ್ರ ಪ್ರೇಮವನ್ನು ಪ್ರಕಟಿಸಿದರು...."ಇದು ನನ್ನ 'ಮುಕ್ತಿ'ಯ ಶೋಧಕ್ಕಾಗಿ ಅಲ್ಲ, ಬದಲಾಗಿ ಭಾರತ ಭೂಮಿಯ ಮುಕ್ತಿಗಾಗಿ ನನ್ನ ಕನಸುಗಳನ್ನು ಸಮರ್ಪಿಸಿದ್ದೇನೆ. ನನ್ನ ಸಂತಾಪಗಳನ್ನು ಕಳಿಯುವುದಕ್ಕಾಗಿ ಅಲ್ಲ, ಬದಲಾಗಿ ಹಿಮ ಕಣಗಳಲ್ಲಿ ಕರಗಿ ಹೋಗುತ್ತಿರುವ ಭಾರತದ ಮಹಿಮೆಯನ್ನು ಪುನಃ ಕೂಡಿಸಲಿಕ್ಕಾಗಿ. ಭಾರತೀಯ ವೀರರ ಪುಣ್ಯ ಸ್ಮೃತಿಗಾಗಿ ಈ ಕೃತಿ...." ಎಂದು ತಮ್ಮ ಈ 'ಹಿಮಾಲಯ್'

ಕೃತಿಯನ್ನು ರಾಷ್ಟ್ರಕ್ಕೆ ಅರ್ಪಿಸಿದರು. —ಹೀಗೆ ಮಹಾದೇವಿಯವರ ವಿಶ್ವ ಮಾನವ ಪ್ರೇಮ ಹಾಗೂ ರಾಷ್ಟ್ರ ಪ್ರೇಮಕ್ಕೆ ಇವು ಕೆಲವು ಉದಾಹರಣೆಗಳು ಮಾತ್ರ.

ಆಧುನಿಕ ಹಿಂದಿ ಸಾಹಿತ್ಯದ ನಿರ್ಮಾತೃಗಳಲ್ಲಿ ಒಬ್ಬರಾಗಿ ಛಾಯಾವಾದಿ, ರಹಸ್ಯವಾದಿ ಪ್ರವೃತ್ತಿಯ ಸಮನ್ವಯ ಕವಯಿತ್ರಿಯಾಗಿ ವಿಶ್ವರೂಪ ಪ್ರೇಮಿಯಾಗಿ ಮಾನವೀಯ ಕಳಕಳಿಯ ಮೂರ್ತಿಯಾಗಿ ಶ್ರೀಮತಿ ಮಹಾದೇವಿವರ್ಮಾ ಮಂಗಳಾ ಪ್ರಸಾದ್ ಪಾರಿತೋಷಿಕ (೧೯೪೩), ಡಿಲಿಟ್ ಪದವಿ ಉಜ್ಜಯಿನಿ ವಿಶ್ವವಿದ್ಯಾಲಯ [೧೯೬೯], ಜ್ಞಾನಪೀಠ ಪ್ರಶಸ್ತಿ (೧೯೮೨), ಭಾರತ-ಭಾರತಿ ಪ್ರಶಸ್ತಿ (೧೯೮೩) ಮುಂತಾದ ಅತ್ಯುನ್ನತ ಪ್ರಶಸ್ತಿ ಪಡೆದರು, ಮಹಾದೇವಿಯವರಾಗಿಯೇ ಬದುಕಿ ಬಾಳಿದರು. ಅವರ ನಿಧನದಿಂದ ಹಿಂದಿ ಸಾಹಿತ್ಯಕ್ಕೆ ತುಂಬಲಾರದ ನಷ್ಟವಾಗಿದೆ ಎನ್ನುವ ಮಾಮೂಲಿ ಮಾತಿಗಿಂತ ತೀರ ಸ್ವಾಭಾವಿಕ, ಸಹಜವಾಗಿ 'ಅವರು ಬದುಕಿರುತ್ತಿದ್ದರೆ ಇನ್ನೂ ಒಂದಿಷ್ಟು ಗುಣಾತ್ಮಕ ಕೃತಿಗಳನ್ನು ಸೃಷ್ಟಿಸುತ್ತಿದ್ದರು; ಅಂದುಕೊಳ್ಳೋಣ.

ಉಪವಾಸಗಳಿಂದಲೂ, ವಿವೇಕವನ್ನು ಜಾಗೃತಗೊಳಿಸಿ ಮನಸ್ಸಿನ ಮಾಲಿನ್ಯವನ್ನು ಅಳಿಸುವುದಕ್ಕಾಗಿ, ನನಗೆ ಜೀವ ಉಳಿಸುವ ಮಾತಿಗಿಂತಲೂ, ಹೃದಯ ಪರಿವರ್ತನೆಯೇ ಮುಖ್ಯವಾಗಿದೆ.

ಅಹಿಂಸೆ, ಅಪಾರ ಕರುಣಾಭಾವನೆ, ಹಿಂದೂ ಧರ್ಮದ ಜೀವಾಳವು. ಅಸ್ಪೃಶ್ಯತೆಯು ಈ ಹಿಮಾಭಂಗವನ್ನುಂಟು ಮಾಡುವಂತಹದಾಗಿಯೇ ಅದು ಅಧರ್ಮವಾಗಿದೆ.

ಗಾಂಧೀಜಿ

ಪರಮಾಣು ಶಕ್ತಿಯನ್ನು ಆವಿಷ್ಕರಿಸಿದ ಮಹಿಳಾ ವಿಜ್ಞಾನಿ ಲೈಸ್ ಮೈಟ್ನರ್

ಎಸ್. ಎನ್. ಲಕ್ಷ್ಮೀಪತಿ

ಮೊದಲ ಪರಮಾಣು ಬಾಂಬ್ ಬಿದ್ದು ಜನ ಧನ ನಾಶವಾದದ್ದು ೬-೮-೧೯೪೫ ರಂದು. ಅಂದಿನಿಂದ ಮುಂದಿನ ಜಗತ್ತಿನ ಮುಖ ಶಾಶ್ವತವಾಗಿ ಬೇರೆಯೇ ಆಗಿಹೋಯಿತು.

ಪ್ರತಿಭೆ ಇದ್ದರೂ ಕೇವಲ ಮತ ಮತ್ತು ಲಿಂಗ ಗಣನೆಗೆ ತೆಗೆದುಕೊಂಡು ಪ್ರತಿಭಾವಂತರಿಗೆ ಸಲ್ಲಬೇಕಾದ ಗೌರವ ನೀಡದಿದ್ದರೆ ಅಂತಹವರಿಗೆ ಎಷ್ಟು ನೋವಾಗುವುದು? ಇಂತಹ ಒಂದು ಘಟನೆ ಲೈಸ್ ಮೈಟ್ನರ್‌ಳ ಜೀವನದಲ್ಲಿ ಘಟಿಸಿತು. ಇದಕ್ಕೆ ಕಾರಣ ಮೊದಲನೆಯದಾಗಿ ಅವಳು ಸ್ತ್ರೀ, ಎರಡನೆಯದಾಗಿ ಅವಳು ಯಹೂದ್ಯ ಕುಲಜೆ. ಪರಮಾಣು ಬಾಂಬಿನ ತಯಾರಿಕೆಗೆ ದಾರಿ ಮಾಡಿಕೊಟ್ಟ ಪರಮಾಣು ವಿದಳನ ಮತ್ತು ಶಾಂತಿಯುತ ಕಾರ್ಯಗಳಿಗೆ ಬಳಸಲ್ಪಡುವ ಪರಮಾಣು ಶಕ್ತಿಯ ಆವಿಷ್ಕಾರದ ಅಧ್ಯಯನಗಳ ಗುಂಪಿಗೆ ಲೈಸ್ ಮೈಟ್ನರ್ ಕೂಡ ಸೇರುತ್ತಾಳೆ. ವಿದಳನ ಕ್ರಿಯೆಯಲ್ಲಿ ಅವಳ ಪಾತ್ರ ಅಂದು ಸರಿಯಾಗಿ ಸ್ಪಷ್ಟವಾಗಿರದಿದ್ದ ಕಾರಣ ಅವಳಿಗೆ ದಕ್ಕಬೇಕಾಗಿದ್ದ ನೊಬೆಲ್ ಪಾರಿತೋಷಕ ಲಭಿಸಲಿಲ್ಲ. ಬಾಲ್ಯದಿಂದಲೂ ವಿಜ್ಞಾನದಲ್ಲಿ ಅತೀವವಾಗಿ ಪುಟಿಯುತ್ತಿದ್ದ ಆಕಾಂಕ್ಷೆಯ ಮೇಲೆ ಬಿದ್ದ ಹೊಡೆತವನ್ನು ಸ್ತ್ರೀಯಾದ ಏಕೈಕ ಕಾರಣಕ್ಕಾಗಿ ತಾಳಬೇಕಾಯಿತು. ಅನಂತರ ನಿರಂತರ ಪರಿಶ್ರಮದ ಫಲವಾಗಿ ಲೈಸ್ ಮೈಟ್ನರ್ ವಿಜ್ಞಾನಿ ಎಂಬ ಹಣೆ ಪಟ್ಟಿಕಟ್ಟಿಕೊಂಡ ಮೇಲೂ ಪಕ್ಷಪಾತಧೋರಣೆ ತಪ್ಪಲಿಲ್ಲ. ಯಹೂದ್ಯಳು ಎಂಬ ಕಾರಣಕ್ಕಾಗಿಯೇ ನಾಜಿಗಳ ಕಾಕದೃಷ್ಟಿ ಅವಳ ಮೇಲೆ ಬಿದ್ದಿತು.

ದಿನಾಂಕ ೭ ನೇ ನವೆಂಬರ್ ೧೮೭೮ ರಲ್ಲಿ ಆಸ್ಟ್ರಿಯಾದ ರಾಜಧಾನಿ ವಿಯಾನ್ನದಲ್ಲಿ ಲೈಸ್ ಜನ್ಮವೆತ್ತಿದಳು. ಲೈಸ್ ಮೈಟ್ನರ್

೮ ಮಂದಿ ಸಹೋದರ–ಸಹೋದರಿಯರಲ್ಲಿ ಮೂರನೆಯವಳು, ತಂದೆ ಖ್ಯಾತ ವಕೀಲ. ಮನೆ ತುಂಬ ಪುಸ್ತಕಗಳ ರಾಶಿ ರಾಶಿ! ಹೀಗಾಗಿ ಲೈಸ್‌ಳಿಗೆ ಸುಲಭವಾಗಿ ಕೈಗೆಟುಕುತ್ತಿದ್ದ ಪುಸ್ತಕಗಳಲ್ಲಿ ಒಲವು ಮೂಡಿತು. ಅದರಲ್ಲೂ ಗಣಿತ ಮತ್ತು ವಿಜ್ಞಾನ ಪುಸ್ತಕಗಳಲ್ಲಿ ಅಪಾರ ಆಸಕ್ತಿ ಚಿಗುರೊಡೆಯಿತು. ಅಂದಿನ ಕಾಲಕ್ಕೆ ಸ್ತ್ರೀಯರಿಗೆ ಶಿಕ್ಷಣ ನೀಡುವುದೆಂದರೆ ತಿರಸ್ಕಾರ ಭಾವನೆ. ಆದರೆ ಸ್ಥಳೀಯ ಕಾಲೇಜೊಂದರ ಪ್ರತಿಭಾನ್ವಿತ ಉಪನ್ಯಾಸಕನೊರ್ವ ಲೈಸ್ ಮೈಟ್ನರ್‌ಳ ಜೊತೆಗೆ ಇನ್ನಿಬ್ಬರು ಹುಡುಗಿಯರಿಗೆ ಪಾಠ ಹೇಳಿಕೊಟ್ಟು ಅಂತಿಮ ಪರೀಕ್ಷೆಗೆ ಕುಳಿತುಕೊಳ್ಳುವಂತೆ ಅವರನ್ನು ತಯಾರು ಮಾಡಿದ. ಜೊತೆಗೆ ಆತನೇ ಅವರನ್ನು ವಿಶ್ವವಿದ್ಯಾಲಯದ ವಿಜ್ಞಾನ ವಿಭಾಗಕ್ಕೆ ಕರೆದೊಯ್ದು ವಿಜ್ಞಾನ ಉಪಕರಣಗಳ ಪರಿಚಯ ಮಾಡಿಸುತ್ತಿದ್ದ. ಲೈಸ್ ಭೌತಶಾಸ್ತ್ರ, ಗಣಿತ ಮತ್ತು ತತ್ವಶಾಸ್ತ್ರಗಳನ್ನು ಅಧ್ಯಯನ ಮಾಡುತ್ತಿದ್ದಳು. ಆಕೆಗೆ ಸ್ವತಃ ತಾನು ಒಂದಲ್ಲ ಒಂದು ದಿನ ಇದೇ ವಿಷಯಗಳ ಮೇಲೆ ಉನ್ನತ ಅಧ್ಯಯನ ಮಾಡಬಲ್ಲೆನೆಂಬ ನಂಬಿಕೆ ಇರಲಿಲ್ಲ. ಅಂತಹ ಸಾಮಾಜಿಕ ಪರಿಸ್ಥಿತಿ ಅಂದಿನ ದಿನಗಳಲ್ಲಿ—ವಿಶೇಷವಾಗಿ ಸ್ತ್ರೀಯರನ್ನು ಕುರಿತಂತೆ ಇತ್ತು. ಈ ಸಂದೇಹದ ಕಾರಣ ಲೈಸ್ ಫ್ರೆಂಚ್ ಭಾಷೆಯ ಅಧ್ಯಯನಕ್ಕೆ ಮನಸ್ಸು ಮಾಡಿದಳು. ಇದಕ್ಕೆ ಕಾರಣವೂ ಇತ್ತು. ಅಗತ್ಯ ಬಿದ್ದರೆ ಎಲ್ಲಾದರೂ ಉಪಾಧ್ಯಾಯ ವೃತ್ತಿ ದೊರಕಬಹುದೇನೋ ಎಂದು. ಈ ನಡುವೆ ವಿಜ್ಞಾನದ ಮೇಲೆ ಅವಳಿಗಿದ್ದ ಅಂತರ್ಗತ ಅಭಿಪ್ಸೆ ವೈಜ್ಞಾನಿಕ ಸಭೆ, ಸಮಾರಂಭಗಳಲ್ಲಿ ಭಾಗವಹಿಸುವುದು, ವಿಜ್ಞಾನದ ಪುಸ್ತಕಗಳನ್ನು ಓದುವುದರ ಕಡೆ ಹೆಚ್ಚಾಗಿ ಆಕರ್ಷಿಸಿತು.

ಕೊನೆಗೆ ಲೈಸ್ ಮೈಟ್ನರ್ ವಿಜ್ಞಾನದಲ್ಲಿ ಪದವಿಯೊಂದನ್ನು ಪಡೆದಳು. ಮುಂದೆ ಪಿ.ಹೆಚ್.ಡಿ. ಪದವಿ ಗಳಿಸಲು ಸಂಶೋಧನೆಗೆ ಕೈ ಹಾಕಿದಳು. ಸಂಶೋಧನೆಯ ವಿಷಯ ಒಂದೇ ಬಗೆಯ ಮಿಶ್ರಣ ಹೊಂದಿಲ್ಲದ ವಸ್ತುಗಳಲ್ಲಿ ಶಾಖ ಹೇಗೆ ಚಲಿಸುತ್ತದೆ ಎನ್ನುವುದನ್ನು ಕುರಿತುದಾಗಿತ್ತು. ಪಿಯರೆಕ್ಯೂರಿ ಮತ್ತು ಆತನ ಪತ್ನಿ ಮೇಡಮ್ ಕ್ಯೂರಿಯರಿಂದ ನಡೆದ ಕೌತುಕಕಾರಿ ಸಂಶೋಧನೆ—ರೇಡಿಯಮ್ಮಿನ ಆವಿಷ್ಕಾರ ೧೯೦೨ ರಲ್ಲಿ ಆದದ್ದೇ ತಡ ಲೈಸ್ ವಿಕಿರಣಪಟುತ್ವ (ರೇಡಿಯೋ ಆಕ್ಟಿವಿಟಿ) ಕುರಿತಂತೆ ಅಧ್ಯಯನ ಪ್ರಾರಂಭಿಸಿದಳು. ಎರಡೆರಡು ನೊಬೆಲ್ ಪ್ರಶಸ್ತಿ ಗೆದ್ದುಕೊಂಡಿದ್ದ ಮೇಡಮ್ ಕ್ಯೂರಿ ಲೈಸ್‌ಳ ಆರಾಧ್ಯ ದೈವವಾದಳು. ಲೈಸ್‌ಳಿಗೆ ಸ್ಫೂರ್ತಿಯ ಚೇತನವಾದಳು. ಅವಳ ಪ್ರಯೋಗಶಾಲೆಯಲ್ಲಿ ಸಂಶೋಧನೆ ಕೈಗೊಳ್ಳಬೇಕೆಂಬ ಅದಮ್ಯ ಬಯಕೆ ಲೈಸ್‌ಳದು. ಕೆಲವು ವರ್ಷಗಳ ಬಳಿಕ ವಿಯನ್ನ ವಿಶ್ವವಿದ್ಯಾಲಯದಿಂದ ಪಿ.ಹೆಚ್.ಡಿ. ಪದವಿ ಗಳಿಸಿದ ಎರಡನೇ ಮಹಿಳೆ ಎಂಬ ಗೌರವಕ್ಕೆ ಭಾಜನಳಾದಳು ಲೈಸ್‌ಮೈಟ್ನರ್. ಸಾಮಾನ್ಯವಾಗಿ ಇಂತಹದೊಂದು ಪದವಿ ದೊರೆತ ಕೂಡಲೇ ಇನ್ನಾರೇ ಸ್ತ್ರೀ ಅಷ್ಟಕ್ಕೇ ಸಂತೃಪ್ತಿಗೊಂಡು ಕೈಕಟ್ಟಿ ಆರಾಮವಾಗಿ ಇದ್ದುಬಿಡುತ್ತಿದ್ದಳು. ಆದರೆ ಲೈಸ್‌ಳ ತೃಪ್ತಿ ಕೇವಲ ವಿಶ್ವವಿದ್ಯಾಲಯದಿಂದ ಪಡೆದ ವಿಜ್ಞಾನ ಪದವಿಯೊಂದರಿಂದ ತಣಿಯಲಿಲ್ಲ. ನಿಸರ್ಗವನ್ನು ಅಧ್ಯಯನ ಮಾಡಿ ಅದರ ಮೂಲಭೂತ ತತ್ವಗಳನ್ನು ಅರ್ಥವಿಸಲು ಉತ್ಸುಕಳಾದಳು. ಅವಳ ಈ ಉತ್ಸಾಹಕ್ಕೆ ಎಣೆಯಾಗಿ ಸ್ನೇಹಿತರೊರ್ವರ ಸಲಹೆಯೂ

ದೊರೆಯಿತು. ಅನಂತರ ಲೈಸ್ ಕ್ವಾಂಟಮ್ ಸಿದ್ಧಾಂತದ ಅಧ್ವರ್ಯ ಮ್ಯಾಕ್ಸ್ ಪ್ಲಾಂಕ್‌ನನ್ನು ಭೇಟಿಯಾಗಲು ಬರ್ಲಿನ್ನಿಗೆ ಬಂದಳು. ಮ್ಯಾಕ್ಸ್ ಮಹಾಶಯನಾದರೋ ಹಳೆಯಕಾಲದ ಸಂಪ್ರದಾಯ ಶರಣ. ಮಡಿ ಎಂದು ಮೈಲಿ ದೂರ ಸಾಗುವವ. ಹೀಗಾಗಿ ಸ್ತ್ರೀಯಾದ ಲೈಸ್‌ಳಿಗೆ ಕೆಲಸ ಕೊಡಲು ಪ್ರಾರಂಭಕ್ಕೆ ಸಮ್ಮತಿಸಲಿಲ್ಲ. ಆದರೆ ಲೈಸ್ ಮೈಟ್ನರ್‌ಳ ಅಂತರಾಳದಲ್ಲಿ ಸ್ಫುರಿಸುತಿದ್ದ ಜ್ಞಾನದಾಹದ ಕಿಚ್ಚನ್ನು ಮ್ಯಾಕ್ಸ್ ಪ್ಲಾಂಕ್ ಅರಿತುಕೊಂಡ. ಭೌತಶಾಸ್ತ್ರದಲ್ಲಿ ಅವಳಿಗೆ ಇರುವ ಅಪರಿಮಿತ ಒಲವು ಅವನನ್ನು ತನ್ನ ಸಂಪ್ರದಾಯದ ಕಟ್ಟುಪಾಡುಗಳಿಂದ ವಿಚಲಿತನಾಗುವಂತೆ ಮಾಡಿತು. ಸಹಾಯಕಿಯಾಗಿ ಲೈಸ್‌ಳನ್ನು ನೇಮಿಸಿಕೊಂಡ. ಮ್ಯಾಕ್ಸ್‌ನ ನೇತೃತ್ವದಲ್ಲಿ ಸೈದ್ಧಾಂತಿಕ ಭೌತಶಾಸ್ತ್ರದಲ್ಲಿ ೧೯೧೨ ನೇ ಸಾಲಿನ ಒಂದು ಸುದಿನದಲ್ಲಿ ಲೈಸ್ ಸಂಶೋಧನೆಗೆ ಪಾದಾರ್ಪಣ ಮಾಡಿದಳು. ಪ್ಲಾಂಕ್‌ನ ಶಿಷ್ಯೆಯಾಗಿ ವಿಕಿರಣ ಪಟುತ್ವ ಕುರಿತಂತೆ ಅವಳ ಸಂಶೋಧನೆ ಮುಂದುವರಿಯಿತು. ೧೯೧೪ ರಲ್ಲಿ ಮೊದಲನೆ ಪ್ರಪಂಚ ಯುದ್ಧದ ಪ್ರಳಯ ಆರಂಭ ಗೊಂಡಿತು. ತನ್ನ ತಾಯ್ನಾಡು ಆಸ್ಟ್ರಿಯಾದ ಪರವಾಗಿ ಈಗ ಯುದ್ಧ ಭೂಮಿಗೆ ತೆರಳಿದ ಲೈಸ್ ಶುಶ್ರೂಷಕಳಾಗಿ ಆಸ್ಪತ್ರೆಯ ಎಕ್ಸ್‌ಕಿರಣ ವಿಭಾಗದಲ್ಲಿ ಸೇವೆ ಸಲ್ಲಿಸಿದಳು. ಯುದ್ಧ ಭೂಮಿಯಿಂದ ಮರಳಿದ ಮೇಲೆ ಅವಳು ವಿಕಿರಣ ಪಟುತ್ವ ಕುರಿತಂತೆ ತನ್ನ ಸಂಶೋಧನೆ ಮುಂದುವರಿಸಲು ಇಚ್ಛಿಸಿದರೂ ಸ್ತ್ರೀ ಎಂಬ ಏಕೈಕ ಕಾರಣಕ್ಕಾಗಿ ಯಾರೂ ಅವಳನ್ನು ತಮ್ಮ ಪ್ರಯೋಗಾಲಯದೊಳಗೆ ಬಿಟ್ಟುಕೊಳ್ಳಲು ಸಿದ್ಧರಿರಲಿಲ್ಲ.

ಧೃತಿಗೆಡದ ಲೈಸ್ ಕೈಸರ್ ವಿಲಿಯಮ್ ಇನ್ಸ್‌ಟ್ಯೂಟ್‌ನ ರಸಾಯನ ಶಾಸ್ತ್ರ ವಿಭಾಗದ ನಿರ್ದೇಶಕ ಎಮಿಲ್ ಫಿಶರ್‌ನನ್ನು ಬೆಟ್ಟಿಯಾದಳು. ಆತನೂ ಮೊದಮೊದಲು ತನ್ನ ಸಂಸ್ಥೆಯೊಳಗೆ ಆಕೆ ಸಂಶೋಧನೆ ನಡೆಸಲು ಒಪ್ಪಲಿಲ್ಲ. ಈ ಅಸಮ್ಮತಿಗೆ ಹಿನ್ನೆಲೆಯೂ ಇತ್ತು. ಒಮ್ಮೆ ರಶಿಯಾದ ಓರ್ವ ಆಡಂಬರಗಾತಿ ಮಹಿಳಾ ವಿಜ್ಞಾನಿ ತನ್ನ ನೀಳ ಕೆಂಗೂದಲ ರಾಶಿಯನ್ನು ಅಗ್ನಿಗೆ ಆರ್ಪಿಸಿಕೊಂಡಿದ್ದಳು. ಪ್ರಯೋಗ ಶಾಲೆಯಲ್ಲಿ. ಲೈಸ್‌ಳ ಅದೃಷ್ಟಕ್ಕೆ ಆಗತಾನೇ ಅಮೇರಿಕಾ ಸಂಯುಕ್ತ ಸಂಸ್ಥಾನದಿಂದ ಬಂದಿದ್ದ ವಿಜ್ಞಾನಿ ಅಟ್ಟೋಹಾನ್ ಈ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದ. ಅವನಿಗೆ ಅಮೆರಿಕೆಯಲ್ಲಿ ಮಹಿಳಾ ವಿಜ್ಞಾನಿಗಳೊಂದಿಗೆ ಕೆಲಸ ಮಾಡಿದ ಅನುಭವವಿತ್ತು. ಸೈದ್ಧಾಂತಿಕ ಭೌತಶಾಸ್ತ್ರದಲ್ಲಿ ಅವನ ಸಂಶೋಧನೆಗೆ ನೆರವು ನೀಡಲು ಒಬ್ಬ ನುರಿತ ಪದವೀಧರನ ಅವಶ್ಯಕತೆಯಲ್ಲಿ ಇತ್ತು. ಒಳ್ಳೆ ನುರಿತಜ್ಞನಾದ ಆತನಿಗೆ, ಪ್ರಯೋಗಗಳ ಫಲಿತಾಂಶಗಳನ್ನು ಅರ್ಥವಿಸಲು ಹಾಗೂ ವಿವರಿಸಲು ಲೈಸ್‌ಳಂತ 'ಭೌತಶಾಸ್ತ್ರ ಪದವೀಧರೆಯ ಅವಶ್ಯಕತೆ ಹೆಚ್ಚಾಗಿತ್ತು. ಹೀಗಾಗಿ, ಆತನ ಕೃಪೆಯಿಂದ ಕೈಸರ್ ವಿಲಿಯಮ್ ಇನ್ಸ್‌ಟ್ಯೂಟ್‌ಗೆ ಸೇರಿಕೊಂಡಳು. ಇಲ್ಲಿ ಲೈಸ್‌ಳಿಗೆ ಕೊಟ್ಟ ಜಾಗವೆಂದರೆ ಒಬ್ಬ ಬಡಗಿ ಕೆಲಸ ಮಾಡುತ್ತಿದ್ದ ಒಂದು ಕೊಠಡಿ. ಅದಕ್ಕೆ ಪ್ರತ್ಯೇಕ ಬಾಗಿಲು. ಲೈಸ್ ಅದೇ ಇನ್ಸ್‌ಟ್ಯೂಟ್‌ನ ಇತರ ಪುರುಷ ವಿಜ್ಞಾನಿಗಳು ಕೆಲಸ ಮಾಡುತ್ತಿದ್ದ ಪ್ರಯೋಗಾಲಯಗಳಿಗೆ ಕಾಲಿಡದಂತೆ ಕಟ್ಟಪ್ಪಣೆ! ಕೇವಲ ಲೈಸ್ ಹಾಗೂ ಅಟ್ಟೋ ಹಾನ್ ಇಬ್ಬರೇ ಈ ಕೊಠಡಿಯಲ್ಲಿ ಸಂಶೋಧನೆಯಲ್ಲಿ ನಿರತರಾದರು. ಮುಂದೆ ಕಾಲ ಉರುಳಿದಂತೆ, ಬರ್ಲಿನ್ ವಿಶ್ವವಿದ್ಯಾಲಯ ತನ್ನ ಸಂಪ್ರದಾಯಬದ್ಧ ನಿಯಮಗಳನ್ನು

ಬದಲಿಸಿ ಮಹಿಳೆಯರಿಗೆ ಪ್ರವೇಶಾವಕಾಶ ನೀಡಿತು. ಲೈಸ್ ಮತ್ತು ಆಟ್ಟೋಹಾನ್ ರವರು ಮೊದಲಿಗೆ ೨ ವರುಷಗಳವರೆಗೆ ಸೈದ್ಧಾಂತಿಕ ಭೌತ ವಿಜ್ಞಾನದಲ್ಲಿ ಸಂಶೋಧನೆ ನಡೆಸಬೇಕೆಂದು ನಿಗದಿಯಾಗಿತ್ತು. ಆದರೆ ಮುಂದೆ ಇವರೀರ್ವರೂ ೩ ವರುಷಗಳ ಕಾಲ ಅವಿರತವಾಗಿ ಒಟ್ಟಿಗೆ ದುಡಿದರು. ಬಡಗಿಯೋರ್ವನ ಕೊಠಡಿ ಕಾಲಾನುಕ್ರಮದಲ್ಲಿ ಸುಸಜ್ಜಿತ ಪ್ರಯೋಗಾಲಯವಾಗಿ ಮಾರ್ಪಾಡಾಯಿತು. ಈ ಸಂಸ್ಥೆಯ ನಿರ್ದೇಶಕರಾಗಿ ಇಬ್ಬರೂ ದುಡಿದರು.

ಸೈದ್ಧಾಂತಿಕ ಭೌತವಿಜ್ಞಾನದ ಮೇಲೆ ಅನೇಕಾನೇಕ ಆವಿಷ್ಕಾರಗಳು ಬೆಳಕಿಗೆ ಬಂದವು. ಸ್ತ್ರೀ ಎಂದು ಅಲಕ್ಷಿಸಲ್ಪಟ್ಟಿದ್ದ ಈ ಅನರ್ಘ್ಯ ಮಹಿಳಾ ಮಣಿ ಮುಂದೆ ಖ್ಯಾತ ವಿಜ್ಞಾನಿಗಳಾದ ಮ್ಯಾಕ್ಸ್ ಪ್ಲಾಂಕ್, ಎಮಿಲ್ ಫಿಶರ್, ಮ್ಯಾಕ್ಸ್‌ವೋನ್‌ಲೇ ಮುಂತಾದವರ ಜೊತೆ ನಿಕಟ ಸಂಪರ್ಕ ಇಟ್ಟುಕೊಂಡು ಅನೇಕ ವೈಜ್ಞಾನಿಕ ಸಮಸ್ಯೆ ಗಳಿಗೆ ಪರಿಹಾರ ಸೂಚಿಸುವಂತಹ ಹಂತ ತಲುಪಿದಳು. ಇಂತಹ ಮಹಿಳಾ ಮಣಿಯನ್ನು ಕುರಿತು, ನ್ಯೂಟನ್‌ನಿಂದೀಚೆಗೆ ಅತ್ಯಂತ ಪ್ರತಿಭಾನ್ವಿತ ವಿಜ್ಞಾನಿಯೆಂದೂ, ಈ ಶತಮಾನದ ಮಹಾದಾರ್ಶನಿಕನೆಂದೂ, ಪರಮಾಣುಬಾಂಬು ನಿರ್ಮಾಣಕ್ಕೆ ಮೂಲ ಪುರುಷನೆಂದೂ ಕರೆವ ಸಾಪೇಕ್ಷತಾ ಸಿದ್ಧಾಂತದ ಮೂಲಪುರುಷ, ವಿಜ್ಞಾನಿ, ಮಹರ್ಷಿ ಆಲ್ಬರ್ಟ್ ಐನ್‌ಸ್ಟೈನ್ ಲೈಸ್ ಮೈಟ್ನರ್‌ಳನ್ನು ಭೇಟಿಯಾದ ಸಂದರ್ಭದಲ್ಲೊಮ್ಮೆ "ಜರ್ಮನಿನ ಮೇಡಮ್‌ಕ್ಯೂರಿ" ಎಂದು ಸಂಬೋಧಿಸಿದರಂತೆ. ಇಂತಹ ಅಭಿದಾನಕ್ಕೆ ಆವಳು ನಿಜಕ್ಕೂ ಅರ್ಹಳಾಗಿದ್ದಳು. ೧೯೨೬ರಲ್ಲಿ ಬರ್ಲಿನ್ ವಿಶ್ವವಿದ್ಯಾಲಯ ಲೈಸ್‌ಳನ್ನು ಭೌತಶಾಸ್ತ್ರದ ಪ್ರಾಧ್ಯಾಪಕಿಯಾಗಿ ನೇಮಕಮಾಡಿತು. ಆಗ ಪುರುಷ ಉಪನ್ಯಾಸಕರು ಆವಳನ್ನು ಕುಚೋದ್ಯಮಾಡಿದ್ದುಂಟು. ಒಂದು ಸಾರಿ ಆಕೆ ವಿಶ್ವಭೌತಶಾಸ್ತ್ರದ (Cosmic Physics) ಮೇಲೆ ಉಪನ್ಯಾಸ ನೀಡಿದಾಗ ಸಮೂಹ ಮಾಧ್ಯಮದಲ್ಲಿ ಬಂದ ಪ್ರತಿಕ್ರಿಯೆ ಕಾಂತಿವರ್ಧಕ ಭೌತಶಾಸ್ತ್ರ (Cosmetic Physics) ಎಂದು. ಆದರೆ ಅವಳಲ್ಲಿದ್ದ ಆಳವಾದ ವಿಷಯಜ್ಞಾನ, ವಿದ್ಯಾರ್ಥಿಗಳನ್ನು ಅವಳು ನಡೆಸಿಕೊಳ್ಳು ತ್ತಿದ್ದ ರೀತಿ ನೀತಿಯಿಂದಾಗಿ, ಲೈಸ್ ಮೈಟ್ನರ್ ಅತ್ಯಂತ ಹೆಸರುವಾಸಿಯಾದ ಉಪನ್ಯಾಸಕಿ ಎನಿಸಿಕೊಂಡಳು.

ಕೆಲವು, ಭಾರಿ ಧಾತುಗಳು ಕ್ಷಯಿಸಿ, ಲಘುವಸ್ತುಗಳಾಗಿ ಪರಿವರ್ತನೆಯಾಗುವಾಗ ಪರಮಾಣುವಿನ ಕೇಂದ್ರದ ಭಾಗ ಆಲ್ಫಾ, ಬೀಟಾ ಮತ್ತು ಗಾಮ ವಿಕಿರಣಗಳನ್ನು ಅನೈಚ್ಛಿಕವಾಗಿ ಹೊರಸೂಸುತ್ತದೆ. ಹೀಗೆ ಕ್ಷಯಿಸುವ ಧಾತುಗಳೇ ವಿಕಿರಣಪಟು ವಸ್ತು ಗಳು. ಈ ಬಗೆಯ ಕ್ಷಯವನ್ನು ಕೃತಕವಾಗಿಯೂ ಮಾಡಬಹುದು. ಲೈಸ್ ಮತ್ತು ಹಾನ್ ವಿದ್ಯುತ್ ವಿಕಿರಣಪಟುತ್ವ ಕುರಿತಂತೆ ಸಹಜವಾದ ಹಾಗೂ ಕೃತಕವಾದ ಪ್ರಯೋಗಗಳನ್ನು ನಡೆಸಿದರು. ಕ್ಷಯಿಸುವ ಧಾತುಗಳ ಉತ್ಪನ್ನಗಳನ್ನು, ಕ್ಷಯಿಸುವ ಧಾತುಗಳನ್ನೂ ಹಾಗೂ ಅಂತಹ ವಸ್ತುಗಳು ಕ್ಷೀಣಿಸುವಾಗ ಹೊರಸೂಸುವ ವಿಕಿರಣ ವನ್ನೂ ಅವರು ಪರಿಶೀಲಿಸಿದರು. ಕ್ಷಯಿಸುವ ವಸ್ತುಗಳ ಉತ್ಪನ್ನಗಳು ಹಾಗೂ ಅವು ಹೊರಸೂಸುವ ವಿಕಿರಣಗಳನ್ನು ಅಧ್ಯಯನ ಮಾಡಲು ಪ್ರಥಮ ಬಾರಿಗೆ ಲೈಸ್ 'ಆಟಾಮಿಕ್ ಮೈಕ್ರೋಸ್ಕೋಪ್' ಅನ್ನು ರಚಿಸಿದಳು. ಪರಿಶುದ್ಧವಾದ ವಿಕಿರಣಪಟು

ವಸ್ತುಗಳನ್ನು ಉತ್ಪತ್ತಿ ಮಾಡುವ ಸಾಧನಗಳನ್ನು ಪ್ರಪ್ರಥಮವಾಗಿ ಬಳಕೆಗೆ ತಂದು ಜಗದ್ವಿಖ್ಯಾತಳಾದಳು. ಇವಳು ಬಳಕೆಗೆ ತಂದ ವಿಕಿರಣಪಟು ವಸ್ತುಗಳನ್ನು ಪರಿಶುದ್ಧಗೊಳಿಸುವ ಸಾಧನಗಳು ಜಗತ್ತಿನಾದ್ಯಂತ ಇಂದೂ ಕೂಡ ಎಲ್ಲ ಪರಮಾಣು ಪ್ರಯೋಗಾಲಯಗಳಲ್ಲಿ ಬಳಸಲಾಗುತ್ತಿದೆ. ೧೯೧೭ರಲ್ಲಿ ಪ್ರೋಟೋ ಆಕ್ಟಿನೀಯಮ್ ಎಂಬ ಧಾತುವನ್ನು ಅವರು ಆವಿಷ್ಕರಿಸಿದರು. ಇದು ಆಕ್ಟಿನೀಯಮ್ ಆಗಿ ಕ್ಷಯಿಸುತ್ತದೆ. ಆದರೆ ಅವರ ನಿಜವಾದ ಸಾಧನೆ ೧೯೩೪ರಲ್ಲಿ ಬೆಳಕಿಗೆ ಬಂದಿತು. ಪರಮಾಣು ಭೌತ ವಿಜ್ಞಾನಿ ಎನ್ರಿಕೋ ಫರ್ಮಿ ತುಳಿದ ಹಾದಿಯನ್ನು ಯತ್ನಿಸಿದಾಗ. ನ್ಯೂಟ್ರಾನುಗಳನ್ನು ಬೇರೆಬೇರೆ ಪರಮಾಣು ನ್ಯೂಕ್ಲಿಯಸ್ಸುಗಳಲ್ಲಿ ದೂಡಿ, ಆ ಮೂಲಕ ಹೊಸ ನ್ಯೂಕ್ಲಿಯಸ್‌ಗಳನ್ನು ಸೃಷ್ಟಿಸಿ ನೋಡಬೇಕೆಂದು ಫರ್ಮಿ ಇಚ್ಛಿಸಿದ್ದರು. ಯುರೇನಿಯಮ್‌ಗಿಂತಲೂ ಭಾರವಾದ ಕ್ಯೂರಿಯಮ್, ಪ್ಲೂಟೋನಿಯಮ್ ಮುಂತಾದ ಧಾತುಗಳ ಸೃಷ್ಟಿಗೆ ಲೈಸ್ ಕೈಹಾಕಿದಳು. ಯುರೇನಿಯಮ್ ಮತ್ತು ಥೋರಿಯಮ್‌ನಂತಹ ಭಾರವಾದ ವಿಕಿರಣಪಟು ವಸ್ತುಗಳನ್ನು ಮಂದಗತಿಯ ನ್ಯೂಟ್ರಾನ್‌ನೊಂದಿಗೆ ತಾಡಿಸಿದಾಗ ಫರ್ಮಿ ಆಲೋಚಿಸಿದ ವಸ್ತುಗಳು ಲಭಿಸುತ್ತವೆ ಎಂಬುದನ್ನು ಮನದಟ್ಟುಮಾಡಿಕೊಂಡರು. ಈ ಧಾತುಗಳ ಕೇಂದ್ರ ಭಾಗ ಕೆಲವು ವೇಳೆ ನ್ಯೂಟ್ರಾನ್‌ಗಳನ್ನು ಆಕರ್ಷಿಸಿ ಭಾರ ಧಾತುಗಳಾಗಿ ಪರಿವರ್ತನೆಯಾಗುತ್ತವೆ.

ಇಂತಹ ಭಾರವಾದ ಧಾತುವೊಂದರ ಸಂಶೋಧನೆಯಲ್ಲಿ ತೊಡಗಿದ್ದಾಗ ಲೈಸ್ ಜರ್ಮನಿಯನ್ನು ಬಲಾತ್ಕಾರವಾಗಿ ತ್ಯಜಿಸಬೇಕಾದ ಪ್ರಸಂಗ ಒದಗಿಬಂದಿತು. ಇಂತಹ ಸಂದರ್ಭದಲ್ಲಿ ಪ್ರಯೋಗಾಲಯವನ್ನು ಬಿಟ್ಟು ತೆರಳಲು ಅವಳಿಗೆ ಮನಸ್ಸಿಲ್ಲದಿದ್ದರೂ ಅನ್ಯಮಾರ್ಗವಿಲ್ಲದೆ ಜರ್ಮನಿಯನ್ನು ತೊರೆಯಲೇಬೇಕಾಯಿತು. ಯಹೂದ್ಯಳಾದ ಲೈಸ್‌ಳ ಬೇಟೆಯನ್ನು ನಾಜಿಗಳು ಕೈಗೊಂಡಿದ್ದರು. ಹಾನ್‌ನ ಮುಂಜಾಗರೂಕತೆಯಿಂದಾಗಿ ಆಕೆ ಜರ್ಮನಿಯನ್ನು ದಿನಾಂಕ ೧೩ ಮಾರ್ಚ್ ೧೯೩೮ರಲ್ಲಿ ಅಲೆಮಾರಿಯಂತೆ ತೊರೆಯಬೇಕಾಯಿತು. ಹಾಲೆಂಡ್ ಗಡಿಯನ್ನು ಕಳ್ಳಿಯಂತೆ ಹೊಕ್ಕಳು, ನಾಜಿಗಳು ಯಾವ ಕ್ಷಣದಲ್ಲಾದರೂ ಬಂಧಿಸಬಹುದೆಂಬ ದಿಗಿಲಿನಿಂದ. ಅಲ್ಲಿ ಖ್ಯಾತ ವಿಜ್ಞಾನಿ ನೀಲ್ಸ್ ಬೋರ್‌ರ ಸಹಾಯದಿಂದ ಮುಂದೆ ಸ್ಟಾಕ್‌ಹೋಮ್ ತಲುಪಿ ಆಗ ತಾನೆ ಸ್ಥಾಪನೆಯಾಗಿದ್ದ ನೊಬಲ್ ಇನ್ಸ್‌ಟ್ಯೂಟ್‌ನಲ್ಲಿ ಕೆಲಸಕ್ಕೆ ಸೇರಿಕೊಂಡಳು.

ಈ ನಡುವೆ ಲೈಸಾ ಜರ್ಮನಿ ಬಿಡುವ ಮುನ್ನವೇ ಯುರೇನಿಯಮ್ ಅನ್ನು ಮಂದಗತಿಯ ನ್ಯೂಟ್ರಾನ್‌ಗಳಿಂದ ತಾಡಿಸಿದಾಗ ಬೇರಿಯಮ್ ಉತ್ಪತ್ತಿಯಾಯಿತೆಂಬ ವರದಿ ಬಂದರೂ ಕೂಡ ಅದು ಅಧಿಕೃತಗೊಳ್ಳಲಿಲ್ಲ. ಹೇಳಬೇಕೆಂದರೆ ಕ್ಷೀಣತೆಯ ಉತ್ಪನ್ನಗಳಲ್ಲಿ ಬೇರಿಯಮ್ ಇರುವುದನ್ನು ನಿರೀಕ್ಷಿಸಿರಲಿಲ್ಲ. ಬೇರಿಯಮ್‌ನ ಬೀಜವು ಯುರೇನಿಯಮ್ ಬೀಜದ ಅರ್ಧದಷ್ಟು ಭಾರವಿತ್ತು. ಇದನ್ನು ಗೋಥೇನ್‌ಬರ್ಗ್ ಬಳಿಯ ಕುಂಗಾವ್‌ನಲ್ಲಿ ತಂಗಿದ್ದ ಲೈಸ್‌ಳಿಗೆ ತಿಳಿಸಿದಾಗ ಲೈಸ್ ಹಾನ್‌ರನ್ನು ಕ್ಷೀಣತೆಯ ಉತ್ಪನ್ನಗಳಲ್ಲಿ ಕ್ರಿಪ್ಟಾನ್‌ನ್ನು ಹುಡುಕಿ, ಲಭಿಸಬಹುದು ಎಂದು ಹೇಳಿದಳು. ಆಶ್ಚರ್ಯವೆಂದರೆ ಲೈಸ್ ನುಡಿದಂತೆ ಕ್ಷೀಣತೆಯ ಉತ್ಪನ್ನಗಳಲ್ಲಿ ಕ್ರಿಪ್ಟಾನ್ ಸಹ ದೊರೆಯಿತು. ಇದು ಅವಳ ಭಾವನೆಯನ್ನು ದೃಢೀಕರಿಸಿತು. ಅಂದರೆ, ನ್ಯೂಟ್ರಾನೊಂದು ಯುರೇನಿ

ಯವ್ ನ್ಯೂಕ್ಲಿಯಸ್‌ನೊಂದಿಗೆ ಸಮ್ಮಿಲನಗೊಂಡು ಭಾರವಾದ ಧಾತುವನ್ನು ಸೃಷ್ಟಿಸುವುದರ ಬದಲು ಯುರೇನಿಯಮ್ ನ್ಯೂಕ್ಲಿಯಸ್‌ನ್ನು ಬೇರಿಯಮ್ ಹಾಗೂ ಕ್ರಿಪ್ಟಾನ್ ನ್ಯೂಕ್ಲಿಯಸ್‌ನ ಎರಡು ಭಾಗಗಳಾಗಿ ಛಿದ್ರಿಸುತ್ತದೆ.

ಲೈಸ್‌ಳ ಲೆಕ್ಕಾಚಾರದಂತೆ, ಯುರೇನಿಯಮ್ ಬೀಜವನ್ನು ಬೇರಿಯಮ್ ಮತ್ತು ಕ್ರಿಪ್ಟಾನ್‌ಗಳಾಗಿ ಬೇರ್ಪಡಿಸಿದಾಗ ಸರಾಸರಿ ಅಂದಾಜು ೨೦೦ ಮೆಗಾ ಎಲೆಕ್ಟ್ರಾನ್ ವೋಲ್ಟ್‌ನಷ್ಟು ಶಕ್ತಿ ಬಿಡುಗಡೆಯಾಗುತ್ತದೆ. ಈ ಶಕ್ತಿಯನ್ನು ಐನ್‌ಸ್ಟೈನರ ಜಗದ್ವಿಖ್ಯಾತ ರಾಶಿ—ಶಕ್ತಿ ಸೂತ್ರವಾದ $E=mc^2$ಗೆ ಸಮವೆಂದು ಸಾರಲಾಯಿತು. ಮುಂದೊಂದು ದಿನ ತನ್ನ ಈ ಆವಿಷ್ಕಾರವನ್ನು ಶಾಂತಿಯುತ ಅಥವಾ ಯುದ್ಧ ಕಾರ್ಯಗಳಿಗೆ ಬಳಸಬಹುದೆಂದು ಆಕೆ ಕನಸುಮನಸಿನಲ್ಲಿಯೂ ಎಣಿಸಿರಲಿಲ್ಲ. ಅವಳು ಆವಿಷ್ಕರಿಸಿದ ಈ ಪರಮಾಣು ವಿದಳನ ಹಾಗೂ ಅದರಿಂದ ಬಿಡುಗಡೆಯಾಗುವ ಶಕ್ತಿ ಕುರಿತಂತೆ ಮಾಹಿತಿ ಕ್ವಾಂಟಮ್ ಸಿದ್ಧಾಂತದ ಪ್ರತಿಪಾದಕ ನೀಲ್ಸ್‌ಬೋರ್‌ನ ಮೂಲಕ ಅಮೇರಿಕಾ ಸಂಯುಕ್ತ ಸಂಸ್ಥಾನವನ್ನು ತಲುಪಿತು. ಯುರೇನಿಯಮ್‌ನ ಬೀಜವನ್ನು ಎರಡು ಭಾಗಗಳಾಗಿ ಛಿದ್ರಿಸಿದಾಗ ಶಕ್ತಿಯ ಜೊತೆಗೆ ಕೆಲವು ನ್ಯೂಟ್ರಾನುಗಳು ಸಹ ಬಿಡುಗಡೆಗೊಳ್ಳುತ್ತವೆ. ಈ ನ್ಯೂಟ್ರಾನ್‌ಗಳನ್ನು ಬಳಸಿಕೊಂಡು ಮತ್ತೊಂದು ಯುರೇನಿಯಮ್ ನ್ಯೂಕ್ಲಿಯಸ್‌ನ್ನು ಛಿದ್ರಿಸಿದರೆ ಬದಲಿಗೆ ಅಧಿಕ ಶಕ್ತಿ ಹಾಗೂ ನ್ಯೂಟ್ರಾನುಗಳು ಉತ್ಪತ್ತಿಯಾಗುವುವೇ? ಇಂತಹ ಸರಣಿಯ ಕ್ರಿಯೆ ಪರಮಾಣು ಶಕ್ತಿಯನ್ನು ಅಪಾರ ಪ್ರಮಾಣದಲ್ಲಿ ಉತ್ಪತ್ತಿಮಾಡುತ್ತ ಸಾಗುವುದೆ? ಈ ನಿಟ್ಟಿನಲ್ಲಿ ಚಿತ್ತವಿಟ್ಟು ಅಮೇರಿಕಾ ಮತ್ತು ಜರ್ಮನಿ ಯುದ್ಧೋಪಕರಣಗಳ ತಯಾರಿಕೆಗಾಗಿ ಅತುಳ ಪರಮಾಣು ಶಕ್ತಿಯ ಉತ್ಪಾದನೆಯ ಅಭಿಪ್ಸೆಯಿಂದ ಪ್ರಯೋಗಗಳನ್ನು ನಡೆಸಲು ಪ್ರಾರಂಭಿಸಿದವು. ೧೯೪೨ರಲ್ಲಿ ಪ್ರಥಮ ಬಾರಿಗೆ ಅಮೇರಿಕಾ ಈ ಪರಮಾಣು ಸರಣಿಯ ಪ್ರತಿವರ್ತನೆಯ ಕ್ರಿಯೆಯನ್ನು ನಡೆಸಿತು. ಇದರಿಂದ ಉತ್ಸಾಹಿತರಾದ ಅಮೇರಿಕನ್ನರು ಜನರಲ್ ಲೆಸ್ಲಿ. ಆರ್. ಗ್ರೂವ್ಸ್‌ನ ನೇತೃತ್ವದಲ್ಲಿ ಬೃಹತ್ತಾದ ಮನ್‌ಹಟ್ಟ್ ಯೋಜನೆಯೊಂದನ್ನು ರಚಿಸಿ ತನ್ಮೂಲಕ ಶಸ್ತ್ರಗಳ ತಯಾರಿಕೆಗೆ ನಾಂದಿ ಯಾಡಿದರು. ಲೈಸ್‌ಮೈಟ್ನರ್‌ಳ ಪರಿಶ್ರಮದ ಫಲ. ಅಮೇರಿಕೆಯ ಬತ್ತಳಿಕೆಯಲ್ಲಿ ಕಾಲರುದ್ರನ ಅಸ್ತ್ರ ಜನ್ಮತಾಳಿತು. ೧೯೪೫ರ ಆಗಸ್ಟ್ ೬ ರಂದು ಪ್ರಥಮ ಪರಮಾಣು ಬಾಂಬು ಹಿರೋಷಿಮ ನಗರದ ಮೇಲೆ ಸಿಡಿದಾಗ ಉದ್ಭವಿಸಿದ ದುರಂತಗಳನ್ನು ಕಂಡಾಗಲೇ ಲೈಸ್‌ಳಿಗೆ ಜಗತ್ತಿಗೆ ತಾನೆಂತಹ ಕೊಡುಗೆಯನ್ನು ನೀಡಿದೆ ಎಂದು ಅರ್ಥವಾದುದು. ಆ ವೇಳೆಗಾಗಲೇ ಅವಳ ಸಂಶೋಧನೆಯ ಫಲ ಅಮೇರಿಕಾ ಮತ್ತು ಜರ್ಮನಿಗಳ ಕೈವಶವಾಗಿತ್ತು.

ಸ್ಟಾಕ್‌ಹೋಂನಲ್ಲಿರುವಷ್ಟು ಕಾಲವೂ ಲೈಸ್ ಅಸಂತುಷ್ಟಳಾಗೇ ಕಾಲದೂಡಿದಳು. ನಾಜಿಗಳ ಕಿರುಕುಳದಿಂದ ಜರ್ಮನಿ ಬಿಟ್ಟುಬಂದ ಲೈಸ್‌ಳಿಗೆ ಶಾಂತಿ ಇರಲಿಲ್ಲ. ಸ್ಟಾಕ್‌ಹೋಂನಲ್ಲಿರುವಷ್ಟು ದಿನವೂ ಅವಳಿಗೆ ಪಕ್ಷಪಾತ ನೀತಿಯಿಂದ ಮುಕ್ತಿದೊರಕಲಿಲ್ಲ. ವಿಕಿರಣಪಟುತ್ವ ಕುರಿತಂತೆ ಸುಸಜ್ಜಿತಗೊಂಡ ಉಪಕರಣಗಳಾಗಲಿ ಅಥವಾ ಇರುವ ಉಪಕರಣಗಳನ್ನೇ ರಿಪೇರಿ ಮಾಡುವ ತಾಂತ್ರಿಕನ ಸೌಲಭ್ಯವಾಗಲಿ ದೊರಕಲಿಲ್ಲ. ಬಹಳ

ವರುಷಗಳ ಕಾಲ ಎಲೆಮರೆಕಾಯಿಯಂತೆ ಎಲ್ಲರಿಂದ ದೂರಾಗಿ ಒಬ್ಬಳೇ ಕಾಲ ನೂಕಿದಳು. ಪರಮಾಣು ವಿದಳನ ಕ್ರಿಯೆಯ ಆವಿಷ್ಕಾರದಲ್ಲಿ ಲೈಸ್‌ಳ ಸಾಧನೆಯನ್ನು ಆಟ್ಟೋಹಾನ್ ಚಿವುಟಿಹಾಕಿದ್ದ. ತತ್ಪರಿಣಾಮ ೧೯೪೪ರ ರಾಸಾಯನಿಕ ವಿಭಾಗದಲ್ಲಿ ದೊರೆತ ನೊಬೆಲ್ ಪಾರಿತೋಷಿಕ ಆಟ್ಟೋಹಾನ್ ಹಾಗೂ ಆತನ ಸಹಾಯಕ ಫ್ರಿಟ್ಜ್ ಸ್ಟ್ರಾಸ್‌ಮನ್‌ಗೆ ಲಭಿಸಿತು. ನಿಜ ಹೇಳಬೇಕೆಂದರೆ ಹಾನ್ ಲೈಸ್‌ಳಿಂದ ಈ ಪಾರಿತೋಷಿಕವನ್ನು ಕಿತ್ತುಕೊಂಡರೆಂದೇ ಪ್ರತೀತಿ ಇದೆ.

ಇಷ್ಟೆಲ್ಲಾ ಅನ್ಯಾಯಗಳಾದರೂ ಧೃತಿಗೆಡದ ಲೈಸ್‌ಳನ್ನು ಅರಸಿಕೊಂಡು ಅನೇಕ ಪಾರಿತೋಷಿಕಗಳು ಬಂದವು. ಸದಾ ಹಸನ್ಮುಖಿಯಾಗಿ, ಎಲ್ಲರೊಂದಿಗೂ ಹೊಂದಿಕೊಂಡು ಬಾಳಿದ ಈ ಮಹಿಳಾ ವಿಜ್ಞಾನಿ, ಲೈಸ್‌ಮೈಟ್ನರ್ ಅಕ್ಟೋಬರ್ ೧೯೬೮ರಲ್ಲಿ ಇಹಲೋಕ ತ್ಯಜಿಸಿದಳು.

ಮಾನವ ಕುಲವೊಂದು ಮಹಾಸಾಗರ. ಕೆಲವು ಹನಿಗಳು ಹೊಲಸಾದರೆ ಇಡೀ ಸಾಗರವೇ ಹೊಲಸಾಗುವದಿಲ್ಲ.

ಸದ್ವರ್ತನೆಯಿಂದ ಒಂದು ಅನಿಷ್ಟವನ್ನು ಕಡಿಮೆ ಮಾಡಿಕೊಳ್ಳುವದು ಮತ್ತು ಕೊನೆಯಲ್ಲಿ ಅನಿಷ್ಟದಲ್ಲೇ ಇಷ್ಟವನ್ನು ಸಾಧಿಸುವದು ಯಾವಾಗಲೂ ಸಾಧ್ಯವಿದೆ.

ಗಾಂಧೀಜಿ

ಗಫಾರ್ ಖಾನ್ : ದೇಶಪ್ರೇಮ ಮತ್ತು ತ್ಯಾಗದ ಕತೆ

ಪಿ. ಡಿ. ಟಂಡನ್

ಮಾನವ ಜಾತಿಯ ಇತಿಹಾಸ ಎಂದರೆ ಅದರ ಮುಖಂಡರ ತ್ಯಾಗದ ಕತೆಯೇ ಆಗಿದೆ. ಅವರ ವೀರ ಗೀತೆಗಳು ಮನುಷ್ಯ ಜಾತಿಯ ಶ್ರೇಷ್ಠತೆಯನ್ನು ಹೆಚ್ಚಿಸುತ್ತದೆ. ಮನುಷ್ಯನಿಗೆ ಎಷ್ಟು ತೊಂದರೆಗಳು ಬಂದರೂ ತನ್ನ ಸಿದ್ಧಾಂತದ ಮೇಲೆ ದೃಢವಾಗಿ ನಿಂತಿರಬೇಕೆಂಬುದನ್ನು ಸಾರಿ ಹೇಳುತ್ತದೆ. ಅದರ ನೆನಪು ಮಾಡಿ ಕೊಡುತ್ತದೆ. ಆದರೆ ಹಲವಾರು ಬಾರಿ ಆ ಆತ್ಮಗಳು ಕಷ್ಟ ಗಳನ್ನು ಅನುಭವಿಸಲು ಈ ಪ್ರಪಂಚದಲ್ಲಿ ಬರುತ್ತವೆಯೇನೋ ಎನಿಸುತ್ತದೆ. ಗಫಾರ್ ಖಾನ್ ಈ ಯುಗದ ಒಬ್ಬ ಗೌರವ ಮುಖಂಡರು. ಅವರ ಮತ್ತು ಅವರ ಜೊತೆಗಾರರ ತ್ಯಾಗ ದಿಂದಾಗಿ ಎರಡೂ ದೇಶಗಳು ಸ್ವಾತಂತ್ರ್ಯ ಪಡೆದವು. ಆದರೆ ಸ್ವತಂತ್ರದ ನಂತರ ಅವರು ಘೋರ ಅಪಮಾನವನ್ನು ಸಹಿಸ ಬೇಕಾಗಿ ಬಂತು. ಪಾಕಿಸ್ತಾನವು ಅವರನ್ನು ಹದಿನಾರು ವರ್ಷಗಳ ಕಾಲ ಜೈಲಿನಲ್ಲಿಟ್ಟು ಅವರ ಉಪಕಾರದ ಸಾಲ ತೀರಿಸಿತು. ಗಫಾರ್ ಖಾನರ ಶಬ್ದದಲ್ಲಿ ಹೇಳುವುದಾದರೆ "ಭಾರತವು ಸ್ವತಂತ್ರದ ನಂತರ ತೋಳಗಳಿಗೆ ಒಪ್ಪಿಸಿಬಿಟ್ಟಿತು."

ಗಫಾರ್ ಖಾನರು ಗಡಿನಾಡಿನ ಕ್ರೂರ ಪಠಾಣರಿಗೆ ಅಹಿಂಸೆಯ ಪಾಠ ಹೇಳಿಕೊಟ್ಟು ಮೋಡಿ ಮಾಡಿ ತೋರಿಸಿದರು. ಈ ಕೆಲಸ ಮಾಡಿ ಅವರ ಮನುಷ್ಯನ ಶರೀರದ ಮೇಲಲ್ಲ, ಆತ್ಮದ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಿಬಿಟ್ಟರು. ೧೯೩೭ರ ಗಡಿನಾಡಿನ ಯಾತ್ರೆಯ ನಂತರ ಗಾಂಧೀಜಿಯವರು ಹೀಗೆ ಬರೆದಿದ್ದಾರೆ. "ಅವರು (ಗಫಾರ್ ಖಾನ್) ನಿಜವಾಗಿಯೂ ದೈವಪುರುಷರು. ಈಶ್ವರನಲ್ಲಿ ಅವರಿಗೆ ನಂಬಿಕೆ ಇದೆ. ಭಗವಂತ ಇಷ್ಟಪಟ್ಟಾಗ

[೧೯೮೮ರ ಮೇ ತಿಂಗಳ 'ನವನೀತ' ಹಿಂದಿ ಡೈಜೆಸ್ಟಿನಲ್ಲಿ ಪ್ರಕಟವಾದ ಪಿ. ಡಿ. ಟಂಡನ್‌ರವರ "ಗಫಾರ್ ಖಾನ್ : ದೇಶಪ್ರೇಮ ಔರ್ ಕುರ್ಬಾನಿ ಕಿ ಕಹಾನಿ" ಲೇಖನದ ಕನ್ನಡ ಅನುವಾದ.

ಮಾತ್ರ ನನ್ನ ಆಂದೋಳನ ಸಫಲವಾಗುವುದೆಂದು ಅಭಿಪ್ರಾಯ ಪಟ್ಟಿದ್ದರು. ಅವರು ತತ್ಪರತೆಯಿಂದ ಕೆಲಸ ಮಾಡುತ್ತಿದ್ದರು. ಆದರೆ ಅದರ ಪರಿಣಾಮವನ್ನು ಕುರಿತು ಚಿಂತಿಸುತ್ತಿರಲಿಲ್ಲ. ಪಠಾಣರನ್ನು ಉದ್ಧಾರ ಮಾಡಲು ಅಹಿಂಸೆಯನ್ನು ಬಿಟ್ಟರೆ ಬೇರೇನೂ ಮಾರ್ಗ ಇಲ್ಲವೆಂದು ನಂಬಿದ್ದರು. ಪಠಾಣರನ್ನು ಸಮಾಜದ ಗೂಂಡಾಗಳನ್ನಾಗಿ ನೋಡಲು ಅವರು ಇಷ್ಟಪಡುತ್ತಿರಲಿಲ್ಲ. ಪಠಾಣರನ್ನು ಶೋಷಿಸಿ ಅಜ್ಞಾನ, ಅಂಧಕಾರದಲ್ಲಿ ಇಟ್ಟಿದ್ದೇವೆ ಎಂಬುದು ಅವರ ವಿಚಾರವಾಗಿತ್ತು. ಪಠಾಣರು ತಮ್ಮ ಶೌರ್ಯದಲ್ಲಿ ವಾಸ್ತವಿಕ ಜ್ಞಾನವನ್ನೂ ಪಡೆದುಕೊಳ್ಳಲಿ ಎಂದು ಆಶಿಸುತ್ತಿದ್ದರು. ಇದು ಕೇವಲ ಅಹಿಂಸೆಯಿಂದಲೇ ಸಾಧ್ಯವೆಂದೂ ತಿಳಿದಿದ್ದರು."

ಗಫಾರ್ ಖಾನರು ಕಟ್ಟಾ ಮುಸಲ್ಮಾನರಾಗಿದ್ದರು. ಆದರೆ ಎಲ್ಲ ಧರ್ಮಗಳನ್ನೂ ಹೃತ್ಪೂರ್ವಕವಾಗಿ ಗೌರವಿಸುತ್ತಿದ್ದರು. ಅವರು ಬೈಬಲ್ ಮತ್ತು ಗೀತೆಯನ್ನು ಚೆನ್ನಾಗಿ ತಿಳಿದುಕೊಂಡಿದ್ದರು. ಅವರ ಧರ್ಮ ಅವರಿಗೆ ಮನುಷ್ಯರ ಸೇವೆ ಮಾಡುವುದನ್ನು ಕಲಿಸಿಕೊಟ್ಟಿತ್ತು. ಅವರು ಯಾವ ಜಾತಿ ಅಥವಾ ಧರ್ಮದವರೇ ಆಗಿರಲಿ, "ಬಾಪೂಜಿಯವರು ಯಾವುದೇ ನಿರ್ಣಯಕ್ಕೆ ಬರುವ ಮೊದಲು ದೇವರ ಮುಂದೆ ತಲೆ ತಗ್ಗಿಸಿ ಮುಂದುವರಿಯುತ್ತಿದ್ದರು. ಭಗವಂತ ಸರಿಯಾದ ಮಾರ್ಗ ತೋರಿಸಲೆಂದು ಪ್ರಾರ್ಥಿಸುತ್ತಿದ್ದರು. ಅವನೆಂದೂ ಭಕ್ತರಿಗೆ ತಪ್ಪುಮಾರ್ಗ ತೋರಿಸಲಾರ. ಆದ್ದರಿಂದಲೇ ನಾನು ಬಾಪೂಜೀಯವರ ಎಲ್ಲ ನಿರ್ಣಯವನ್ನೂ ತೆಪ್ಪಗೆ ಒಪ್ಪಿಕೊಳ್ಳುತ್ತಿದ್ದೆ" ಎಂದು ಗಫಾರ್ ಖಾನರು ಹೇಳುತ್ತಿದ್ದರು.

ಗಫಾರ್ ಖಾನರು ವಿನಯ ಮತ್ತು ಕುಲೀನತೆಯ ಪ್ರತೀಕವಾಗಿದ್ದರು. ಜನರು ಅವರನ್ನು ಗಡಿನಾಡ ಗಾಂಧಿ ಎಂದೇ ಕರೆಯುತ್ತಿದ್ದರು. ಒಮ್ಮೆ ನಾನು ಯಾತ್ರೆ ಮಾಡುತ್ತಿದ್ದಾಗ ನನ್ನ ಜೊತೆಗಿದ್ದ ಅವರನ್ನು 'ಗಡಿನಾಡ ಗಾಂಧೀ' ಎಂದೇ ಸಂಬೋಧಿಸುತ್ತಿದ್ದೆ. ಅವರು ಬೇಸರದಿಂದ "ತಾವು ನನಗೆ ಅಂಥ ಪದವಿ ಕೊಟ್ಟು ಬಾರ ಹೊರಿಸುತ್ತಿದ್ದೀರಿ. ನನ್ನನ್ನು ಗಫಾರ್ ಖಾನ್ ಎಂದೇಕೆ ಕರೆಯುವುದಿಲ್ಲ?" ಎಂದು ಕೇಳಿದ್ದರು. ಆಗ ನನಗೆ ಅವರ ವಿನಯದ ಪರಿಚಯವಾಯಿತು. ಒಂದು ಗಂಟೆಯವರೆಗೂ ನಾನು ಅವರೊಡನೆ ಮಾತನಾಡುತ್ತಿದ್ದೆ. ನನ್ನ ಎಲ್ಲ ಪ್ರಶ್ನೆಗಳಿಗೂ ಅವರು ಸರಳವಾಗಿ, ಯೋಗ್ಯವಾದ ಉತ್ತರ ಕೊಡುತ್ತಿದ್ದರು.

ಭಾರತದ ವಿಭಜನೆ ಒಂದು ಪ್ರಳಯದಂತೆಯೇ ಇತ್ತು. ಇದರಿಂದ ಗಫಾರ್ ಖಾನರಿಗೆ ಬಹಳ ನೋವಾಯಿತು. "ಬಾಪೂ ಮತ್ತು ತಾವು ಭಾರತದ ವಿಭಜನೆಯನ್ನು ವಿರೋಧಿಸಿದರು. ಆದರೆ ಯಾರೂ ಅವರ ಮಾತು ಕೇಳಲಿಲ್ಲ" ಎಂದು ಹೇಳಿದ್ದರು.

ಗಫಾರ್ ಖಾನರ ತಂದೆ ಒಬ್ಬ ಗೌರವಯುತ ಮತ್ತು ಧಾರ್ಮಿಕ ವ್ಯಕ್ತಿಯಾಗಿದ್ದರು. ಅವರು ತನ್ನ ಮಗನ ಜೀವನದ ಮೇಲೆ ಪ್ರಭಾವ ಬೀರಿದ್ದರು. ಒಮ್ಮೆ ಗಫಾರ್ ಖಾನರು ಇಂಜಿನೀಯರ್ ಪರೀಕ್ಷೆಗಾಗಿ ಇಂಗ್ಲೆಂಡಿಗೆ ಹೊರಟಾಗ ತಾಯಿ ಹೇಳಿದ್ದರು. "ನನ್ನ ಒಬ್ಬ ಮಗ ಹೊರದೇಶಕ್ಕೆ ಹೋಗಿದ್ದಾನೆ. ನೀನೂ ಹೊರಟು ಹೋದರೆ ನಾನು ಏನು ಮಾಡಲಿ?" ಎಂದು ಅಳುತ್ತ ಹೇಳಿದ್ದರು. ಆಗ ಗಫಾರ್

ಖಾನರು ತಮ್ಮ ತಾಯಿಯ ಸಮಾಧಾನಕ್ಕಾಗಿ ಇಂಗ್ಲೆಂಡ್ ಪ್ರವಾಸವನ್ನು ನಿಲ್ಲಿಸಿದ್ದರು.

ತಮ್ಮ ಪ್ರಾಂತ್ಯದಲ್ಲಿ ರಾಷ್ಟ್ರೀಯ ಶಾಲೆಗಳನ್ನೂ ತೆರೆದಾಗ ಅವರು ಸರ್ಕಾರದ ಕೋಪಕ್ಕೆ ಗುರಿಯಾದರು. ಸರ್ಕಾರವು ಖಾನರ ತಂದೆ ಬಹರಾಂಖಾನರಿಗೆ "ನಿಮ್ಮ ಮಗ ತಮ್ಮ ಕೆಲಸಗಳಿಂದ ಪ್ರಾಂತ್ಯದ ಶಾಂತಿಗೆ ಭಂಗ ತರುತ್ತಿದ್ದಾರೆಂದು ನಿಮ್ಮ ಹುಡುಗನಿಗೆ ಬುದ್ಧಿ ಹೇಳಿ" ಎಂದು ದೂರು ನೀಡಿದರು. ತಂದೆ ಗಫಾರ್ ಖಾನರಿಗೆ ಈ ವಿಷಯ ತಿಳಿಸಿದಾಗ ಅವರು "ಅಪ್ಪಾಜಿ ಬ್ರಿಟಿಷರು ನಿನಗೆ ನಮಾಜು ಮಾಡುವುದನ್ನು ನಿಲ್ಲಿಸು ಎಂದು ಹೇಳಿದರೆ ನೀನು ನಿಲ್ಲಿಸುವೆಯಾ" ಎಂದು ಕೇಳಿದಾಗ ತಕ್ಷಣ "ಇಲ್ಲ, ನಿಲ್ಲಿಸುವುದಿಲ್ಲ" ಎಂದು ಉತ್ತರ ಕೊಟ್ಟರು. ಗಫಾರ್ ಖಾನರು "ರಾಷ್ಟ್ರೀಯ ಶಿಕ್ಷಣ ಕೊಡಲು ಕೈಗೊಂಡಿರುವ ಅವರ ಆ ಕಾರ್ಯವೂ ಒಂದು ಧಾರ್ಮಿಕ ಕರ್ತವ್ಯ" ಎಂದು ತಿಳಿಯಪಡಿಸಿದರು.

ಗಫಾರ್ ಖಾನರಲ್ಲಿ ಪದವಿಯ ವ್ಯಾಮೋಹ ಇರಲಿಲ್ಲ. ಎರಡು ಬಾರಿ ಕಾಂಗ್ರೆಸ್ ಅಧ್ಯಕ್ಷ ಪದವಿಗಾಗಿ ಆಹ್ವಾನಿಸಿದಾಗ "ನಾನು ಮುಖಂಡನಲ್ಲ. ಮುಖಂಡನಾಗಲಾರೆ", ಎಂದು ತಳ್ಳಿಹಾಕಿದರು. ಗಾಂಧೀಜಿಯಲ್ಲಿ ಅವರಿಗೆ ಪೂರ್ಣ ನಂಬಿಕೆಇತ್ತು. ಗಾಂಧೀಜಿಯವರ ಸೈನ್ಯದಲ್ಲಿ ಸಿಪಾಯಿಯಾಗುವುದರಲ್ಲಿಯೇ ತೃಪ್ತಿ ಕಂಡಿದ್ದರು. ಅವರ ಬಗ್ಗೆ ಜವಾಹರಲಾಲರು ಹೀಗೆ ಹೇಳಿದ್ದರು—"ಅವರು ರಾಜ ನೀತಿಜ್ಞರು ಇರುವಂತೆ ಇರಲಿಲ್ಲ. ರಾಜನೀತಿಯ ಕುತಂತ್ರ ಅವರಲ್ಲಿರಲಿಲ್ಲ, ಅವರು ಸರಳ ಸ್ವಭಾವದ ವ್ಯಕ್ತಿಯಾಗಿದ್ದರು."

ಮನುಷ್ಯನಿಗೆ ತನ್ನ ಸಿದ್ಧಾಂತಗಳಲ್ಲಿ ಪೂರ್ಣ ನಂಬಿಕೆ ಇಲ್ಲದಿದ್ದರೆ, ಅವನು ದೇವರನ್ನೂ ನಂಬದಿದ್ದರೆ, ಅವನು ಘೋರ ಅನ್ಯಾಯ ಮತ್ತು ದಾರುಣ ದುಃಖವನ್ನು ಸಹಿಸಲಾರದವನಾಗುತ್ತಾನೆ. ಗಫಾರ್ ಖಾನರು ತಮ್ಮ ಜೀವನದ ೨೯ ವರ್ಷಗಳನ್ನು ಜೈಲಿನಲ್ಲಿ ನಗುನಗುತ್ತಲೇ ಕಳೆದಿದ್ದರು. ಅವರ ಆದರ್ಶ ಅವರಿಗೆ ಜೀವನಕ್ಕಿಂತಲೂ ಮಿಗಿಲಾಗಿತ್ತು. ಅವರು ತಮ್ಮ ಪ್ರಾಣಹೋದರೂ ಆದರ್ಶ ಬಿಡುತ್ತಿರಲಿಲ್ಲ. ಪಾಕಿಸ್ತಾನವಾದನಂತರ ೧೬ ವರ್ಷಗಳು ಜೈಲಿನಲ್ಲಿದ್ದರು. ಇಷ್ಟು ದೊಡ್ಡ ಮನುಷ್ಯರನ್ನು ಪಾಕಿಸ್ತಾನದ ಸಣ್ಣ ಜನ ವರ್ಷಗಟ್ಟಲೆ ಜೈಲಿನಲ್ಲಿಟ್ಟಿದ್ದರು. ಇದು ಅತೀವ ದುಃಖಕರ ಸಂಗತಿ.

ಸರ್ಕಾರದ ಜೊತೆ ಅನೇಕಬಾರಿ ಘರ್ಷಣೆಗಳು ನಡೆದು ಅನೇಕ ಕಷ್ಟಗಳನು ಅನುಭವಿಸಿದರು. ಗಾಂಧೀಜಿಯ ದಂಡಿಯಾತ್ರೆ ನಡೆದ ನಂತರ ಪೆಷಾವರ್‌ನಲ್ಲಿ ರಾಜಕೀಯ ಚೈತನ್ಯ ಉಂಟಾಗಿತ್ತು. ಗಫಾರ್ ಖಾನ್ ಮತ್ತು ಅವರ ಸಹೋದರನ್ನು ರಾಜದರಬಾರಿಗೆ ಕರೆಯಲಾಗಿತ್ತು. ಆದರೆ ಅವರು ಅದನ್ನು ತಿರಸ್ಕರಿಸಿದರು. ಇದರಿಂದ ಕೋಪಗೊಂಡ ಕಮಿಷನರ್ ಅವರನ್ನು ಬಂಧಿಸಿದರು. ಗಫಾರ್ ಖಾನರು ಅನೇಕಬಾರಿ ಜೈಲಿಗೆ ಹೋದರೂ ಕೂಡ, ಅವರು ಸರ್ಕಾರದಿಂದ ತೊಂದರೆಗೀಡಾದರೂ ಕೂಡ ಅವರ ಆದರ್ಶ–ತತ್ವ ಬಿಡಲಿಲ್ಲ. ಒಂದು ಬಾರಿ ಜೈಲಿನಲ್ಲಿ ಅವರನ್ನು ಇತರ ಅಪರಾಧಿಗಳ ಜೊತೆಗೇ ಇಡಲಾಯಿತು. ಮತ್ತೊಮ್ಮೆ ಏಕಾಂತವಾಸದ ಶಿಕ್ಷೆ ಕೊಡಲಾಯಿತು. ಎಷ್ಟೋ ಬಾರಿ ಬೇಡಿಗಳು ಅವರಿಗೆ ಸರಿಹೋಗದೆ ಬೇರೆ ಬೇಡಿಗಳನ್ನು ತಯಾರಿಸಬೇಕಾಗುತ್ತಿತ್ತು. ಅವರ

ಕಾಲ ಹಿಮ್ಮಡಿಯಲ್ಲಿ ಗಾಯವಾಗಿ ರಕ್ತ ಸುರಿಯುತ್ತಿತ್ತು. ಜೈಲಿನ ಸೂಪರಿಂಟೆಂಡೆಂಟರು ಸಮಾಧಾನದ ರೀತಿಯಲ್ಲಿ "ನಿಧಾನವಾಗಿ ನಿಮಗೆ ಅಭ್ಯಾಸವಾಗುತ್ತದೆ" ಎಂದು ಹೇಳಿದ್ದರು.

ಗಫಾರ್‌ಖಾನರ ಜೀವನ ತ್ಯಾಗದ ಒಂದು ಕವಿತೆಯೇ ಆಗಿತ್ತು. ತಮಗಾಗಿ ಅವರು ಏನೂ ಬಯಸಿದವರಲ್ಲ. ತಾವು ಸಾಯುವ ಕಡೆಯವರೆಗೂ ಬೇರೆಯವರ ಸೇವೆ ಮಾಡಬೇಕೆಂಬುದು ಅವರ ಆಸೆಯಾಗಿತ್ತು. ಅವರನ್ನು ನೋಡುತ್ತಿದ್ದ ಹಾಗೇ ಜನರಲ್ಲಿ ಗೌರವದ ಭಾವನೆ ಮೂಡುತ್ತಿತ್ತು. ಸ್ವತಂತ್ರ ಸಂಗ್ರಾಮದ ಇತಿಹಾಸದಲ್ಲಿ ಎಷ್ಟೋ ಜನರನ್ನು ಮರೆತು ಹೋದರೂ, ಗಫಾರ್‌ಖಾನರನ್ನು ಮರೆಯಲು ಸಾಧ್ಯವಿಲ್ಲ. ಖಾನರು ನಮ್ಮ ಸ್ವತಂತ್ರ ಸಂಗ್ರಾಮದ ಮುಂದಾಳಾಗಿದ್ದರು. ನಮ್ಮ ರಾಷ್ಟ್ರೀಯ ಸಂಗ್ರಾಮದ ಪ್ರೇರಕ ಶಕ್ತಿಯಾಗಿದ್ದರು. ಅವರೊಬ್ಬ ತ್ಯಾಗಿಯಾಗಿದ್ದರು. ಇಡೀ ಪ್ರಪಂಚವೇ ಅವರನ್ನು ಗೌರವಿಸುತ್ತಿತ್ತು. ಅವರ ಮಾತು ಸಂದೇಶವಾಹಕವಾಗಿರುತ್ತಿತ್ತು. ಜವಾಹರಲಾಲರು ಒಮ್ಮೆ "ಅಬ್ದುಲ್ ಗಫಾರ್‌ಖಾನರ ಹೆಸರು ನಮ್ಮ ಸ್ವತಂತ್ರ ಇತಿಹಾಸದಲ್ಲಿ ಅಮರವಾಗಿರುವುದರಲ್ಲಿ ಸಂದೆಹವಿಲ್ಲ" ಎಂದು ಹೇಳಿದ್ದರು.

ಗಫಾರ್‌ಖಾನರು ಕೇವಲ ಭಾರತ, ಪಾಕಿಸ್ತಾನದ ಜನತೆ ಮಾತ್ರವಲ್ಲ ಇಡೀ ಮಾನವ ಜಾತಿಯಲ್ಲಿ ಪ್ರೀತಿ ಇಟ್ಟಿದ್ದರು. ಪ್ರತಿಯೊಬ್ಬ ವ್ಯಕ್ತಿಯಲ್ಲೂ ಭಗವಂತನನ್ನು ಕಾಣಬಯಸುತ್ತಿದ್ದರು. ಪ್ರತಿಯೊಬ್ಬ ಮನುಷ್ಯನೂ ಸೈತಾನನಿಂದ ದೂರ ಇರಲೆಂದು ಆಶಿಸುತ್ತಿದ್ದರು ೯೮ ವರ್ಷಗಳಾದರೂ ಕೂಡ ಜನರಿಗೆ ಮಾಡಬೇಕಾದ ಸೇವೆ ಮಾಡುತ್ತಲೇ ಇದ್ದರು. ಆದರ್ಶಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವುದು ಅವರಿಗೆ ಗೊತ್ತಿರಲಿಲ್ಲ. ಗಾಂಧೀಜಿಯ ನಂತರ ಅವರೆ ದೊಡ್ಡ ಗಾಂಧೀವಾದಿಯಾಗಿದ್ದರು. ಕೆಲವೇ ತಿಂಗಳ ಹಿಂದೆ ಅವರಿಗೆ ಒಂದ ಲಕ್ಷರೂಪಾಯಿ ಪುರಸ್ಕಾರವಾಗಿ ದೊರೆತಾಗ ಅವರು ಅದನ್ನು ಸ್ವೀಕರಿಸದೆ "ತಾವು ದೇವರ ಸೇವಕ. ತಮಗೆ ರೂಪಾಯಿಗಳಿಂದ ಏನು ಪ್ರಯೋಜನ?" ಎಂದು ಹೇಳಿದ್ದರು.

ಅವರ ಜೀವನ ಒಂದು ಅಪೂರ್ವ ಜೀವನವಾಗಿತ್ತು. ಅವರು ದೇಶಭಕ್ತಿಯ ಶ್ರೇಷ್ಠ ಕವಿತೆಯಾಗಿದ್ದರು, ತ್ಯಾಗದ ಕತೆಯಾಗಿದ್ದರು.

ಅನು : ಕೆ. ಶಾಂತಾಮಣಿ

ಅಸ್ಪೃಶ್ಯತೆ ಒಂದು ಪಾಪ, ಘೋರ ಅಪರಾಧ.

ಗಾಂಧೀಜಿ

ಪುಸ್ತಕ ವಿಮರ್ಶೆ

ಸ್ವಾಭಿಮಾನದ ಬೀಡಿಗೆ (ಕವನ ಸಂಕಲನ)—ಲೇಖಕರು : ವಿ. ಮುನಿವೆಂಕಟಪ್ಪ, ವಿಚಾರವಾದಿ ಪ್ರಕಾಶನ : ೪೮೨, ನಾಲ್ಕನೇ ಮೇನ್, ಸರಸ್ವತಿಪುರಂ, ಮೈಸೂರು-೫೭೦೦೦೯. ಪುಟಗಳು : ೭೨, ಬೆಲೆ : ೧೦ ರೂ.ಗಳು, ೧೯೮೮.

೧೯೮೨ರ 'ಕೆಂಡದ ನಡುವೆ'ಯ ನಂತರ ಆರು ವರ್ಷದ ಮೇಲೆ ಶ್ರೀ ಮುನಿವೆಂಕಟಪ್ಪನವರು ತಮ್ಮ ಎರಡನೇ ಕವನ ಸಂಕಲನ "ಸ್ವಾಭಿಮಾನದ ಬೀಡಿಗೆ" ಹೊರತಂದಿದ್ದಾರೆ. ಈ ಮಧ್ಯದ ಆರು ವರ್ಷದ ಅವಧಿ ಮುನಿಯವರ ಕಾವ್ಯಕ್ಕೆ ಗಣನೀಯವಾದ ಗುಣಾತ್ಮಕ ಬೆಳವಣಿಗೆಯನ್ನು ತಂದಿದೆ.

ಸಂಗ್ರಹದ ಹೆಸರಿನದೇ ಕವನ ಸ್ವಾಭಿಮಾನದ ಬೀಡಿಗೆ ಪ್ರಾರಂಭವಾಗುವುದು ಹೀಗೆ:

"ಹೋಗೋಣ ಹೊಸನಾಡಿಗೆ
ಸ್ವಾಭಿಮಾನದ ಬೀಡಿಗೆ"

ಈ ಸಾಲುಗಳು ಛಂದಸ್ಸಿನ ನಡೆಯಿಂದಾಗಿ, ಹೊಸ ಆಶಯದಿಂದಾಗಿ ಮನಸ್ಸಿಗೆ ತಾಗುತ್ತವೆ. ಸ್ವಭಾವೋಕ್ತಿ ಉಂಟುಮಾಡಬಹುದಾದ ಉತ್ತಮ ಕಾವ್ಯಗುಣಕ್ಕೆ ಈ ಸಾಲು ಉದಾಹರಣೆ. ಈ ಎರಡು ಸಾಲು—ಪಲ್ಲ—ಮುಗಿದೊಡನೆ ಐದು ಮಾತ್ರೆಯ ಒಳಗಡೆ ಎರಡು+ಮೂರು ಮಾತ್ರೆಗಳಾಗಿ ಒಡೆದು ಒಂದಾಗುವ ಎರಡು ಸಾಲು ಒಂದು ನಾಟಕೀಯತೆಯನ್ನುಂಟುಮಾಡುವಲ್ಲಿ ಅಥವಾ ಕವಿ ಕರೆಯುವ ವೇದಿಕೆಯನ್ನು ಪಾತ್ರೀಕರಿಸುವಲ್ಲಿ ಸಾರ್ಥಕವಾಗಿದೆ.

ಈ ಕವಿತೆ ದಲಿತ ಜನಾಂಗದ ಬೆಳವಣಿಗೆಯನ್ನು ಒಂದು ಪ್ರತ್ಯೇಕ ಚೌಕಟ್ಟಿನಲ್ಲಿಯೇ ಇಟ್ಟು ಚಿತ್ರಿಸುವುದಿಲ್ಲ. ಬದಲಾಗಿ ಇಡೀ ಮಾನವತೆ ಅದನ್ನ ಮೀರಿ ಪ್ರಾಣಿ ಪಕ್ಷಿ ನಿಸರ್ಗ ಒಟ್ಟಾರೆಯಾಗಿ ಅಖಂಡವಾದ ಪ್ರೀತಿಯ ಅದಮ್ಯ ಆಕಾಂಕ್ಷೆಯನ್ನು ಅಭಿವ್ಯಕ್ತಪಡಿಸುತ್ತದೆ.

ಈ ಸಂಕಲನದ ಮಹತ್ವದ ಕವಿತೆಗಳಲ್ಲಿ ಮತ್ತೊಂದು "ತಾಯಿ ಚಾಮುಂಡಿಗೆ" ನಾಡಿಗೆ ಬರಬಂದರೂ ಮೈಸೂರು ದಸರ ನಿಲ್ಲಲಿಲ್ಲ. ಚಾಮುಂಡಿಗೆ—ಭುವನೇಶ್ವರಿಗೆ ಪ್ರದರ್ಶನ ಮೆರವಣಿಗೆ ತಪ್ಪಲಿಲ್ಲ. ಇಂಥ ಸಂದರ್ಭದಲ್ಲಿಯೇ ಈ ಕವಿತೆ ಮೂಡಿ ಬಂದಿದೆ.

ಬರಬಡಿದ ಎದೆಗೆ
ಬರಲೇ ಇಲ್ಲ ಮಳೆ

ಬಡವರ ತುತ್ತಿನ ಚೀಲಕೆ
ಬರೀ ಭರವಸೆಗಳ ಹೊಳೆ

ಮೊದಲ ಎರಡು ಸಾಲುಗಳಿಗೆ ಪರಿಣಾಮವಾಗಿ ಬರುವ ಮುಂದಿನ ಎರಡು ಸಾಲು ಅರ್ಥವೈಪರೀತ್ಯವನ್ನು ಹೊಂದಿ ಒಂದು ಅಪೂರ್ವ ಕಾಂತಿ ಕವಿತೆಗೆ ಸಂದಿದೆ. ಇದೇ ಇಲ್ಲಿಯ ವ್ಯಂಗ್ಯ. ಕವಿತೆ ರಾಜಕೀಯ ಆಯಾಮವನ್ನು ಇಲ್ಲಿ ಪಡೆದುಕೊಳ್ಳುತ್ತದೆ. ಬಡತನದ ಭೀಕರತೆಯನ್ನು 'ತುತ್ತಿನ ಚೀಲ' ಚೆನ್ನಾಗಿ ಅಭಿವ್ಯಕ್ತಿಸುತ್ತದೆ.

ವರ್ತಮಾನಕ್ಕೂ, ಚರಿತ್ರೆಗೂ ಒಂದು ಸಹಯೋಗ ಸಂಬಂಧ ಇಲ್ಲದಾಗ ಸಂಸ್ಕೃತಿಗೆ ಎಡಬಿಡಂಗಿತನ ಉಂಟಾಗುತ್ತದೆ ಅಂಥ ಸ್ಥಿತಿ ಚಾಮುಂಡಿಯದಾಗಿದೆ, ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಅಂತೂ ನೀನು ಕಾಲಿಗೆ ಗೆಜ್ಜೆ ಕಟ್ಟಿ ಬಂದಿರುವೆ.

"ಅಂಬಾರಿಯೊಂದಿಗೆ
ಬಂದಿರುವೆ ಬಡವರ ಬೀದಿಗೆ"

ಇದರ ವ್ಯಂಗ್ಯವೆಂದರೆ ಈ ಚಾಮುಂಡಿ ಇಷ್ಟೆಲ್ಲ ಸಂಭ್ರಮದಿಂದ ಬಡವರ ಬಾಗಿಲಿಗೆ ಬಂದಿದ್ದಾಳೆ. ಬಡವರ ತುತ್ತಿನ ಚೀಲ ಬರಿದಾದರು ಸರ್ಕಾರ ಕರ ಕಂದಾಯವನ್ನು ಕೇಳದೇ ಇರುವುದಿಲ್ಲ. ಬಡವರ ತ್ಯಾಗದಿಂದಲೇ ಅದು ನಡೆಯಬೇಕಾದುದು. ಆದರೆ ಬಡವನಲ್ಲಿ ಇದ್ದುದಾದರೂ ಏನು ?

"ನೆಲ ಮುಟ್ಟದ ಮೋಡಗಳು
ಮೊಳಕೆ ಬರದ ಕಾಳುಗಳು
ಬರಿದೇ ಕುದಿಯುತ್ತಿರುವ ಜೀವಿಗಳು
ಹಾಡಾಗದ ನೋವುಗಳು"

ಈ ಸಾಲುಗಳು ಅಂತರಂಗ ಬಹಿರಂಗವನ್ನು ಸಶಕ್ತವಾಗಿ ಅಭಿವ್ಯಕ್ತಪಡಿಸಿವೆ. ಕಾವ್ಯಲೋಕಕ್ಕೆ ಬಹು ಬೆಲೆಯುಳ್ಳ ಕಾಣಿಕೆ ಈ ಸಾಲುಗಳು. ಈಗ ಕೇಳುವ ಚಾಮುಂಡಿಯೇ ಮೌನವಾಗಬೇಕಾಗಿದೆ. ಕವಿ ಕೇಳುತ್ತಾನೆ!

"ಓ ತಾಯಿ ಚಾಮುಂಡಿ
ಹನಿಸುವೆಯಾ ಕರುಣೆಯ ನಾಕು ಹನಿ ?
ಕೆನೆಗಟ್ಟಿದ ಕಂಬನಿ ?"

ಭಕ್ತನ ಈ ಬೇಡಿಕೆಗೆ ಚಾಮುಂಡಿ ಮೂಕವಿಸ್ಮಿತಳಾಗಿ ನಿಂತಿದ್ದಾಳೆ. ಅವಳು ಒಂದೇ ಸಮನೆ ಭಕ್ತನನ್ನು ನೋಡುತ್ತಾಳೆ. ಕಣ್ಣಿನಲ್ಲಿ ಏನು ತುಂಬಿದೆಯೊ, ಎದೆಯಲ್ಲಿ ಯಾವ ಬಿರುಗಾಳಿ ಬೀಸಿದೆಯೊ! ಹೀಗೆ ಮೌನವಾಗಿ ನಿಂತೇ ಇರುವ ತಾಯಿಯನ್ನು

"ತಾಯಿ ರಣಚಂಡಿ ಚಾಮುಂಡಿ ಕೇಳು ಬೇಕಾದುದೇನು?" ಎಂದು ಕೇಳುತ್ತಾನೆ. ಇಲ್ಲಿ ವಿಡಂಬನೆಯ ಮೊನಚು ಹರಿತವಾಗಿದೆ.

'ಜೀತದಟ್ಟ್ಯಾಗ' ಎನ್ನುವುದು ಮತ್ತೊಂದು ಗಮನಾರ್ಹವಾದ ಕವಿತೆ. ಕವಿತೆ ಜೀತದ ದಲಿತನೊಬ್ಬನ ಕರುಣಾಮಯವಾದ ಚಿತ್ರವನ್ನು ಮುಂದೊತ್ತುತ್ತದೆ.

"ಹಸಿವೊಂದೇ ಧರಿಸಿದಾಭರಣ
ಸಾಲವೊಂದೇ ಪಿತ್ರಾರ್ಜಿತ ಆಸ್ತಿ
ಉಳಿಸಿಕೊಂಡವದನೆ ನಾವು
ತಲತಲಾಂತರದಿಂದ"

ನಿಚ್ಚಳವಾಗಿ ದಲಿತನ ಆಸ್ತಿಯನ್ನು ತಪಶೀಲು ಮಾಡುತ್ತದೆ. ಬೇಂದ್ರೆಯವರ ಕವಿತೆಯ ಸಾಲುಗಳು ಅಲ್ಲಲ್ಲಿ ಬರುತ್ತವೆ. ಆದರೆ ಅವು ಕೇವಲ ಅನುಕರಣೆಗಾಗಿ ಬರುವುದಿಲ್ಲ. ಆ ಸಾಲುಗಳನ್ನು ಉಪಯೋಗಿಸಿಕೊಂಡು ಒಂದು ವ್ಯಂಗ್ಯವನ್ನು ಸಾಧಿಸುತ್ತಾರೆ.

ಕವಿತೆಯ ಎರಡನೇ ಭಾಗದಲ್ಲಿ ದಲಿತ ಅನ್ನದ ಅಗುಳನ್ನು ಕಂಡ ಕನಸಿನ ಚಿತ್ರವಿದೆ. ಕವಿತೆಯ ಸಂವಿಧಾನವೇ ದಲಿತನ ಕಷ್ಟವನ್ನು ಘನಗೊಳಿಸುತ್ತದೆ. ಈ ಅನ್ನವನ್ನು ಕಂಡಾಗ "ಬೆಳ್ಳಕ್ಕಿ ಮುತ್ತಿನ ಹಾಗೆ ಬೆಳ್ಳನೆ ಅನ್ನದ ಅಗುಳು" ಎನಿಸುತ್ತದೆ. ಅನ್ನವನ್ನು ದಲಿತ ವರ್ಣಿಸುವಲ್ಲಿಯ ಕಕ್ಕುಲತೆ ಅರ್ಥಪುಷ್ಟಿಯನ್ನು ತರುತ್ತದೆ. ಹಾಗೆ ಆತ ಕಂಡ ಅನ್ನ

"ಒಡತಿಯ ಕೈಯಿಂದ
ಮೇಲಿಂದ
ಥಟ್ಟನೆ ಸುರಿದ ಹಾಗೆ"

ತಾನೇ ಬೆಳೆದ ಭತ್ತ ಒಡತಿಯ ಕೈಯ್ಯಲ್ಲಿ ಅನ್ನವಾಗಿ ಹಾಗೆ ಹಾದುಹೋಗುವ ದೃಶ್ಯ ಕಂಡು ಖಿನ್ನನಾಗುತ್ತಾನೆ. ಮಾರ್ಕ್ಸ್ ಹೇಳುವ ದೂರೀಕರಣ ಸಹ ಇದೇ ಆಗಿದೆ.

ಇದೇ ವಸ್ತುವನ್ನು ಅಚ್ಚುಕಟ್ಟಾಗಿ ಮತ್ತು ಸಮರ್ಥವಾಗಿ ಚಿತ್ರಿಸುವ ಇನ್ನೊಂದು ಕವಿತೆ "ಒಂದು ಅಭಾವ ಗೀತೆ"

"ಸವೆದಹಗ್ಗ ತಗ್ಗಿಹೋದ ಬಿಂದಿಗೆ
ಬಿಟ್ಟೆ ಬಾವಿಗೆ
ಕಣ್ಣ ತಳ
ಪಾ
ತಾ
ಳ
ಮುಟ್ಟಿದ ಬಿಂದಿಗೆ

ತುಂಬಿ ಬಂತು
ಬಂತು
ಅನ್ನುವಷ್ಟರಲಿ
ಹಗ್ಗ ತುಂಡಾಗಿ
ಬರಿಗೈಲಿ ಮರಳಿದೆ ಮನೆಗೆ"

ಜೀತದವನ ಸ್ಥಿತಿಯನ್ನು 'ಸವೆದ ಹಗ್ಗ' ವಿವರಿಸಿದರೆ ಆದರಿಂದುಟಾಗುವ ಕೆಲಸದಲ್ಲಿಯ ಕಷ್ಟ ಮತ್ತು ನಿರಾಸಕ್ತಿಯನ್ನು ಪಾತಾಳ ವಿವರಿಸುತ್ತದೆ.

ಮುನಿವೆಂಕಟಪ್ಪನವರ ವೈಚಾರಿಕ ಮೂಲ ಇರುವುದು ಅಂಬೇಡ್ಕರಲ್ಲಿ. ಅಂಬೇಡ್ಕರರ ಕುರಿತಾಗಿ ಬಂದಾಗೆಲ್ಲ ಮುನಿಯುವರು ಗರಿಬಿಚ್ಚಿ ಹಾಡುತ್ತಾರೆ. ಇದು ಸ್ವಾಭಾವಿಕವಾದುದು. ದಲಿತ ಬದುಕಿಗೆ ಸ್ವಾಭಿಮಾನದ ದಾರಿಯನ್ನು ತೋರಿದವರು ಅವರು. ಅವರ ಕತ್ತಲೆಯ ದಾರಿಗೆ ಬೆಳಕನ್ನು ಬೀರಿದವರು. ಆ ಮುಖಾಂತರ ಇಡೀ ಮಾನವ ಕುಲಕ್ಕೆ ಬಿಡುಗಡೆಯನ್ನು ಹಾರೈಸಿದವರು. ಅಂಬೇಡ್ಕರರಿಗೆ "ಬೆಳಕಾಗಿ ಬಂದೆ ಕತ್ತಲ ಜಗತ್ತಿಗೆ ಸ್ವಾಭಿಮಾನದ ಮಳೆ ತಂದೆ" ಎಂದು ಹೇಳುವುದು ಸಾರ್ಥಕವಾಗಿದೆ.

ಅಂಬೇಡ್ಕರರ ನೆನೆವು ಬಂದಾಗ ಗರಿಗೆದರುವ ಮುನಿಯುವರ ಭಾವನೆ ಗಾಂಧಿ ನೆನಪಿಗೆ ವ್ಯಕ್ತವಾಗುತ್ತದೆ. ಗಾಂಧಿಯುವರ ಕುರಿತಾಗಿರುವ 'ಅಜ್ಜಾ' ಕವಿತೆ ರಚನೆಯಲ್ಲಿ ಕವಿ ಹೆಚ್ಚು ಸಂಯಮಿಗಳಾಗಿದ್ದರೆ ಈ ಕವಿತೆ ಒಂದು ಯಶಸ್ವೀ ಕವಿತೆಯಾಗುತಿತ್ತು. ಅದರಲ್ಲಿ ವೈಚಾರಿಕ ಉಗ್ರತೆ ಇರುವುದಾದರೂ ಸಮತೋಲ ಇಲ್ಲ. 'ಹರಿಜನ ಹೆಸರಿಟ್ಟ ಪುರೋಹಿತನಾಗಿ ಬಿಟ್ಟೆ' ಎಂಬಂಥ ಸಾಲುಗಳು ಅರ್ಥ ಪುಷ್ಟಿ ಪಡೆದಿರುವುದಾದರೂ ಇಡೀ ಕವಿತೆಯಲ್ಲಿ ಯಶಸ್ಸಿನ ಸಾಕ್ಷಾತ್ಕಾರವಾಗಲಿಲ್ಲ. ಅದು ಗಾಂಧಿಯುವರ ದ್ವಂದ್ವ ವನ್ನು ಮಾತ್ರ ಬೊಟ್ಟುಮಾಡುವಲ್ಲಿ ನಿಂತುಬಿಡುತ್ತದೆ. ಭಾಷಣದ ಮಟ್ಟಕ್ಕಿಂತ ಕವಿತೆ ಮೇಲೆರುವುದಿಲ್ಲ.

ಸಂಕಲನದಲ್ಲಿ "ಪಲ್ಲವಿಸು ಬಾ ವಸಂತ" ಎನ್ನುವ ಒಂದು ಉತ್ತಮವಾದ ಕವಿತೆ ಇದೆ. ಕನ್ನಡದ ಉತ್ತಮ ಭಾವಗೀತೆಗಳ ಸಾಲಿಗೆ ಸೇರಲು ತಕ್ಕಾದ ಕವಿತೆ ಇದು.

"ಎದೆ ತುಂಬ ನೋವುಗಳ
ಹೊತ್ತವರ ಅಂಗಳಕೆ
ಮೈತುಂಬ ನೋವುಗಳ
ಉಂಡವರ ಬಾಗಿಲಿಗೆ
ಪಲ್ಲವಿಸು ಬಾ ವಸಂತ"

ನಿಧಾನವಾದ ಛಂದಸ್ಸಿನ ನಡೆ, ಮೃದುವಾದ ಪದ ಬಂಧ, ವಸಂತದ ಸುಭಿನತೆಯಲ್ಲಿ ನೋವಿನ ಸಂಗೀತ ಮಿಡಿಯುುವಂತಿದೆ. ವಸಂತದ ಕುರಿತು ಉತ್ತೇಜಕವಾದ ಅನೇಕ ಕವಿತೆಗಳು ಕನ್ನಡದಲ್ಲಿ ಬಂದಿರುವುದಾದರೂ ಇಲ್ಲಿಯ ವಿಷಾದಭರಿತ ರಚನೆ ವಿಶೇಷತೆ ಉಳ್ಳದ್ದೆ.

ಮೇಲೆ ವಿವರಿಸಿದ ಕವಿತೆಗಳೆಲ್ಲ ಮುನಿಯವರ ಈ ಬೆಳವಣಿಗೆ ಅವರ ಕಾವ್ಯ ಜೀವನದಲ್ಲಿ ಒಂದು ಮೈಲುಗಲ್ಲು.

ಒಂದು ಚಾರಿತ್ರಿಕ ಹಿನ್ನೆಲೆಯಲ್ಲಿ ಹಿಡಿದುಬರುವ ಸಿಟ್ಟು ಸಹಾವಾಚ್ಯವಿದ್ದಾಗಲೂ ಕಾವ್ಯತ್ವವನ್ನು ಪಡೆದೀತು. ಅಂಥ ಸಾತ್ವಿಕ ಸಿಟ್ಟು, ಆಕ್ರೋಶ 'ಕೆಂಡದ ನಡುವೆ'ಯಲ್ಲಿ ಇತ್ತು. ಆದರೆ 'ಸ್ವಾಭಿಮಾನದ ಬೀಡಿಗೆ'ಯನ್ನು ಓದಿದಾಗ ಕೆಂಡದ ನಡುವೆಯಲ್ಲಿಯು ದಿಗಂಬರ ಕಾವ್ಯದಲ್ಲಿಯಂತಹ ಕೆಚ್ಚು ರಭಸ ಕಾಣೆಯಾದದ್ದು ಕಾಣುತ್ತದೆ. ಈ ಕೆಚ್ಚು ಕಸುವನ್ನು ಕಳೆದುಕೊಳ್ಳುವುದು ಕಾವ್ಯಕ್ಕೆ ಮಾಡುವ ಹಾನಿಯೇ ಆಗಿದೆ. ಆದ್ದರಿಂದ ಕಲೆ ಎಂದೊಡನೆ ಪ್ರತಿಮಾವಿಧಾನ ಎಂದೊಡನೆ ಸಿಟ್ಟು ಸಲ್ಲದು, ಆಕ್ರೋಶ ಸಲ್ಲದು ಎಂದೇನು ಅಲ್ಲ. ಆದರೆ ಅದನ್ನು ಒಂದು ಹದ ಅಂತಸ್ತಿಗೆತ್ತಿಕೊಂಡು ಅಭಿವ್ಯಕ್ತಿಪಡಿಸುವುದು, ದಲಿತ ಕಾವ್ಯಕ್ಕೆ ಯೋಗ್ಯವೇ ಆಗಿದೆ. ಮುನಿಯವರ ಸಾಧನೆ ಅದನ್ನು ಮರೆಯದಿರಲಿ ಎಂದು ಹಾರೈಸುತ್ತೇನೆ.

ಆರ್. ವಿ. ಭಂಡಾರಿ

ಮನಸಿನಲ್ಲಿ ಮಾತಿನಲ್ಲಿ, ಕೆಲಸದಲ್ಲಿ ಯಾರನ್ನೂ ನೋಯಿಸದಿರುವುದು ಎಲ್ಲರನ್ನೂ ಪ್ರೀತಿಸುವುದು, ಎಲ್ಲರಿಗೂ ಒಳ್ಳೆಯದನ್ನು ಬಯಸುವುದು ಇದೇ ಅಹಿಂಸಾ ಧರ್ಮ.

ಗಾಂಧೀಜಿ

ಪುಸ್ತಕ ವಿಭಾಗ

ಲಿಯೋ ಟಾಲ್‌ಸ್ಟಾಯ್ ಅವರ ಮಹಾ ಕಾದಂಬರಿ

ಅನ್ನಾ ಕರೆನಿನ

ತೃತೀಯ ಕಾಂಡ

ಅನುವಾದ
ದೇಜಗೌ

'ಅಯ್ಯೋ ದೇವರೆ, ನಾವು ಹೋಗುವುದಿಲ್ಲವೆಂದೇ ನಾನು ತಿಳಿದಿದ್ದೆ' ಎಂದವನ ಮಡದಿ ಕಳವಳದಿಂದ ಉತ್ತರಿಸಿದಳು.

'ಏನು? ಏನೆಂದೆ? ನಾವೆಲ್ಲರೂ—' ಎಂದವನು ಹೇಳಲು ತೊಡಗಿದಾಗ ಅತಿಶಯವಾದ ಕೆಮ್ಮು ಅವನನ್ನು ಮಾತಾಡಗೊಡಲಿಲ್ಲ; ಅಸಹಾಯಕನಂತೆ ತನ್ನ ಕೈ ಅಲ್ಲಾಡಿಸಿದನು.

ರಾಜಕುಮಾರ ತನ್ನ ಟೊಪ್ಪಿಗೆಯನ್ನು ಮೇಲೆತ್ತಿ, ಮಗಳೊಡನೆ ನಿರ್ಗಮಿಸಿದನು.

'ಅಯ್ಯೋ' ಎಂದು ರಾಜಕುಮಾರ ನಿಡುಸುಯ್ದನು. 'ನತದ್ರಷ್ಟ ಬಡಪ್ರಾಣಿಗಳು!'

'ಹೌದಪ್ಪ' ಎಂದು ಕಿಟ್ಟಿ ಉತ್ತರಿಸಿದಳು. 'ಅವರಿಗೆ ಮೂವರು ಮಕ್ಕಳಿದ್ದಾರೆ. ಆಳುಕಾಳುಗಳಿಲ್ಲ. ಆದಾಯ ಇಲ್ಲವೆಂದೇ ಹೇಳಬಹುದು. ಅಕಾಡೆಮಿಯಿಂದ ಅವನಿಗೇನೋ ಒಂದಿಷ್ಟು ಬರುತ್ತದೆ.' ಅನ್ನಾಪಾವ್‌ಲೋವ್ನಳ ನಡತೆಯಲ್ಲಿ ತನ್ನ ಬಗೆಗುಂಟಾಗಿದ್ದ ವಿಚಿತ್ರ ವ್ಯತ್ಯಾಸ ಕಾರಣವಾಗಿ ತನ್ನ ಮನಸ್ಸಿನಲ್ಲಿ ಕೆದರಿದ ವ್ಯಾಕುಲವನ್ನು ನಿರೋಧಿಸಲೆಂದು ಪ್ರಯತ್ನಿಸುತ್ತ ಅವಳು ಸರಸರನೆ ಮಾತಾಡಿದಳು.

'ಇಗೋ, ಮದಾಂ ಸ್ಟಾಲ್ ಇಲ್ಲಿದ್ದಾರೆ' ಎಂದು ಕಿಟ್ಟಿ ಸ್ನಾನದ ಕುರ್ಚಿಯನ್ನು ತೋರಿಸುತ್ತ ನುಡಿದಳು. ತಲೆದಿಂಬುಗಳ ಆಸರೆಯಲ್ಲಿ, ಬಿಸಿಲು ಮರೆಗಳ ರಕ್ಷೆಯಲ್ಲಿ ಬೂದುನೀಲಿಬಣ್ಣಗಳ ವ್ಯಕ್ತಿಯೊಂದು ಒರಗಿಕೊಂಡಿತ್ತು.

ಆ ವ್ಯಕ್ತಿಯೇ ಮದಾಂಸ್ಟಾಲ್. ಅವಳ ಹಿಂದೆ ವಿಷಣ್ಣವದನದ, ದಷ್ಟಪುಷ್ಟ ದೇಹದ ಜರ್ಮನ್ ಕಾರ್ಮಿಕನೊಬ್ಬ ನಿಂತಿದ್ದನು. ಅವನವಳ ಕುರ್ಚಿಯನ್ನು ತಳ್ಳುತ್ತಿದ್ದನು. ಅವಳ ಬದಿಯಲ್ಲಿ ಚೆಂಗೂದಲಿನ ಸ್ವೀಡೀಯ ಕೌಂಟನೊಬ್ಬ ನಿಂತಿದ್ದನು. ಕಿಟ್ಟಿಗೆ ಅವನ ಹೆಸರು ಕೂಡ ಗೊತ್ತಿತ್ತು. ಅಪೂರ್ವ ವಸ್ತುವೆನ್ನುವಂತೆ ಆ ಮಹಿಳೆಯನ್ನೇ ದುರುಗುಟ್ಟಿಕೊಂಡು ನೋಡುತ್ತ ಕೆಲವು ಮಂದಿ ರೋಗಿಗಳು ಸನಿಹದಲ್ಲಿ ಬಳಸಾಡುತ್ತಿದ್ದರು.

ರಾಜಕುಮಾರ ಅವಳ ಬಳಿಗೆ ಹೋದನು. ತನ್ನ ಮನಸ್ಸನ್ನು ಮೊದಲೇ ಕದಡಿದ್ದ ಅಣಕದ ಕಿಡಿಯನ್ನು ಕಿಟ್ಟಿ ಪುನಃ ಅವನ ಕಣ್ಣಲ್ಲಿ ಗುರುತಿಸಿದಳು. ಅವನು ಸ್ಟಾಲ್‌ಳ ಬಳಿಗೆ ಹೋದನು. ಈಚೀಚೆಗೆ ಕೇವಲ ಕೆಲವರೇ ಮಾತಾಡುತ್ತಿದ್ದ ಉತ್ತಮ ಫ್ರೆಂಚ್ ಭಾಷೆಯಲ್ಲಿ, ವಿನಯ ಸೌಜನ್ಯಗಳ ಧಾಟಿಯಲ್ಲವಳನ್ನು ಸಂಬೋಧಿಸಿದನು.

'ನಿಮಗೆ ನನ್ನ ನೆನಪಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಮಗಳ ಮೇಲೆ ವರ್ಷಿಸಿರುವ ಅಪಾರ ಕೃಪೆಗಾಗಿ ನಿಮ್ಮನ್ನು ನಾನು ವಂದಿಸಬೇಕಾಗಿದೆ; ನನ್ನ ಗುರುತನ್ನು ನಿಮ್ಮ ನೆನಪಿಗೆ ತಂದುಕೊಡಬೇಕಾಗಿದೆ.' ಎಂದವನು ತನ್ನ ಟೊಪ್ಪಿಗೆಯನ್ನು ತೆಗೆಯುತ್ತ ನುಡಿದನು.

'ರಾಜಕುಮಾರ ಅಲೆಕ್ಸಾಂಡರ್ ಶರ್‌ಬತ್‌ಸ್ಕಿ' ಎಂದು ಸ್ಟಾಲ್ ನುಡಿಯುತ್ತ, ತನ್ನ ದಿವ್ಯ ನೇತ್ರಗಳನ್ನು ಮೇಲೆತ್ತಿ ಅವನ ಕಡೆಗೆ ನೋಡಿದಳು. ಕಿಟ್ಟಿಯಿಗ ಆ ನೇತ್ರಗಳಲ್ಲಿ ಕಳವಳದ ಛಾಯೆಯನ್ನು ಗಮನಿಸಿದಳು. 'ತುಂಬ ಸಂತೋಷ. ನಿಮ್ಮ ಮಗಳನ್ನು ನಾನು ತುಂಬ ಪ್ರೀತಿಸುತ್ತೇನೆ.'

'ನಿಮ್ಮ ಆರೋಗ್ಯವಿನ್ನು ಸುಧಾರಿಸಿಲ್ಲ?'

'ನಿಜ. ನಾನದಕ್ಕೆ ಒಗ್ಗಿಕೊಂಡಿದ್ದೇನೆ.' ಎಂದು ಮದಾಂ ಸ್ಕ್ವಾಲ್ ನುಡಿದು, ಅವನನ್ನು ಸ್ವಿಡೀಯ ಕೌಂಟ್‌ಗೆ ಪರಿಚಯಿಸಿಕೊಟ್ಟಳು.

'ನೀವೇನೂ ಹೆಚ್ಚು ಬದಲಾಯಿಸಿಲ್ಲ' ಎಂದು ರಾಜಕುಮಾರ ಅವಳಿಗೆ ತಿಳಿಸಿದನು. 'ಹತ್ತು ಹನ್ನೊಂದು ವರ್ಷಗಳಿಂದ ನಿಮ್ಮನ್ನು ನೋಡುವ ಭಾಗ್ಯ ನನಗೊದಗಿ ಬರಲಿಲ್ಲ.

'ದೇವರು ಉಪದ್ರವ (ಶಿಲುಬೆ) ಕೊಡುತ್ತಾನೆ; ಅದನ್ನು ಸಹಿಸುವ ಶಕ್ತಿಯನ್ನು ಕರುಣಿಸುತ್ತಾನೆ. ಜೀವನದ ಗುರಿ ಯಾವುದೆಂದು ಹಲವುಸಲ ಮನುಷ್ಯ ಬೆರಗಾಗುತ್ತಾನೆ....ಓ, ಬೇರೊಂದು ಪಾರ್ಶ್ವ!' ಎಂದವಳು ತನ್ನ ಪಾದಗಳಿಗೆ ತಪ್ಪಾಗಿ ಕಂಬಳಿ ಸುತ್ತುತ್ತಿದ್ದ ವರೆಂಕಳಿಗೆ ಕೋಪದಿಂದ ನುಡಿದಳು.

'ಪ್ರಾಯಶಃ ಒಳಿತನ್ನೆಸಗುವ ಸಲುವಾಗಿ' ಎಂದು ರಾಜಕುಮಾರ ನುಡಿಯುವಾಗ ಅವನ ಕಣ್ಣುಗಳಲ್ಲಿ ನಗು ಚಿಮ್ಮಿತು.

'ತೀರ್ಮಾನ ನಮ್ಮ ಕೈಯಲ್ಲಿಲ್ಲ.' ಎಂದು ಸ್ಕ್ವಾಲ್ ರಾಜಕುಮಾರನ ಅಣಕವನ್ನರ್ಥಮಾಡಿಕೊಂಡು ಸೊಲ್ಲಿಸಿದಳು. 'ಹಾಗಾದರೆ ಆ ಪುಸ್ತಕವನ್ನು ಕಳಿಸಿ ಕೊಡುವಿರಾ, ಪ್ರಿಯ ಕೌಂಟ್? ನಾನು ನಿಮಗೆ ತುಂಬ ಕೃತಜ್ಞಳಾಗಿರುತ್ತೇನೆ.' ಎಂದವಳು ತರುಣ ಸ್ವಿಡೀಯನ ಕಡೆಗೆ ತಿರುಗಿಕೊಂಡು ನುಡಿದಳು.

'ಅಹ!' ಎಂದು ಹತ್ತಿರ ನಿಂತಿದ್ದ ಮಾಸ್ಕೊ ಕರ್ನಲ್ ಕಣ್ಣಿಗೆ ಬೀಳಲಾಗಿ ರಾಜಕುಮಾರ ಆಲ್ದನು. ಸ್ಕ್ವಾಲ್‌ಳಿಗೆ ನಮಸ್ಕರಿಸಿ, ತನ್ನ ಮಗಳೊಡನೆ ಅವನಲ್ಲಿಂದ ಕಾಲ್ತೆಗೆದನು. ಕರ್ನಲ್ ಸಹ ಅವರನ್ನು ಹಿಂಬಾಲಿಸಿದನು.

'ಶ್ರೀಮಂತಿಕೆಯ ಅಟ್ಟಹಾಸವೆಂದರೆ ಇದೇನೇ, ರಾಜಕುಮಾರ' ಎಂದು ಮಾಸ್ಕೊ ಕರ್ನಲ್ ಅಣಕವಾಡಿದನು. ತನ್ನನ್ನು ಮಾತಾಡಿಸದ ಸ್ಕ್ವಾಲ್‌ಳ ಬಗ್ಗೆ ಕಟುನಿಷ್ಠುರವನ್ನು ಕಾರಿದನು.

'ಅವಳು ಸ್ವಲ್ಪವೂ ಬದಲಾವಣೆ ಹೊಂದಿಲ್ಲ' ಎಂದು ರಾಜಕುಮಾರ ಪಡಿನುಡಿದನು.

'ಅವಳು ಖಾಯಿಲೆ ಬೀಳುವ ಮುನ್ನ, ಅಂದರೆ ಹಾಸುಗೆ ಹಿಡಿಯುವ ಮುನ್ನ ನಿಮಗವಳ ಪರಿಚಯವಿತ್ತೆ, ರಾಜಕುಮಾರರೆ?'

'ಹೌದ್ಹೌದು, ನನ್ನ ಕಣ್ಣೆದುರಿಗೆ ಅವಳು ಹಾಸುಗೆ ಹಿಡಿದಳು.' ಎಂದು ರಾಜಕುಮಾರ ಉತ್ತರಿಸಿದನು.

'ಅವಳು ತನ್ನ ಕಾಲ ಮೇಲೆ ನಿಂತುಕೊಂಡು ಹತ್ತು ವರ್ಷವಾಯಿತೆಂದು ಕೇಳಿದೆ.'

'ಅವಳು ಕುರುಗಾಲಿನವಳಾದ್ದರಿಂದ ಎದ್ದು ನಿಲ್ಲಲಾರಳು. ಅವಳ ಆಕಾರವೇ ವಿಕಾರವಾದದ್ದು.'

'ಅಪ್ಪ, ನೀವು ಹೇಳುವುದು ಸರಿಯಲ್ಲ' ಎಂದು ಕಿಟ್ಟಿ ಗಟ್ಟಿಯಾಗಿ ನುಡಿದಳು.

'ಕೆಟ್ಟ ನಾಲಗೆಗಳು ಹಾಗೆ ಹೇಳುತ್ತವೆ, ಮುದ್ದುಕುವರಿ. ಅವಳಿಂದಾಗಿ ವರೆಂಕ ತುಂಬ ಕಷ್ಟವನ್ನನುಭವಿಸುತ್ತಿರಬೇಕೆಂದು ಕಾಣುತ್ತದೆ'

'ಹಾಗೇನೂ ಇಲ್ಲ, ಅಪ್ಪ!' ಎಂದು ಕಿಟ್ಟಿ ಖಾರವಾಗಿ ಪ್ರತಿಭಟಿಸಿದಳು. 'ವರೆಂಕ ಅವರನ್ನು ಪೂಜಿಸುತ್ತಾಳೆ. ಅವರೆಂಥ ಉಪಕಾರಿ ಗೊತ್ತೆ? ಯಾರನ್ನಾದರೂ ಕೇಳಿ ನೋಡಿ. ಅವರ ಮತ್ತು ಅಲಿನೆ ಸ್ಟಾಲ್‌ಳ ವಿಚಾರ ಪ್ರತಿಯೊಬ್ಬರಿಗೂ ಗೊತ್ತಿದೆ.'

'ಪ್ರಾಯಶಃ ಇರಬಹುದು' ಎಂದು ರಾಜಕುಮಾರ ತನ್ನ ಮೊಳಕೈಯಿಂದ ಅವಳ ತೋಳನ್ನು ತಿವಿದನು. 'ಆದರೆ ಯಾರನ್ನೇ ಕೇಳಿದರೂ, ಯಾರಿಗೂ ಗೊತ್ತಾಗ ದಂತೆ ಜನರಿಗೆ ಲೇಸನ್ನೆಸಗುವುದೆ ಅತ್ಯುತ್ತಮ ಸೇವೆ.'

ತಂದೆಗೆ ಉತ್ತರ ಹೇಳುವ ಸ್ಥಿತಿಯಲ್ಲಿದ್ದರೂ, ತನ್ನ ಗೂಢಾಲೋಚನೆಗಳನ್ನು ಪ್ರಕಾಶಪಡಿಸಲಿಷ್ಟವಿಲ್ಲದ್ದರಿಂದ ಕಿಟ್ಟಿ ಉತ್ತರಿಸಲಿಲ್ಲ. ತನ್ನ ತಂದೆಯ ಅಭಿಪ್ರಾಯಗಳ ಪ್ರಭಾವಕ್ಕೊಳಗಾಗಕೂಡದೆಂದವಳು ಸಂಕಲ್ಪಿಸಿಕೊಂಡಿದ್ದಳು; ತನ್ನ ಅಂತರತಮ ಪವಿತ್ರ ಕ್ಷೇತ್ರದೊಳಗೆ ಅವನು ಪ್ರವೇಶಿಸಲಾಗದೆಂದು ನಿರ್ಧರಿಸಿಕೊಂಡಿದ್ದಳು; ಆದರೂ ಒಂದು ತಿಂಗಳಿಂದ ತನ್ನ ಹೃನ್ಮಂದಿರದಲ್ಲಿ ಆರಾಧಿಸುತ್ತಿದ್ದಮದಾಂ ಸ್ಟಾಲ್‌ಳ ಪವಿತ್ರ ಪ್ರತಿಮೆ, ಖಾಲಿಕೋಟನ್ನೇ ಮನುಷ್ಯನೆಂದು ಭ್ರಮಿಸಿಕೊಂಡಿದ್ದ ಸಂಗತಿ ಇದ್ದಕ್ಕಿದ್ದ ಹಾಗೆ ಬಯಲಾದಂತೆ, ಮತ್ತೆಂದೂ ಮರಳದ ಮಾಳ್ಕೆಯಲ್ಲಿ ಮರೆಯಾಗಿತ್ತು. ವಿಕಾರಾ ಕೃತಿಯಿಂದಾಗಿ ಯಾವಾಗಲೂ ಒರಗಿಕೊಂಡಿರುತ್ತಿದ್ದ, ತನ್ನಿಷ್ಟಕ್ಕನುಗುಣವಾಗಿ ಕಂಬಳಿ ಯನ್ನು ಹೊದಿಸಲಿಲ್ಲವೆಂಬ ಕಾರಣಕ್ಕಾಗಿ ವರೆಂಕಳ ಮೇಲೆ ಕೋಪಗೊಳ್ಳುತ್ತಿದ್ದ ಗುಜ್ಜು ಗಾಲಿನ ಮಹಿಳೆಯಲ್ಲದೆ ಅನ್ಯರಾರೂ ಅವಳ ಕಣ್ಣೆದುರಿಗಿರಲಿಲ್ಲ. ಮದಾಂಸ್ಟಾಲ್‌ಳನ್ನು ಮೊದಲಿನ ಸ್ಥಾನಕ್ಕೇರಿಸಲು ಅವಳು ಮಾಡಿದ ಕಲ್ಪನಾಸಾಧ್ಯವಾದ ಪ್ರಯತ್ನಗಳೆಲ್ಲ ನಿಷ್ಫಲವಾದುವು.

೩೫

ರಾಜಕುಮಾರ ತನ್ನ ಉಲ್ಲಾಸವನ್ನು ಸರಸಪ್ರಿಯತೆಯನ್ನು ಮಡದಿಗೆ, ಮಗಳಿಗೆ, ಗೆಳೆಯರಿಗೆ ಹಾಗೂ ತಾವಿಳಿದುಕೊಂಡಿದ್ದ ಮನೆಯ ಜರ್ಮನ್ ಯಜಮಾನನಿಗೆ ಅಂಟಿಸಿದನು.

ತಾನು ಮತ್ತು ಕಿಟ್ಟಿ ಚಿಲುಮೆಯಿಂದ ಹಿಂದಿರುಗುವಾಗ, ಮಾಸ್ಕೊಕರ್ನಲ್‌ನನ್ನೂ ಮೇರಿಯಾ ಎವ್‌ಜನೀವ್ನಳನ್ನೂ, ವರೆಂಕಳನ್ನೂ ಕಾಫಿಗೆ ಆಹ್ವಾನಿಸಿದನು; ಮೇಜು ಕುರ್ಚಿಗಳನ್ನು ತೋಟದಲ್ಲಿ, ಚೆಸ್‌ನಟ್ ಮರದಕೆಳಗೆ ಜೋಡಿಸುವಂತೆ ಏರ್ಪಾಡು ಮಾಡಿದನು. ತನ್ನ ಸರಸಸಲ್ಲಾಪಗಳಿಂದ ಮನೆಯೊಡೆಯನನ್ನೂ ಸೇವಕನನ್ನೂ ಹುರಿ ದುಂಬಿಸಿದನು. ಅವನ ಔದಾರ್ಯಕ್ಕೆ ಅವರೆಲ್ಲರೂ ಮಾರುಹೋದರು. ಆ ಮನೆಯ ಮೇಲಂತಸ್ತಿನಲ್ಲಿ ಹ್ಯಾಂಬರ್ಗ್ ನಗರದ ರೋಗಗ್ರಸ್ತ ವೈದ್ಯನೊಬ್ಬ ವಾಸಿಸುತ್ತಿದ್ದನು; ಅರ್ಧಗಂಟೆಯ ನಂತರ ಚೆಸ್‌ನಟ್ ಮರದಕೆಳಗೆ ಸೇರಿದ್ದ ಅರೋಗದೃಢಕಾಯರಾದ ರಷ್ಯನ್ನರ ನಿಶ್ಚಿಂತೆಯ ಕೂಟವನ್ನು ಮಾತ್ಸರ್ಯ ಪ್ರೇರಿತನಾದ ಅವನು ನಿಟ್ಟಿಸುತ್ತಿದ್ದನು. ಎಲೆಗಳ ನೆರಳಿನ ಅಲುಗಾಟದ ವೃತ್ತಗಳಲ್ಲಿ ಬಿಳಿಯ ಬಟ್ಟೆ ಹೊದಿಸಿದ್ದ ಮೇಜೊಂದು ನೆಲೆಗೊಂಡಿತ್ತು; ಅದರ ಮೇಲೆ ಕಾಫಿಪಾತ್ರೆ, ಬೆಣ್ಣೆ, ಮೊಸರುಗಟ್ಟಿ ಮತ್ತು ತಣ್ಣನೆಯ ಕೋಳಿಮಾಂಸಗಳನ್ನು ಜೋಡಿಸಲಾಗಿತ್ತು. ಲ್ಯಾವೆಂಡರ್ ಗಂಧದ ಪಟ್ಟಿಗಳಿಂದಲಂಕೃತ

ವಾಗಿದ್ದ ಟೋಪಿಯನ್ನು ಧರಿಸಿದ್ದ ರಾಜಕುಮಾರಿ ಅಗ್ರಾಸನದಲ್ಲಿ ಕುಳಿತು ಬಟ್ಟಲು ಗಳನ್ನೂ ಹೂರಣದ ಹಲ್ಲೆಗಳನ್ನೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ತಟಾಯಿಸು ತ್ತಿದ್ದಳು. ಮತ್ತೊಂದು ತುದಿಯಲ್ಲಿ ರಾಜಕುವರ ಕುಳಿತುಕೊಂಡು ಮನಃಪೂರ್ತಿಯಾಗಿ ತಿನ್ನುತ್ತ, ಗಟ್ಟಿಯಾಗಿ, ಸಂಭ್ರಮದಿಂದ ಹರಟೆ ಹೊಡೆಯುತ್ತಿದ್ದನು. ತಾನು ಭೇಟಿ ನೀಡಿದ ವಿಹಾರ ಕೇಂದ್ರಗಳಲ್ಲಿ ಅಪಾರವಾಗಿ ಕೊಂಡು ತಂದಿದ್ದ ನಾನಾ ಬಗೆಯ ಕೆತ್ತನೆಯ ಪೆಟ್ಟಿಗೆಗಳ, ಸಿಲ್ಪಿಗಳ ಮತ್ತು ಕಾಗದ ಕತ್ತರಿಸುವ ಚಾಕುಗಳ ರಾಶಿ ಅವನ ಸನಿಹದಲ್ಲಿತ್ತು; ಈಗವನು ಆಳುಹುಡುಗಿ ಲಿಷೆನ್ ಮೊದಲುಗೊಂಡು ಎಲ್ಲರಿಗೂ ಬಹುಮಾನರೂಪದಲ್ಲಿ ಅವುಗಳನ್ನು ಹಂಚುತ್ತಿದ್ದನು; ತನ್ನ ಹರುಕುಮುರುಕು ಜರ್ಮನ್ ಭಾಷೆಯಲ್ಲಿ ಮನೆಯೊಡೆಯನೊಡನೆ ಹಾಸ್ಯದ ಚಟಾಕಿ ಹಾರಿಸುತ್ತಿದ್ದನು; ಕಿಟ್ಟಿಯ ಅಸ್ವಸ್ಥತೆಯನ್ನು ಗುಣಮಾಡಿದ್ದು ಅಲ್ಲಿಯ ನೀರಲ್ಲ, ಅವನ ಪಾಕಕಲಾಪ್ರೌಢಿಮೆ ಯೆಂದೂ, ಅದರಲ್ಲಿಯೂ ಅವನ ಪ್ಲಮ್ ಹಣ್ಣಿನ ತಿಳಿಸಾರೆಂದೂ ಅವನು ಯಜಮಾನನ ಮುಂದೆ ಒತ್ತಿಹೇಳಿದನು. ತನ್ನ ಗಂಡನ ರಷ್ಯನ್ ರೀತಿ ನೀತಿಗಳನ್ನು ಕಂಡು ರಾಜ ಕುಮಾರಿ ನಗುತ್ತಿದ್ದಳು; ಆದರೆ ಈ ಜಲಧಾಮಕ್ಕೆ ಬಂದಾಗಿನಿಂದ ಅವಳ ಉಲ್ಲಾ ಸೋತ್ಸಾಹಗಳು ಈ ಪ್ರಮಾಣದಲ್ಲಿರಲಿಲ್ಲ. ಕರ್ನಲ್ ವಾಡಿಕೆಯಂತೆ ರಾಜಕುಮಾರನ ತಮಾಷೆಗಳನ್ನು ಕಂಡು ನಗುತ್ತಿದ್ದನು. ಆದರೆ ಯೂರೋಪಿನ ವಿಷಯಕ್ಕೆ ಬಂದಾಗ ಮಾತ್ರ, ಆ ಬಗ್ಗೆ ತಾನು ಕೂಲಂಕಷವಾಗಿ ಅಭ್ಯಾಸಮಾಡಿದ್ದ ಹೆಮ್ಮೆಯುಳ್ಳವನಾದ್ದ ರಿಂದ, ರಾಜಕುಮಾರಿಯು ಪಕ್ಷವನ್ನು ವಹಿಸಿಕೊಳ್ಳುತ್ತಿದ್ದನು. ರಾಜಕುಮಾರನ ಅಸಂಬದ್ಧವಾದ ಚತುರೋಕ್ತಿಗಳನ್ನು ಕೇಳಿದಾಗಲೆಲ್ಲ ಮುಗ್ಧಸ್ವಭಾವದ ಮೇರಿಯಾ ಎವ್ ಜಿನೀವ್ನ ಮೂರು ಲೋಕಕ್ಕೂ ಕೇಳಿಸುವಂತೆ ನಗುತ್ತಿದ್ದಳು. ಅವನ ಹಾಸ್ಯೋಕ್ತಿ ಗಳಿಂದೆದ್ದ ಹಾಸತರಂಗಗಳ ಸೋಂಕು ವರೆಂಕಳನ್ನು ಸಹ ಸೋಂಕದಿರಲಿಲ್ಲ; ಅವಳನ್ನು ಹಿಂದೆಂದೂ ಕಿಟ್ಟಿ ಆ ಸ್ಥಿತಿಯಲ್ಲಿ ನೋಡಿರಲಿಲ್ಲ.

ಇದೆಲ್ಲವು ಕಿಟ್ಟಿಯ ಮನಸ್ಸಿಗೆ ಹರ್ಷವನ್ನು ನೀಡಿತು, ನಿಜ; ಆದರೂ ಅವಳು ಸಂಶಯಕ್ಕೀಡಾಗಿದ್ದಳು. ತನ್ನ ಗೆಳೆಯರ ಬಗ್ಗೆ ತಂದೆ ಅಪ್ರಜ್ಞಾಪೂರ್ವಕವಾಗಿ ಮಾಡಿದ ತಮಾಷೆಯ ಟೀಕೆಗಳಿಂದ, ಹಾಗೂ ತಾನು ಪ್ರೀತಿಸಿದ್ದ ಇಲ್ಲಿಯ ಜೀವನದಿಂದುದ್ಭವಿಸಿದ್ದ ಸಮಸ್ಯೆಯನ್ನವಳು ಬಗೆಹರಿಸಲಸಮರ್ಥಳಾಗಿದ್ದಳು. ಆ ದಿನ ಬೆಳಗ್ಗೆ ತಾನೆ ಸಂದೇಹಕ್ಕ ವಕಾಶವಿಲ್ಲದಂತೆ, ಅಹಿತವಾಗುವಂತೆ ಬಯಲಾಗಿದ್ದ ಪೆತ್ರೊವ್ ಕುಟುಂಬದೊಡನೆಯ ತನ್ನ ಸಂಬಂಧದ ಬದಲಾವಣೆಯೂ ಸಮಸ್ಯೆಯನ್ನು ಹರಿತಗೊಳಿಸಿತ್ತು. ಪ್ರತಿಯೊಬ್ಬರೂ ಉಲ್ಲಾಸದಿಂದಿದ್ದರು; ಕಿಟ್ಟಿಗದು ಸಾಧ್ಯವಾಗಲಿಲ್ಲ. ಇದು ಅವಳ ಸಂಕಟವನ್ನು ದ್ವಿಗುಣ ಗೊಳಿಸಿತು. ಬಾಲ್ಯದಲ್ಲಿ ತಪ್ಪುಮಾಡಿದಾಗ ತನ್ನನ್ನು ಕೋಣೆಗೆ ಸೇರಿಸಿ ಬೀಗಹಾಕುತ್ತಿದ್ದ, ತನ್ನ ಸೋದರಿಯರು ಹೊರಗಡೆಯಿಂದ ಕೇಕೆಹಾಕುತ್ತಿದ್ದ ಅನುಭವ ಅವಳಿಗೆ ನೆನಪಾಯಿತು; ಅವಳಿಗೀಗ ಅಂಥದೇ ಅನುಭವವಾಯಿತು.

'ಕೆಲಸಕ್ಕೆ ಬಾರದ ವಸ್ತುಗಳು ಎಷ್ಟೊಂದಿವೆ? ಇವನ್ನೆಲ್ಲ ಕೊಂಡು ತಂದದ್ದೇಕೆ?' ಎಂದು ರಾಜಕುಮಾರಿ ನಗುತ್ತ, ತನ್ನ ಗಂಡನಿಗೆ ಕಾಫಿ ಬಟ್ಟಲನ್ನು ಕೊಡುತ್ತ ಕೇಳಿದಳು

'ಓ, ಇಷ್ಟೆಲ್ಲ ನಾನಾಗಿ ಇಚ್ಛಿಸಿ ತಂದದ್ದಲ್ಲ. ತಿರುಗಾಟಕ್ಕೆಂದು ಹೋಗುತ್ತಿದ್ದೆ. ಅಂಗಡಿಯೊಂದರ ಬಳಿ ನಿಂತಾಗ, ಏನಾದರೂ ಕೊಳ್ಳುವಂತೆ ಆ ಜನ ಅಲ್ಪರಿಯುತ್ತಿದ್ದರು. "ಘನತೆವೆತ್ತ ಮಹನೀಯರೆ, ಪ್ರಶಾಂತ ಪ್ರಭುಗಳೆ" ಎಂದವರು ನನ್ನನ್ನು ಸಂಬೋಧಿಸುತ್ತಿದ್ದರು. "ಪ್ರಶಾಂತ ಪ್ರಭು" ಎಂದು ಕೂಗಿದ ಕೂಡಲೇ ನಾನು ಮರುಳ ಮರಿದಂತಾಗುತ್ತಿದ್ದೆ. ಹತ್ತು ಬೆಳ್ಳಿಯ ನಾಣ್ಯಗಳು ನನ್ನ ಕೈಯಿಂದ ಜಾರಿ ಹೋಗುತ್ತಿದ್ದುವು.'

'ಪ್ರಾಯಶಃ ಅವರ ಕಾಟದಿಂದ ಪಾರಾಗಲಾರದ ಕಾರಣಕ್ಕಾಗಿ ಅಲ್ಲವೆ?' ಎಂದು ರಾಜಕುಮಾರಿ ನುಡಿದಳು.

'ನಿಜ, ನಿಜ. ಅವರ ಮಾತಿನ ಬೈರಿಗೆಯಿಂದಾಗಿ, ಅಸಹ್ಯ ಬೇಸರದಿಂದಾಗಿ, ನನ್ನ ಮುದ್ದೆ, ಯಾವ ಕಡೆ ಹೋಗುವುದೆಂಬುದೇ ಗೊತ್ತಾಗುತ್ತಿರಲಿಲ್ಲ.'

'ನಿಮಗೆ ಬೇಸರವೆ, ರಾಜಕುಮಾರರೆ? ಈಚೀಚೆಗೆ ಜರ್ಮನಿಯಲ್ಲಿ ಅನೇಕ ಸ್ವಾರಸ್ಯಕರ ಸಂಗತಿಗಳಿವೆ' ಎಂದು ಮೇರಿಯಾ ಎವ್‌ಜಿನೀವ್ನ ಸೊಲ್ಲಿಸಿದಳು.

'ಸ್ವಾರಸ್ಯಕರವಾದ ಸಂಗತಿಗಳನ್ನೆಲ್ಲ ಬಲ್ಲೆ: ಪ್ಲಮ್ ತಿಳಿಸಾರು, ಬಟಾಣಿ ಸಾಸೆಜ್.'

'ನೀವೇನು ಬೇಕಾದರೂ ಹೇಳಿ, ರಾಜಕುಮಾರರೆ; ಅವರ ವ್ಯವಸ್ಥೆಗಳು ತುಂಬ ಸ್ವಾರಸ್ಯಕರವಾಗಿವೆ.' ಎಂದು ಕರ್ನಲ್ ನುಡಿದನು.

'ಆದರೆ ಅವುಗಳಲ್ಲಿ ಸ್ವಾರಸ್ಯಕರವಾದದ್ದೇನಿದೆ? ಎಲ್ಲ ಜರ್ಮನರೂ ತಾಮ್ರದ ನಾಣ್ಯದಂತೆ ಸಂತುಷ್ಟರಾಗಿದ್ದಾರೆ: ಅವರು ಎಲ್ಲರನ್ನು ಗೆದ್ದುಕೊಂಡಿದ್ದಾರೆ. ಆದರೆ ನಾನು ಸಂತುಷ್ಟನಾಗಿರುವುದಾದರೂ ಹೇಗೆ? ನಾನು ಯಾರನ್ನೂ ಗೆದ್ದುಕೊಂಡಿಲ್ಲ. ನನ್ನ ಬೂಟುಗಳನ್ನು ನಾನೇ ಕಳಚಿ, ಬಾಗಿಲಿನ ಹೊರಗೆ ಇಡಬೇಕಾಗಿದೆ; ಬೆಳಗಾಗ ಹಾಸುಗೆಯಿಂದೆದ್ದು, ನಾನೇ ಬಟ್ಟೆ ಹಾಕಿಕೊಂಡು, ಭೋಜನಾಲಯಕ್ಕೆ ಹೋಗಿ, ಕೆಟ್ಟ ಟೀಯನ್ನು ಕುಡಿಯಬೇಕಾಗಿದೆ. ಮನೆಯಲ್ಲೋ? ಅಲ್ಲಿಯ ಪರಿಸ್ಥಿತಿಯೇ ಬೇರೆ. ಬೆಳಗ್ಗೆ ವಿರಾಮವಾಗಿ ನನಗಿಷ್ಟ ಬಂದಾಗ ಏಳುತ್ತೇನೆ; ತಂಟೆ ತಾಪತ್ರಯಗಳ ಮೇಲೆ ನೆನಪಿನ ಸುಳಿ ಹಾಯಿಸುತ್ತೇನೆ. ಅವುಗಳ ಬಗ್ಗೆ ತುಸು ಗೊಣಗುತ್ತೇನೆ; ಮತ್ತೆ ಮತ್ತೆ ಆಲೋಚಿಸುತ್ತೇನೆ. ಸ್ವಲ್ಪವೂ ಅವಸರವಿಲ್ಲ.'

'ಆದರೆ ಕಾಲವೇ ಹಣ. ನೀನದನ್ನು ಮರೆಯುತ್ತೀಯೆ' ಎಂದು ಕರ್ನಲ್ ನುಡಿದನು.

'ಅದೆಲ್ಲವೂ ಸಮಯದ ಮಹತ್ವಾಮಹತ್ವಗಳನ್ನವಲಂಬಿಸಿದೆ. ಒಂದು ಕುರುಡು ಕಾಸಿನಷ್ಟೂ ಬೆಲೆ ಇಲ್ಲದ ಇಡೀ ತಿಂಗಳುಗಳಿವೆ. ಜಗತ್ತಿನ ಸಮಸ್ತೈಶ್ವರ್ಯಕ್ಕೆ ಸಮನಾಗುವಂಥ ಅರ್ಧಗಂಟೆಗಳೂ ಇವೆ. ನನ್ನ ಮಾತು ನಿಜವಲ್ಲವೆ, ಕಿಟ್ಟಿ? ನಿರಾಶೆಯ ಜೋಲುಮೋರೆಯೇಕೆ, ನನ್ನ ಮುದ್ದುಮರಿ?'

'ನಾನು ಸರಿಯಾಗಿದ್ದೇನೆ.'

'ನೀನು ಹೋಗುವುದೆಲ್ಲಿಗೆ? ತುಸು ತಾಳು' ಎಂದವನು ವರೆಂಕಳಿಗೆ ನಿರೂಪಿಸಿದನು.

'ನಾನು ಮನೆಗೆ ಹೋಗಲೇಬೇಕು' ಎಂದವಳು ಮೇಲೆದ್ದು, ನಲವಿನ ನಗು ಮೊಳಗಿದಳು.

ನಗು ನಿಂತ ಕೂಡಲೇ ಅವಳು ಪ್ರತಿಯೊಬ್ಬರಿಗೂ ನಮಸ್ಕಾರ ಸಲ್ಲಿಸಿದಳು; ತನ್ನ ಟೊಪ್ಪಿಗೆಯನ್ನು ತರಲಿಕ್ಕಾಗಿ ಮನೆಯೊಳಗೆ ಹೋದಳು. ಕಿಟ್ಟಿಯೂ ಅವಳ ಜತೆ ಹೋದಳು. ವರೆಂಕಳೂ ತೀರ ಭಿನ್ನಳಾಗಿದ್ದಂತೆ ಅವಳಿಗೆ ಕಂಡಳು. ಅವಳು ಕೆಟ್ಟುಹೋಗಿದ್ದಂತೆ ಕಾಣಲಿಲ್ಲ; ತನಗೆ ಮೊದಲೇ ಗೊತ್ತಿದ್ದ ವರೆಂಕಳಿಗಿಂತ ತೀರ ಭಿನ್ನವಾಗಿ ಕಂಡಳು.

'ಪ್ರಿಯ ಸಖಿ, ಹಲವು ವರ್ಷಗಳಿಂದ ನಾನಿಷ್ಟು ನಗಲಿಲ್ಲ' ಎಂದು ವರೆಂಕ ತನ್ನ ಚೀಲವನ್ನೂ ಬಿಸಿಲು ಮರೆಯನ್ನೂ ಕೈಗೆತ್ತಿಕೊಳ್ಳುತ್ತಿದ್ದಂತೆ ನುಡಿದಳು. 'ಅವರು– ನಿಮ್ಮ ತಂದೆ–ಎಂಥ ವಾತ್ಸಲ್ಯಮಯಿ!'

ಕಿಟ್ಟಿ ಉತ್ತರಿಸಲಿಲ್ಲ.

'ನಾನು ಮತ್ತೆ ನಿನ್ನನ್ನು ಯಾವಾಗ ನೋಡಲಿ?' ಎಂದು ವರೆಂಕ ಕೇಳಿದಳು.

'ಪೆತ್ರೋವ್‌ರಲ್ಲಿಗೆ ಹೋಗುವುದೆಂದು ಅಮ್ಮ ಯೋಚಿಸುತ್ತಿದ್ದಾರೆ. ನೀನಲ್ಲಿರುವೆ ಯೇನು?' ಎಂದು ಕಿಟ್ಟಿ ತನ್ನ ಗೆಳತಿಯನ್ನು ಪರೀಕ್ಷೆಗೆ ಗುರಿಮಾಡಿದಳು.

'ಹೌದು, ನಾನಲ್ಲಿರುತ್ತೇನೆ' ಎಂದು ವರೆಂಕ ಉತ್ತರಿಸಿದಳು. 'ಅವರು ಈ ಜಾಗ ಬಿಡುತ್ತಿದ್ದಾರೆ. ಗಂಟು ಮೂಟೆ ಕಟ್ಟಲು ಅವರಿಗೆ ನೆರವು ನೀಡುವುದಾಗಿ ನಾನು ಮಾತು ಕೊಟ್ಟಿದ್ದೇನೆ.'

'ಹಾಗಾದರೆ, ನಾನೂ ಬರುತ್ತೇನೆ.'

'ಬೇಡ, ನೀನೇಕೆ ಬರುತ್ತೀಯೆ?'

'ನಾನೇಕೆ ಬರಬಾರದು? ಏಕೆ ಕೂಡದು?' ಎಂದು ಕಿಟ್ಟಿ ಕಣ್ಣಗಲಿಸಿ, ವರೆಂಕ ಮುಂದೆ ಹೆಜ್ಜೆ ಇಡದಂತೆ ತಡೆಯಲು ಅವಳ ಕೊಡೆಯನ್ನು ಹಿಡಿದುಕೊಂಡಳು. 'ತುಸು ತಾಳು. ನಾನೇಕೆ ಬರಬಾರದು, ಹೇಳು?'

'ಓ, ಏಕೆಂದೆಯಾ? ನಿಮ್ಮ ತಂದೆ ಇದೆ ತಾನೆ ಬಂದಿದ್ದಾರೆ. ನೀನಲ್ಲಿರುವಾಗ ಅವರು ಸಲೀಸಾಗಿರುವುದಿಲ್ಲ.'

'ಓ, ನಾನು ಪೆತ್ರೋವ್‌ರ ಬಳಿಗೆ ಹೋಗಕೂಡದೆಂದು ನೀನು ಹೇಳುತ್ತಿರುವೆ ಯಲ್ಲ, ಏನು ಕಾರಣ? ನಾನು ಹೋಗಬಾರದೇನು? ಏಕೆ, ಹೇಳು.'

'ನಾನು ಹಾಗೆ ಹೇಳಲಿಲ್ಲ' ಎಂದು ವರೆಂಕ ಸಮಾಧಾನದಿಂದ ನುಡಿದಳು.

'ನಿಜ ಹೇಳು? ನಾನು ಕೈಯೊಡ್ಡಿ ಬೇಡಿಕೊಳ್ಳುತ್ತೇನೆ.'

'ಎಲ್ಲ ಹೇಳಿಬಿಡಲೆ?' ಎಂದು ವರೆಂಕ ಕೇಳಿದಳು.

'ಎಲ್ಲ, ಎಲ್ಲ; ಯಾವುದನ್ನೂ ಬಿಡದೆ' ಎಂದು ಕಿಟ್ಟಿ ನುಡಿದಳು.

'ವಿಶೇಷವಿದ್ದರೆ ತಾನೆ ಹೇಳುವುದು. ಮಿಖೇಲ್ ಅಲೆಕ್ಸಿಯೇವಿಚ್ (ಚಿತ್ರ ಕಾರನ ಹೆಸರದು) ಈ ಜಾಗ ಬಿಡಬೇಕೆಂದು ಸ್ವಲ್ಪ ಹೊತ್ತಿಗೆ ಮುಂಚೆ ಒತ್ತಾಯಿಸಿದ. ಈಗ ಹೋಗಲಿಷ್ಟಪಡುವುದಿಲ್ಲ' ಎಂದು ವರೆಂಕ ನಕ್ಕಳು.

'ಸರಿ, ಸರಿ?' ಎಂದು ಕಿಟ್ಟಿ ವಿಷಣ್ಣಭಾವದಿಂದ ತಾಳ್ಮೆಗೆಟ್ಟು ಅವಳನ್ನು ಒತ್ತಾಯಿಸಿದಳು.

'ನೀನಿಲ್ಲಿರುವ ಕಾರಣದಿಂದ ಈ ಜಾಗ ಬಿಡಲವನಿಗೆ ಇಷ್ಟವಿಲ್ಲವೆಂದು ಅನಾ ಪಾವ್‌ಲೋವ್ನ ಏಕೊ ಏನೊ ಹೇಳಿದರು. ನಿಜಕ್ಕೂ ಅಂಥ ವಿಷಯವನ್ನು ಬಿಚ್ಚಿ ಹೇಳುವ ಹಕ್ಕು ಅವರಿಗಿಲ್ಲ. ಅದೇ ಕಾರಣವಾಗಿ, ನಿನ್ನಿಂದಾಗಿ, ಅವರು ಜಗಳವಾಡಿದರು. ಖಾಯಿಲೆಯ ಜನ ಎಂಥ ಸಿಡುಕಿಗಳೆಂಬುದನ್ನು ನೀನೇ ಬಲ್ಲೆ.'

ಕಿಟ್ಟಿ ಕೋಪಮುದ್ರೆಯಿಂದ ಮಾತಾಡಲಿಲ್ಲ; ಅವಳ ಮುಖದ ಮೇಲೆ ಮಂಕು ಕವಿಯಿತು. ಕಣ್ಣೀರಿನ ಅಥವಾ ಮಾತುಗಳ ಆಸ್ಫೋಟದ ಪ್ರತೀಕ್ಷೆಯಲ್ಲಿ ವರೆಂಕ ಅವಳನ್ನು ಮೃದು ವಾಕ್ಯಗಳಿಂದ ಸಮಾಧಾನಪಡಿಸಲು ಪ್ರಯತ್ನಿಸಿದಳು. 'ಆದ್ದರಿಂದ ನೀನು ಹೋಗದಿರುವುದೇ ಮೇಲು. ನಿನಗೆಲ್ಲ ಅರ್ಥವಾಗಿರಬೇಕು, ಇದರಿಂದ ವ್ಯಥೆ ಪಡಬೇಕಾಗಿಲ್ಲ.'

'ಇದರಿಂದ ನನಗನುಕೂಲವಾಗಿದೆ! ನಿಜಕ್ಕೂ ಅನುಕೂಲವಾಗಿದೆ!' ಎಂದು ಕಿಟ್ಟಿ ವರೆಂಕಳ ಕೈಯಿಂದ ಕೊಡೆಯನ್ನು ಕಸಿದುಕೊಂಡು, ತನ್ನ ಗೆಳತಿಯ ಕಡೆಗೆ ನೋಡದೆಯೆ, ಸರಸರನೆ ನುಡಿದಳು.

ತನ್ನ ಗೆಳತಿಯ ಬಾಲಿಶವಾದ ಕೋಪಾಸ್ಫೋಟನೆಯಿಂದಾಗಿ ವರೆಂಕಳಿಗೆ ನಗಬೇಕೆನ್ನಿಸಿತು; ಆದರವಳ ಮನಸ್ಸಿಗೆ ನೋವಾಗಬಹುದೆಂದು ಹೆದರಿದಳು.

'ಅದು ನಿನಗೆಂತು ಅನುಕೂಲವಾಗುತ್ತದೆ? ನನಗರ್ಥವಾಗದು' ಎಂದವಳು ನುಡಿದಳು.

'ನಮ್ಮ ಸುತ್ತಮುತ್ತ ನಡೆಯುತ್ತಿರುವುದೆಲ್ಲ ಬರಿಯ ನಟನೆ, ಬಚ್ಚಬರಿಯ ಸೋಗು; ಯಾವುದೂ ಹೃದಯದಿಂದ ಬಂದದ್ದಲ್ಲ. ಆದ್ದರಿಂದ ಅದು ನನಗನುಕೂಲವೆಂದು ಹೇಳಿದ್ದು. ಆ ಅಪರಿಚಿತ ವ್ಯಕ್ತಿಯಿಂದ ನನಗೇನಾಗಬೇಕಾಗಿದೆ? ಅವನಿಗೂ ನನಗೂ ಯಾವ ಬಾದರಾಯಣ ಸಂಬಂಧ? ಅವರ ಕಲಹಕ್ಕೆ ನಾನು ಕಾರಣಳೆಂದು, ಕರೆಯದೆ ಎರೆಯದೆ ನಾನು ಮಧ್ಯೆ ಪ್ರವೇಶಿಸಿದೆನೆಂದು ಅವರು ತಿಳಿದುಕೊಂಡಂತಿದೆ. ಅದೆಲ್ಲ ಸುಳ್ಳು, ಸುಳ್ಳು, ಸುಳ್ಳಿನ ಕಂತೆ!'

'ನೀನಾದರೂ ಕೃತ್ರಿಮವಾಗಿ ಏಕೆ ವರ್ತಿಸಬೇಕು?' ಎಂದು ವರೆಂಕ ಶಾಂತ ಚಿತ್ತಳಾಗಿ ಕೇಳಿದಳು.

'ತ್ಚ್, ಅದೆಲ್ಲ ಅವಿವೇಕ, ಭೀಕರ! ನನಗದರ ಆವಶ್ಯಕತೆಯೇ ಇರಲಿಲ್ಲ.... ಅದೆಲ್ಲ ಬರಿಯ ಸೋಗು!' ಎಂದು ಕಿಟ್ಟಿ ಕೊಡೆಯನ್ನು ತೆರೆಯುತ್ತ ಮುಚ್ಚುತ್ತ, ಸೊಲ್ಲಿಸಿದಳು.

'ಅಂದ ಮೇಲೆ ನೀನು ಹಾಗೇಕೆ ಮಾಡಿದೆ?'

'ಜನರ ಮುಂದೆ, ಹಾಗೂ ದೇವರ ಮುಂದೆ ಪ್ರದರ್ಶನ ಮಾಡಲಿಕ್ಕಾಗಿ; ನನಗೆ ನಾನೇ ಮೆರೆಯಲಿಕ್ಕಾಗಿ; ಪ್ರತಿಯೊಬ್ಬರನ್ನೂ ಮೋಸಗೊಳಿಸಲಿಕ್ಕಾಗಿ. ಓ, ಇನ್ನು ಮುಂದೆ ನಾನು ಇಂಥಾದ್ದಕ್ಕೆಲ್ಲ ಮರುಳಾಗುವುದಿಲ್ಲ. ವಂಚನೆಗಿಂತ, ಸೋಗಿಗಿಂತ ಕೇಡಿತನವೇ ಮೇಲು.'

'ಯಾರು ವಂಚಿಸುತ್ತಾರೆ?' ಎಂದು ವರೆಂಕ ಆಕ್ಷೇಪವೆತ್ತಿದಳು. 'ನೀನು ಮಾತಾಡುತ್ತಿರುವುದನ್ನು ನೋಡಿದರೆ....'

ಆದರೆ ಕಿಟ್ಟಿ ಕೋಪಾವೇಶದ ಭರದಲ್ಲಿ ತನ್ನನ್ನು ತಾನೇ ಮರೆತಳು. ಮಾತು ಮುಂದುವರಿಸಲು ತನ್ನ ಗೆಳತಿಗವಳು ಅವಕಾಶ ಕೊಡಲಿಲ್ಲ.

'ಓ, ನನ್ನ ಮನಸ್ಸಿನಲ್ಲಿರುವವಳು ನೀನಲ್ಲ. ನಿನ್ನ ಬಗ್ಗೆ ನಾನು ಮಾತಾಡು ತ್ತಿಲ್ಲ. ನೀನು ಪರಿಪೂರ್ಣೆ. ಹೌದು, ನೀನು ಪರಿಪೂರ್ಣೆ, ನೀನು ಪರಿಪೂರ್ಣೆಯೆಂಬುದು ನನಗೆ ಗೊತ್ತು. ನಾನು ಕೆಟ್ಟವಳೇ ಅಹುದಾದರೆ ಮಾಡುವುದೇನಿದೆ? ನಾನು ಕೆಟ್ಟವ ಳಲ್ಲದಿದ್ದರೆ ಇದೆಲ್ಲ ಸಂಭವಿಸುತ್ತಿರಲಿಲ್ಲ. ನಾನು ಹೇಗಿದ್ದರದೇ ಸರಿ. ನನ್ನಷ್ಟಕ್ಕೆ ನನ್ನನ್ನು ಬಿಟ್ಟುಬಿಡಿ. ನಾನು ಸೋಗುಗಾತಿಯಾಗಲಾರೆ. ಅನ್ನಾಪಾವ್ಲೋವ್ನಳಿಂದ ನನಗೆ ಆಗಬೇಕಾದ್ದೇನು? ಅವರಿಷ್ಟದಂತೆ ಅವರ ಬದುಕು ಸಾಗಲಿ; ನನಗಿಚ್ಛೆ ಬಂದಂತೆ ನಾನು ಬದುಕುತ್ತೇನೆ. ಅನ್ಯಮಾರ್ಗ ನನಗೆ ಸಾಧ್ಯವಿಲ್ಲ....ಇದು ತಪ್ಪು, ತಪ್ಪು.'

'ತಪ್ಪು ಯಾವುದು?' ಎಂದು ವರೆಂಕ ಗಾಬರಿಯಿಂದ ಕೇಳಿದಳು.

'ಇದೆಲ್ಲವೂ. ನನ್ನ ಎದೆಯಾಣತಿಯಂತೆ ನಾನು ಬದುಕಬೇಕು; ತತ್ತ್ವಕ್ಕೆ ವಿಧೇಯವಾಗಿ ನೀವು ಬದುಕುತ್ತೀರಿ. ಶೂನ್ಯೋದ್ದೇಶದಿಂದ ನಾನು ನಿನ್ನನ್ನು ಪ್ರೀತಿಸಿದೆ. ನೀನು ನನ್ನನ್ನುದ್ಧರಿಸಲು, ನನ್ನನ್ನು ಸುಧಾರಿಸಲು ಅತ್ಯಂತಾಸಕ್ತಿಯಿಂದ ಪ್ರಯತ್ನಿಸಿದೆ.'

'ನೀನು ನಿರ್ದಯಿ' ಎಂದು ವರೆಂಕ ನುಡಿದಳು.

'ಇತರರ ಬಗ್ಗೆ ನಾನು ಮಾತಾಡುತ್ತಿಲ್ಲ; ನನ್ನ ಕತೆಯೇ ನನಗೆ ಸಾಕಾಗಿದೆ.'

'ಕಿಟ್ಟಿ!' ಎಂದು ಅವಳ ತಾಯಿ ಕರೆದಂತೆ ಕೇಳಿಸಿತು. 'ಬಾ ಇಲ್ಲಿ. ಅಪ್ಪನಿಗೆ ನಿನ್ನ ಹವಳದ ಹಾರ ತೋರಿಸು.'

ತನ್ನ ಗೆಳತಿಯೊಡನೆ ರಾಜಿಮಾಡಿಕೊಳ್ಳದೆಯೆ, ಗರ್ವದಿಂದ ಕಿಟ್ಟಿ ಮೇಜಿನಲ್ಲಿದ್ದ ಹವಳದ ಪೆಟ್ಟಿಗೆಯನ್ನು ತೆಗೆದುಕೊಂಡು, ತನ್ನ ತಾಯಿಯೆಡೆಗೆ ಹೋದಳು.

'ಏನು ಸಂಗತಿ? ನಿನ್ನ ಮುಖವೇಕಿಷ್ಟು ಕೆಂಪಾಗಿದೆ?' ಎಂದು ತಾಯಿತಂದೆ ಯರು ಏಕಕಂಠರಾಗಿ ಕೇಳಿದರು.

'ಏನೂ ಇಲ್ಲ' ಎಂದು ಕಿಟ್ಟಿ ಮಾರ್ನುಡಿದಳು. 'ಈ ಕೂಡಲೇ ಬಂದುಬಿಟ್ಟೆ' ಎಂದು ಹೇಳಿ, ಅವಳು ಹೊರಗೆ ಓಡಿಹೋದಳು.

'ಅವಳಿನ್ನೂ ಇಲ್ಲಿಯೇ ಇರಬಹುದು' ಎಂದವಳು ಎಣಿಸಿದಳು. 'ಅವಳಿಗೆ ನಾನೇನು ಹೇಳಲಿ? ಅಯ್ಯೋ ದೇವರೆ, ನಾನೇನೆಸಗಿದೆ? ನಾನೇನು ಆಲಾಪಿಸಿದೆ? ಅವಳಿಗೇಕೆ ನಾನು ಮುಖಭಂಗಮಾಡಿದೆ? ಈಗ ನಾನೇನು ಮಾಡಲಿ? ಏನು ಹೇಳಲಿ?' ಎಂದು ಬಾಗಿಲಲ್ಲಿ ನಿಂತುಕೊಂಡು ಕಿಟ್ಟಿ ಚಿಂತಿಸತೊಡಗಿದಳು.

ತಲೆಯ ಮೇಲೆ ಟೋಪಿ ಧರಿಸಿಕೊಂಡು, ಕೈಯಲ್ಲಿ ಕೊಡೆ ಹಿಡಿದುಕೊಂಡು, ಕಿಟ್ಟಿ ಮುರಿದುಹಾಕಿದ್ದ ತಂತಿಯನ್ನು ಸರಿಪಡಿಸುತ್ತ ಮೇಜಿನ ಮುಂದೆ ವರೆಂಕ ಕುಳಿತಿದ್ದಳು.

'ವರೆಂಕ, ನನ್ನನ್ನು ಕ್ಷಮಿಸು, ಕ್ಷಮಿಸು ನನ್ನನ್ನು!' ಎಂದು ಕಿಟ್ಟಿ ಅವಳ ಬಳಿ ಸಾರಿ ಮರ್ಮರಿಸಿದಳು. 'ನಾನು ಉದ್ರೇಕಗೊಂಡಿದ್ದೆ. ನಾನೇನು ಹೇಳುತ್ತಿದ್ದೆನೋ ನನಗೇ ಗೊತ್ತಾಗುತ್ತಿರಲಿಲ್ಲ. ನಾನು—

'ನಿಜಕ್ಕೂ ನಿನ್ನ ಮನನೋಯಿಸುವ ಇಚ್ಛೆ ನನಗಿರಲಿಲ್ಲ' ಎಂದು ವರೆಂಕ ಮುಗುಳುನಗೆ ಸೂಸಿದಳು.

ಇಬ್ಬರೂ ರಾಜಿಯಾದರು. ಆದರೆ ತಂದೆಯ ಆಗಮನಾನಂತರ ಕಿಟ್ಟಿ ನೆಲೆಗೊಂಡಿದ್ದ ಜಗತ್ತು ವ್ಯತ್ಯಾಸಗೊಂಡಿತು. ತಾನು ಕಲಿತದ್ದನ್ನೆಲ್ಲ ಅವಳು ತಿರಸ್ಕರಿಸಲಿಲ್ಲ. ತಾನು ಹೇಗೆ ಬದುಕಬೇಕೆಂದು ಕಲ್ಪಿಸಿಕೊಂಡಿದ್ದಳೊ ಹಾಗೆಯೇ ಬದುಕುವುದಾಗಿ ಯೋಚಿಸುವಲ್ಲಿ ತಾನು ಆತ್ಮವಂಚನೆ ಮಾಡಿಕೊಂಡಿದ್ದುದಾಗಿ ಅವಳಿಗರಿವಾಯಿತು. ಅವಳು ಅದೇತಾನೆ ಕಣ್ಣು ಬಿಟ್ಟಂತಾಯಿತು. ಆಡಂಬರವಿಲ್ಲದೆ, ಆತ್ಮವಂಚನೆಯಿಲ್ಲದೆ, ತಾನು ಆಶಿಸಿದ ಅತ್ಯುನ್ನತ ಸ್ತರದ ಬದುಕಿನಲ್ಲಿ ತಾನನುಭವಿಸಬೇಕಾದ ಕಷ್ಟವನ್ನವಳು ಸಂಪೂರ್ಣವಾಗಿ ಅರ್ಥಮಾಡಿಕೊಂಡಳು. ಎಲ್ಲಕ್ಕಿಂತ ಮಿಗಿಲಾಗಿ, ತನ್ನ ಸುತ್ತಮುತ್ತ ತಾಂಡವವಾಡುತ್ತಿದ್ದ ಕಷ್ಟಕ್ಲೇಶ ರೋಗರುಜಿನ ಮರಣಗಳ ಜಗತ್ತಿನ ಭಾರ ಅವಳಿಗರಿವಾಯಿತು. ಈ ಜಗತ್ತನ್ನು ಪ್ರೀತಿಸಲು, ಅದರ ಒಂದಂಗವಾಗಿ ಬದುಕಲು ತಾನು ಮಾಡಿದ ಅಸಾಧ್ಯ ಪ್ರಯತ್ನಗಳೆಲ್ಲ ನಿಷ್ಫಲವೆಂಬುದನ್ನವಳು ಮನಗಂಡಳು. ಆದಷ್ಟು ಬೇಗ ಹೊಸಗಾಳಿಯನ್ನು ಕುಡಿಯಲೆಂದು, ರಷ್ಯಾಕ್ಕೆ ಹಿಂದಿರುಗಬೇಕೆಂದು, ಎರ್ಗುಷೋವೊ ಹಳ್ಳಿಮನೆಗೆ ಹೋಗಬೇಕೆಂದು ಅವಳು ಹಂಬಲಿಸಿದಳು. ತನ್ನಕ್ಕ ಡಾಲಿ ಮತ್ತು ಅವಳ ಮಕ್ಕಳು ಬೇಸಗೆಯ ವಿಹಾರಕ್ಕಾಗಿ ಆ ಹೊತ್ತಿಗಾಗಲೇ ಹಳ್ಳಿಮನೆಗೆ ಹೋಗಿದ್ದ ಸಂಗತಿ ಪತ್ರಮುಖೇನ ಅವಳಿಗೆ ತಿಳಿದಿತ್ತು.

ಏನೇ ಆದರೂ ವರೆಂಕಳ ಮೇಲಣ ಅವಳ ಪ್ರೀತಿ ಸ್ವಲ್ಪವೂ ಕುಂದಲಿಲ್ಲ. ರಷ್ಯಾಕ್ಕೆ ಹಿಂದಿರುಗಿದ ನಂತರ ತಮ್ಮ ಮನೆಗೆ ಬರಬೇಕೆಂದು ಕಿಟ್ಟಿ ಬೀಳ್ಕೊಡಿಗೆಯ ಸಂದರ್ಭದಲ್ಲಿ ಅವಳನ್ನು ಬಿನ್ನವಿಸಿಕೊಂಡಳು.

'ನಿನ್ನ ಮದುವೆಗೆ ನಾನು ಬರುತ್ತೇನೆ' ಎಂದು ವರೆಂಕ ನುಡಿದಳು.

'ನಾನೆಂದೂ ಮದುವೆಯಾಗುವುದಿಲ್ಲ.'

'ಹಾಗಾದರೆ ನಾನೆಂದೂ ಬರುವಂತಿಲ್ಲ'.

'ನಮ್ಮ ಮನೆಗೆ ನಿನ್ನನ್ನು ಬರ ಮಾಡಿಕೊಳ್ಳಬೇಕಾದರೆ ನಾನು ಮದುವೆಯಾಗಬೇಕು ತಾನೆ. ವಚನಭಂಗವಾಗದಂತೆ ಎಚ್ಚರಿಕೆಯಿಂದಿರು' ಎಂದು ಕಿಟ್ಟಿ ನುಡಿದಳು.

ವೈದ್ಯನ ಭವಿಷ್ಯ ನಿಜವಾಯಿತು. ಆರೋಗ್ಯವಂತೆಯಾಗಿ ಕಿಟ್ಟಿ ರಷ್ಯಾಕ್ಕೆ, ತಮ್ಮ ಮನೆಗೆ ಮರಳಿದಳು. ಅವಳು ಮೊದಲಿನಂತೆ ಉಲ್ಲಾಸದಿಂದಿರಲಿಲ್ಲ, ನಿಶ್ಚಿಂತಳಾಗಿರಲಿಲ್ಲ; ಆದರೆ ಮನಶ್ಶಾಂತಿಯನ್ನು ಸಾಧಿಸಿಕೊಂಡಿದ್ದಳು. ಅವಳು ಮಾಸ್ಕೋದಲ್ಲನುಭವಿಸಿದ ಬವಣೆಗಳು ಕೇವಲ ದೂರಗತ ಸ್ಮೃತಿಗಳಾಗುಳಿದುವು.

ಮೂರನೆಯ ಕಾಂಡ

೧

ಸರ್ಜಯ್ ಇವಾನೊವಿಚ್ ಕೊಜ್ನಿಶೆವ್ ಮಾನಸಿಕ ಶ್ರಮದಿಂದ ಕೆಲವು ಕಾಲ ವಿಶ್ರಾಂತಿ ಬಯಸಿದನು; ಅಂಥ ಸಂದರ್ಭದಲ್ಲವನು ಸಾಮಾನ್ಯವಾಗಿ ವಿದೇಶಕ್ಕೆ ಹೋಗುತ್ತಿದ್ದನು. ಈ ಸಲ ಅವನು ಮೇ ತಿಂಗಳ ಕೊನೆಯಲ್ಲಿ ತನ್ನ ಮಲತಮ್ಮನ ಹಳ್ಳಿಯ ಮನೆಗೆ ಹೋದನು. ಗ್ರಾಮಜೀವನವೇ ಅತ್ಯುತ್ತಮ ಜೀವನವೆನ್ನುವುದು ಅವನ ನಂಬಿಕೆ. ಆ ಜೀವನದ ಆನಂದಾಸ್ವಾದನೆಗಾಗಿ ಅವನು ತನ್ನ ತಮ್ಮನ ಮನೆಗೆ ಹೋಗಲಿದ್ದನು. ತನ್ನಣ್ಣ ನಿಕೊಲಾಯ್‌ನನ್ನು ಆ ಬೇಸಗೆಯಲ್ಲಿ ನಿರೀಕ್ಷಿಸಿರಲಿಲ್ಲವಾದ್ದರಿಂದ ಲೆವಿನ್ ತುಂಬ ಹರ್ಷಗೊಂಡಿದ್ದನು. ಕೊಜ್ನಿಶೆವ್‌ನ ಬಗ್ಗೆ ಲೆವಿನ್‌ಗೆ ಅಪಾರ ಪ್ರೀತಿ ಗೌರವಗಳಿದ್ದುವು; ಆದರೂ ಹಳ್ಳಿಯಲ್ಲಿ ತನ್ನಣ್ಣನೊಡನಿದ್ದಾಗ ಅವನಿಗೆ ನೆಮ್ಮದಿಯಿರಲಿಲ್ಲ. ಹಳ್ಳಿಗಾಡಿನ ಬಗ್ಗೆ ತನ್ನಣ್ಣ ತಳೆದಿದ್ದ ನಿಲವಿನ ಪ್ರಯುಕ್ತ ಅವನಿಗೆ ಇರಿಸು ಮುರಿಸಾಗಿ, ಅಸಮಾಧಾನದಿಂದಿದ್ದನು. ಲೆವಿನ್‌ನ ದೃಷ್ಟಿಯಲ್ಲಿ ಹಳ್ಳಿ, ಹರ್ಷ ದುಃಖಗಳ ಹಾಗೂ ಶ್ರಮಜೀವನದ ಆಶ್ರಯಸ್ಥಾನವಾಗಿತ್ತು; ಕೊಜ್ನಿಶೆವ್‌ನ ದೃಷ್ಟಿಯಲ್ಲಿ ಹಳ್ಳಿಯ ಉಪಯುಕ್ತತೆ ಎರಡು ಬಗೆಯದಾಗಿತ್ತು : ಒಂದು, ಶ್ರಮಜೀವನದಿಂದ ಬಿಡುಗಡೆಮಾಡಿ, ವಿಶ್ರಾಂತಿಗವಕಾಶಮಾಡಿಕೊಡುತ್ತಿತ್ತು; ಎರಡು, ನಗರದ ದುಷ್ಪ್ರಭಾವಗಳಿಗೆ ಅದೊಂದು ಅಮೂಲ್ಯ ಸಿದ್ಧೌಷಧವಾಗಿತ್ತು. ಆ ಸಿದ್ಧೌಷಧದ ಸಾಮರ್ಥ್ಯವನ್ನರಿತಿದ್ದ ಅವನದನ್ನು ಸಂತೋಷದಿಂದ ಸ್ವೀಕರಿಸುತ್ತಿದ್ದನು. ಶ್ರಮಜೀವನಕ್ಕೆ ಅವಕಾಶವನ್ನು ಕಲ್ಪಿಸುವುದರ ಮೂಲಕ, ನಿಸ್ಸಂದೇಹವಾಗಿ ಪ್ರಯೋಜನಕಾರಿಯಾಗಿದ್ದ ಹಳ್ಳಿಯೊಂದು ಸುಖದ ನೆಲೆಯೆಂದು ಲೆವಿನ್ ಅರಿತಿದ್ದನು; ದುಡಿಮೆಯೇ ಬೇಡವಾಗಿರುವ ಹಳ್ಳಿ ಒಳ್ಳೆಯ ವಿಹಾರ ಕೇಂದ್ರವೆಂದು ಕೊಜ್ನಿಶೆವ್ ತಿಳಿದಿದ್ದನು.

ಜತೆಗೆ ರೈತರ ಪರವಾದ ತನ್ನಣ್ಣನ ನಿಲವಿನಿಂದ ಲೆವಿನ್ ಉದ್ರೇಕಗೊಂಡಿದ್ದನು. ರೈತರ ವಿಷಯ ತನಗೆ ಗೊತ್ತಿದ್ದುದಾಗಿಯೂ, ತಾನವರನ್ನು ಪ್ರೀತಿಸುತ್ತಿದ್ದುದಾಗಿಯೂ ಕೊಜ್ನಿಶೆವ್ ಕಂಠೋಕ್ತವಾಗಿ ಹೇಳುತ್ತಿದ್ದನು. ಅವನು ಹಲವುಸಲ ಅವರೊಡನೆ ಮಾತಾಡುತ್ತಿದ್ದನು. ಸೋಗುನಟನೆಗಳಿಲ್ಲದೆ ಅವನು ಅವರೊಡನೆ ಸಲುಗೆಯಿಂದ ಮಾತುಕತೆ ನಡಸುತ್ತಿದ್ದನು. ರೈತರು ಸಹಜವಾಗಿ ಒಳ್ಳೆಯವರೆಂದೂ, ತಾನವರನ್ನು ಸಂಪೂರ್ಣವಾಗಿ ಬಲ್ಲೆನೆಂದೂ ಅವರೊಡನೆಯ ಮಾತುಕತೆಗಳಿಂದ ಸರ್ವಸಾಮಾನ್ಯ ನಿರ್ಣಯವನ್ನವನು ರೂಪಿಸಿಕೊಳ್ಳುತ್ತಿದ್ದನು. ರೈತರ ಬಗೆಗಿನ ಅಂಥ ನಿಲವಿಗೆ ಲೆವಿನ್‌ನ ಒಪ್ಪಿಗೆಯಿರಲಿಲ್ಲ. ಲೆವಿನ್‌ನ ದೃಷ್ಟಿಕೋನದಿಂದ, ರೈತರು ಸಾಮೂಹಿಕ ದುಡಿಮೆಯಲ್ಲಿ ಸಮಪಾಲುಗಾರರು. ಅವರ ಬಗ್ಗೆ ಅವನಿಗೆ ಅಪಾರ ಗೌರವಾದರಗಳಿದ್ದುವು. ಅಷ್ಟೇ ಅಲ್ಲ, ರೈತದಾದಿಯ ಮೊಲೆಹಾಲನ್ನು ಹೀರಿ ಬೆಳೆದವನಾದ್ದರಿಂದ, ತಾನವರ ರಕ್ತಸಂಬಂಧಿ ಎಂದು ಸಹ ಘೋಷಿಸುತ್ತಿದ್ದನು. ಅವರ ಜತೆಯಲ್ಲಿ ತಾನೂ ಸಮಸಮನಾಗಿ ದುಡಿಯು

ತ್ತಿದ್ದುದರಿಂದ, ಅವರ ದೈಹಿಕ ಶಕ್ತಿ, ವಿನಯ ಮತ್ತು ನ್ಯಾಯಪರತೆಗಳನ್ನು ಮನಸಾರೆ ಮೆಚ್ಚುತ್ತಿದ್ದನು ; ಆದರೂ ಕೆಲಸಕಾರ್ಯಗಳ ನಿರ್ವಹಣೆಯಲ್ಲಿ ಅವರು ತೋರುತ್ತಿದ್ದ ನಿರ್ಲಕ್ಷ್ಯ, ಶಿಸ್ತಿನ ಅಭಾವ, ಕುಡಿತದ ಚಟ, ಮತ್ತು ಸುಳ್ಳುಗಾರಿಕೆಗಳು ಅವನಿಗೆ ಹಿಡಿಸುತ್ತಿರಲಿಲ್ಲ. ರೈತರ ಬಗ್ಗೆ ವಿಶ್ವಾಸವಿದೆಯೆ ಎಂದು ಯಾರಾದರೂ ಅವನನ್ನು ಕೇಳಿದ್ದಾದರೆ, ಲೆವಿನ್ ಉತ್ತರಕೊಡುವ ಸ್ಥಿತಿಯಲ್ಲಿರಲಿಲ್ಲ. ಎಲ್ಲ ಜನಸಾಮಾನ್ಯರಂತೆ ಅವನು ರೈತರ ಬಗ್ಗೆ ಪರ–ವಿರೋಧಾಭಿಪ್ರಾಯಗಳನ್ನು ತಳೆದಿದ್ದನು. ಅವನು ಸಹಜ ವಾಗಿಯೇ ಸಜ್ಜನನಾದ್ದರಿಂದ, ಜನರನ್ನು ದೂಷಿಸುತ್ತಿದ್ದುದಕ್ಕಿಂತ ಹೆಚ್ಚಾಗಿ ಪ್ರೀತಿಸು ತ್ತಿದ್ದನು ; ರೈತರ ಬಗ್ಗೆಯೂ ಅವನ ನಿಲವು ಅಂಥದೇ ಆಗಿತ್ತು. ಅವನು ಅವರೊಂದಿಗೆ ಬಾಳು ನಡಸುತ್ತಿದ್ದುದರಿಂದ, ಅವರ ಆಸಕ್ತಿಗಳೊಡನೆ ತನ್ನ ಆಸಕ್ತಿಗಳೂ ತಳುಕು ಹಾಕಿಕೊಂಡಿದ್ದುದರಿಂದ, ಅಷ್ಟು ಮಾತ್ರವಲ್ಲ, ತಾನವರ ಜೀವನದ ಒಂದು ಭಾಗವೆಂದು ತಿಳಿದುಕೊಂಡಿದ್ದುದರಿಂದ, ತನ್ನಲ್ಲಿಲ್ಲದ ಗುಣದೋಷಗಳನ್ನು ಅವರಲ್ಲಿ ಕಾಣುತ್ತಿರಲಿಲ್ಲ ವಾದ್ದರಿಂದ, ಆ ರೈತರನ್ನು ಪ್ರೀತಿಸುವುದಾಗಲಿ ದ್ವೇಷಿಸುವುದಾಗಲಿ ಅವನಿಂದ ಸಾಧ್ಯವಿರಲಿಲ್ಲ. ಆದ್ದರಿಂದ ತಾನು ಬೇರೆ, ಅವರು ಬೇರೆ ಎಂದವನು ತಿಳಿದಿರಲಿಲ್ಲ. ಅವರ ದಣಿಯಾಗಿ, ಮಧ್ಯಸ್ಥಗಾರನಾಗಿ, ಎಲ್ಲಕ್ಕಿಂತ ಮಿಗಿಲಾಗಿ ಅವರ ಸಲಹೆಗಾರನಾಗಿ (ರೈತರು ಅವನಲ್ಲಿ ವಿಶ್ವಾಸವಿಟ್ಟದ್ದರಿಂದ ಅವನ ಸಲಹೆಗಾಗಿ ಮೂವತ್ತು ಮೈಲಿ ದೂರದಿಂದ ಬರುತ್ತಿದ್ದರು) ಹಲವು ವರ್ಷಗಳಿಂದ ಅತ್ಯಂತ ನಿಕಟವಾಗಿ ಅವರೊಡನೆ ಬದುಕಿದ್ದರೂ, ಅವರ ಬಗೆಗವನಿಗೆ ನಿರ್ದಿಷ್ಟ ಕಲ್ಪನೆಯಿರಲಿಲ್ಲ. ರೈತರನ್ನು ಪ್ರೀತಿಸು ತ್ತೀರಾ ಎಂದು ಯಾರಾದರೂ ಕೇಳಿದಾಗ ಅವನೆಂತು ದಿಗ್ಭ್ರಾಂತನಾಗುತ್ತಿದ್ದನೋ, ಅವರನ್ನು ಬಲ್ಲಿರಾ ಎಂದು ಕೇಳಿದಾಗ ಅಂತೆಯೇ ಮಾತಿಲ್ಲದಾಗುತ್ತಿದ್ದನು. ಇಡೀ ಜನವರ್ಗವನ್ನು ಬಲ್ಲೆನೆಂದು ಹೇಳುವುದೆಷ್ಟು ಸಾಧುವೋ ರೈತವರ್ಗವನ್ನು ಬಲ್ಲೆನೆಂದು ಹೇಳುವುದೂ ಅಷ್ಟೇ ಅವನ ಮಟ್ಟಿಗೆ ಸಾಧುವಾಗಿತ್ತು. ಸಜ್ಜನರೆಂದು, ಸ್ವಾರಸ್ಯಕರ ವ್ಯಕ್ತಿಗಳೆಂದು ತಾನು ತಿಳಿದಿದ್ದ ಎಲ್ಲ ಬಗೆಯ ಜನರನ್ನು ರೈತರನ್ನು ಅವನು ನಿರಂತರ ವಾಗಿ ವೀಕ್ಷಿಸುತ್ತ, ಅರಿತುಕೊಳ್ಳಲು ಪ್ರಯತ್ನಿಸುತ್ತಿದ್ದನು ; ಅವರಲ್ಲವನು ನಿರಂತರವಾಗಿ ಹೊಸಹೊಸ ಲಕ್ಷಣಗಳನ್ನು ಗುರುತಿಸುತ್ತಿದ್ದನು; ಗುರುತಿಸಿದಂತೆಲ್ಲ ಅವನು ತನ್ನ ಪೂರ್ವಾಭಿಪ್ರಾಯಗಳನ್ನು ಬದಲಾಯಿಸಿ, ಹೊಸ ಅಭಿಪ್ರಾಯಗಳನ್ನು ರೂಪಿಸಿಕೊಳ್ಳು ತ್ತಿದ್ದನು. ಕೊಜ್ನಿಶೆವ್ ವಿರುದ್ಧವಾದದ್ದನ್ನೆ ಮಾಡುತ್ತಿದ್ದನು. ತನಗಿಷ್ಟವಿಲ್ಲದ ಜೀವನ ಪ್ರಕಾರಕ್ಕೆ ವ್ಯತಿರಿಕ್ತವಾದ ಹಳ್ಳಿಯ ಜೀವನವನ್ನುವನು ಪ್ರೀತಿಸಿ, ಮೆಚ್ಚಿದಂತೆ, ತನಗಿಷ್ಟ ವಿಲ್ಲದ ಜನರಿಂದ ತೀರ ಭಿನ್ನರಾದ ರೈತರನ್ನವನು ಪ್ರೀತಿಸುತ್ತಿದ್ದನು. ರೈತಾಪಿವರ್ಗ ಇಡೀ ಜನಸಮುದಾಯದಿಂದ ತೀರ ಭಿನ್ನವಾಗಿತ್ತೆಂದವನು ಬಗೆವನು. ಕ್ರಮಬದ್ಧ ವಾದ ಅವನ ಬೌದ್ಧಿಕಸ್ಥಿತಿಯಲ್ಲಿ ರೈತಾಪಿ ಜೀವನದ ಸುಸ್ಪಷ್ಟ ಪ್ರಕಾರಗಳು ಓರಣ ಗೊಂಡಿದ್ದುವು; ಅವುಗಳಲ್ಲಿ ಕೆಲವು ರೈತಜೀವನದಿಂದ ನೇರವಾಗಿ ಆಯ್ಕೆಗೊಂಡಂಥವು; ತಾನು ನೋಡಿದ್ದ ಬದುಕಿಗೆ ವಿರುದ್ಧವಾಗಿ ರೂಪಿಸಿಕೊಂಡಂಥವೇ ಹಲವು. ರೈತರ ಬಗೆಗಿನ ತನ್ನ ಅಭಿಪ್ರಾಯವನ್ನಾಗಲಿ, ಸಹಾನುಭೂತಿಯನ್ನಾಗಲಿ ಅವನೆಂದೂ ಬದಲಿಸಲಿಲ್ಲ.

ರೈತರಿಗೆ ಸಂಬಂಧಿಸಿದಂತೆ ತಂತಮ್ಮ ಅಭಿಪ್ರಾಯಗಳನ್ನು ಸಮರ್ಥಿಸಿಕೊಳ್ಳುವ ಸಲುವಾಗಿ ಸೋದರರು ಚರ್ಚೆ ನಡಸುವಾಗ, ಕೊಜ್ನಿಶೆವ್ ಯಾವಾಗಲೂ ತಮ್ಮನನ್ನು ಸೋಲಿಸುತ್ತಿದ್ದನು; ರೈತರ ಗುಣಶೀಲ ರುಚಿಅಭಿರುಚಿಗಳ ಬಗ್ಗೆ ಕೊಜ್ನಿಶೆವ್‌ಗೆ ಸ್ಪಷ್ಟವಾದ ಕಲ್ಪನೆಯಿದ್ದು, ಲೆವಿನ್‌ಗೆ ಅವೊಂದೂ ಇಲ್ಲದಿದ್ದುದೇ ಅವರ ಸೋಲುಗೆಲವುಗಳಿಗೆ ಕಾರಣವಾಗಿದ್ದುವು. ಚರ್ಚೆ ನಡೆಯುವಾಗ ಲೆವಿನ್‌ನ ಅಭಿಪ್ರಾಯಗಳಲ್ಲಿ ಪರಸ್ಪರ ವಿರೋಧವಿದ್ದುದೇ ಅವನ ಸೋಲಿಗೆ ಕಾರಣ.

ಕೊಜ್ನಿಶೆವ್‌ನ ದೃಷ್ಟಿಯಲ್ಲಿ ಅವನ ತಮ್ಮ ಸಜ್ಜನ, ಅವನ ಹೃದಯ ನಿಷ್ಕಳಂಕವಾಗಿತ್ತು, ಆದರೆ ಹರಿತವಾಗಿದ್ದ ಅವನ ಬುದ್ಧಿ ಕ್ಷಣಿಕ ಸಂಗತಿಗಳ ಪ್ರಭಾವಕ್ಕೊಳಗಾಗಿ, ಪರಸ್ಪರ ವಿರೋಧಗಳಿಂದ ಕೂಡಿರುತ್ತಿತ್ತು. ಹಿರಿಯಣ್ಣನೆಂಬ ಹಕ್ಕಿನ ಬಲದಿಂದ ಅವನು ಕೆಲವೊಮ್ಮೆ ಸಂಗತಿಗಳ ಮಹತ್ವವನ್ನು ಲೆವಿನ್‌ಗೆ ವಿವರಿಸುತ್ತಿದ್ದನು; ತನ್ನ ಅಭಿಪ್ರಾಯಕ್ಕೆ ಸುಲಭ ಜಯಲಭಿಸುತ್ತಿರಲಾಗಿ ಚರ್ಚೆಯಿಂದ ಸುಖವಿಲ್ಲವೆಂದವನು ಬಗೆದಿದ್ದನು.

ತನ್ನಣ್ಣ ಮಹಾಮನೀಷಿಯೆಂದು, ಶ್ರೇಷ್ಠ ಶಿಕ್ಷಣ ತಜ್ಞನೆಂದು, ಅದ್ವಿತೀಯ ಗೌರವಾನ್ವಿತನೆಂದು, ಸರ್ವೋದಯಕ್ಕಾಗಿ ದುಡಿಯಬಲ್ಲ ಶಕ್ತಿಶಾಲಿಯೆಂದು ಲೆವಿನ್ ಬಗೆದಿದ್ದನು. ತನ್ನಲ್ಲಿಯೂ ಇಲ್ಲವೆಂದು ತಿಳಿದಿದ್ದ, ಸರ್ವೋದಯಕ್ಕಾಗಿ ದುಡಿಯಬಲ್ಲ ಆ ಶಕ್ತಿ ಗುಣವಾಗಿರದೆ, ಯಾವುದೋ ಒಂದು ಅಗತ್ಯತೆಯ ಅಭಾವದಿಂದ ಕೂಡಿರಬೇಕೆಂದು, ತನ್ನ ವಯಸ್ಸು ಬಲಿತಂತೆಲ್ಲ, ತನ್ನಣ್ಣನನ್ನು ಹತ್ತಿರದಿಂದ ನೋಡಿದಂತೆಲ್ಲ ಅವನ ಅಂತರಾಳ ಮಿಡಿಯುತ್ತಿತ್ತು, ಅವನ ಬುದ್ಧಿ ಆಲೋಚಿಸುತ್ತಿತ್ತು. ದಯಾಮಯವೂ, ಗೌರವಾನ್ವಿತವೂ, ಉದಾತ್ತವೂ ಆದ ಆಶೆಆಕಾಂಕ್ಷೆ ಅಭಿರುಚಿಗಳ ಅಭಾವವಿರಲಿಲ್ಲ, ನಿಜ; ಮನುಷ್ಯನ ಮುಂದೆ ಕಾಣಿಸಿಕೊಳ್ಳುವ ಅಸಂಖ್ಯ ಜೀವನ ವಿಧಾನಗಳ ಪೈಕಿ ಕೇವಲ ಒಂದನ್ನಾರಿಸಿಕೊಳ್ಳಲು, ಅದನ್ನೇ ಬಯಸಲು ಪ್ರೇರಿಸುವ ಸಹಜ ಪ್ರವೃತ್ತಿಯ, ಪ್ರಾಣಶಕ್ತಿಯಂತಿರುವ ಹೃದಯದ ಅಭಾವವಿತ್ತೆಂಬುದಂತು ದಿಟ. ಕೊಜ್ನಿಶೆವ್ ಮುಂತಾದವರು ಸಮಾಜ ಕಲ್ಯಾಣಕ್ಕಾಗಿ ದುಡಿಯುತ್ತಿದ್ದುದಕ್ಕೆ ಕಾರಣ ಅವರ ಹೃದಯಗಳ ಪ್ರೇರಣೆಯಲ್ಲ, ಕೇವಲ ಬುದ್ಧಿಶಕ್ತಿಯೆಂಬುದು ತನ್ನಣ್ಣನನ್ನು ಅರ್ಥಮಾಡಿಕೊಂಡಂತೆಲ್ಲ ಅವನಿಗೆ ಸುಸ್ಪಷ್ಟವಾಯಿತು. ಸಮಾಜ ಕಲ್ಯಾಣ ಕಾರ್ಯವೇ ಸರಿಯೆಂದು ಅವರ ಬುದ್ಧಿ ಒತ್ತಾಯಿಸಲಾಗಿ, ಅವರು ಆ ಕಾರ್ಯವನ್ನು ಕೈಗೊಂಡಿದ್ದರೆಂಬುದು ಅವನಿಗೆ ಗೊತ್ತಿತ್ತು. ಚದುರಂಗದಾಟದ ಸಮಸ್ಯೆಗಳಿಗಿಂತ ಅಥವಾ ನವಯಂತ್ರ ನಿರ್ಮಾಣದ ತೊಡಕುಗಳಿಗಿಂತ ಮಿಗಿಲಾಗಿ ಆತ್ಮದ ಶಾಶ್ವತತೆಯನ್ನು ಕುರಿತ ಅಥವಾ ಸಾರ್ವಜನಿಕ ಕ್ಷೇಮವನ್ನು ಕುರಿತ ಸಮಸ್ಯೆಗಳನ್ನು ಕೊಜ್ನಿಶೆವ್ ಹೃದಯಕ್ಕಂಟಿಸಿಕೊಂಡಿರಲಿಲ್ಲವೆಂಬ ವಿಷಯದಲ್ಲಿ ಲೆವಿನ್‌ನಿಗೆ ಲವಶೇಶವೂ ಸಂದೇಹವಿರಲಿಲ್ಲ.

ಬೇಸಗೆ ಸಮಯದ ಹಳ್ಳಿಗಾಡಿನಲ್ಲಿ ಲೆವಿನ್‌ನ ಸಮಯವೆಲ್ಲ ಕೃಷಿಕಾರ್ಯದಲ್ಲಿ ಕಳೆದುಹೋಗುತ್ತಿದ್ದುದರಿಂದ ಅತಿಥಿಯಾಗಿ ಬಂದಿದ್ದ ಅಣ್ಣನನ್ನು ಉಪಚರಿಸಲಾರದೆ ಅವನು ತುಂಬ ಬೇಗುದಿಗೋಡಿದ್ದನು. ಬೇಸಗೆಯ ಹಗಲೆಷ್ಟು ದೀರ್ಘವಾಗಿದ್ದರೂ

ಬೇಸಾಯದ ಕೆಲಸಗಳಿಗೆ ಸಾಲುತ್ತಿರಲಿಲ್ಲ. ಅದೇ ಸಮಯದಲ್ಲಿ ಕೊಜ್ನಿಶೆವ್ ಹಳ್ಳಿಯಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದನು. ಅವನು ಲೇಖನ ಕಾರ್ಯವನ್ನು ನಿಲ್ಲಿಸಿದ್ದನು. ಬೌದ್ಧಿಕ ಶ್ರಮಕ್ಕೆ ಹೊಂದಿಕೊಂಡಿದ್ದ ಅವನು ಸಾರವತ್ತಾದ ಅರ್ಥಗರ್ಭಿತ ಅಡಕನುಡಿಗಳ ಮೂಲಕ ತನ್ನ ಆಲೋಚನೆಗಳಿಗೆ ದನಿಕೊಡುವಲ್ಲಿ ಉತ್ಸುಕನಾಗಿದ್ದನು. ಸ್ವಾಭಾವಿಕವಾಗಿಯೇ ಅವನ ತಮ್ಮ ಯಥಾಪ್ರಕಾರದ ಶ್ರೋತೃವಾಗಿದ್ದನು. ಸ್ನೇಹನಿಷ್ಠಾಪಟ್ಟಿಗಳಿಂದ ಕೂಡಿದ ತಮ್ಮ ಸಂಬಂಧಗಳಿಂದಾಗಿ, ತನ್ನಣ್ಣನನ್ನು ಒಂಟಿಯಾಗಿ ಬಿಡಬಾರದೆಂದು ಲೆವಿನ್ ಭಾವಿಸಿದನು. ಹಸಲೆಯಮೇಲೆ ವೈಚಾಚಿ, ಬಿಸಿಲಿನಲ್ಲಿ ಮೀಯುವಾಗ ಹರಟೆ ಹೊಡೆಯುವುದೆಂದರೆ ಕೊಜ್ನಿಶೆವ್‌ನಿಗೆ ಎಲ್ಲಿಲ್ಲದ ಒಲವು.

'ನೀನು ನಂಬಲಾರೆ' ಎಂದವನು ಲೆವಿನ್‌ನೊಡನೆ ಮಾತು ತೆಗೆದನು. 'ಈ ಗವ್ಯ ಜೀವನದಲ್ಲಿ ನಾನು ಆನಂದಪರವಶವಾಗುತ್ತೇನೆ. ನನ್ನ ತಲೆಯಲ್ಲೀಗ ಆಲೋಚನೆಯ ತುಣುಕೇ ಇಲ್ಲ. ಅದು ರಬ್ಬರ್ ಚೆಂಡಿನಂತೆ ಖಾಲಿ.'

ಕೈತುಂಬ ಕೆಲಸವಿರುವಾಗ, ಅದರಲ್ಲಿಯೂ ತನ್ನ ಉಸ್ತುವಾರಿಯಿಲ್ಲದಿದ್ದರೆ ಇನ್ನೂ ಅಣಿಗೊಳ್ಳದ ಹೊಲಗಳಿಗೆ ಆಳುಗಳು ಎಲ್ಲೆಂದರಲ್ಲಿ ಅಡ್ಡಾದಿಡ್ಡಿಯಾಗಿ ಗಾಡಿಗೊಬ್ಬರವನ್ನು ಕೆಡವುತ್ತಾರೆಂದು ತಿಳಿದಾಗ, ಅವನೊಡನೆ ಕುಳಿತು, ಹರಟೆ ಕೇಳುವುದೊಂದು ಲೆವಿನ್‌ನಿಗೆ ಶ್ರಮಸಾಧ್ಯವಾದ ಪರೀಕ್ಷೆಯಾಗಿತ್ತು. ನೇಗಿಲಗುಳಗಳನ್ನು ತಿರುಪು ಮೊಳೆಗಳಿಂದ ಬಿಗಿಮಾಡದೆ ಬಳಸಿದಾಗ, ಅವು ಕಳಚಿಕೊಳ್ಳುತ್ತಿದ್ದುವಷ್ಟೆ. ಆ ನೇಗಿಲುಗಳು ಹಿಂದಿನ ಕಾಲದಲ್ಲಿ ಬಳಕೆಯಲ್ಲಿದ್ದ ಒಳ್ಳೆಯ ನೇಗಿಲುಗಳಂತಿಲ್ಲವೆಂದೂ, ಅವು ಭೂತ ಸೃಷ್ಟಿಸಿದ ಹೊಸ ನಮೂನೆಯ ಕೆಲಸಕ್ಕೆ ಬಾರದ ಉಪಕರಣಗಳೆಂದೂ ಆಳುಗಳು ಆಕ್ಷೇಪವೆತ್ತುತ್ತಿದ್ದರು.

'ಉರಿಯುವ ಬಿಸಿಲಿನಲ್ಲಿ ತುಂಬ ಹೊತ್ತು ಓಡಾಡಿ ಸಾಕಾಗಿದ್ದೇಯೆ; ಬಾ, ಈಗ' ಎಂದು ಕೊಜ್ನಿಶೆವ್ ಅವನನ್ನು ಕರೆಯುತ್ತಿದ್ದನು.

'ಒಂದು ನಿಮಿಷ ಲೆಕ್ಕದ ಮನೆಗೆ ಹೋಗಿ ಬರಬೇಕಾಗಿದೆ' ಎಂದು ಲೆವಿನ್ ಉತ್ತರಿಸಿ, ದೂರದ ಹೊಲಗಳ ಕಡೆಗೆ ಓಡಿಹೋದನು.

೨

ಜೂನ್ ತಿಂಗಳ ಮೊದಲ ವಾರದಲ್ಲೊಂದು ದಿನ ಲೆವಿನ್‌ನ ಹಿಂದಿನ ದಾದಿ, ಇಂದಿನ ಮನೆವಾರ್ತೆಗಾತಿ ಅಗಫಿಯಾ ಮಿಖಾಯ್‌ಲೊವ್ನ ಅದೇ ತಾನೆ ಉಪ್ಪು ಊರಿದ್ದ ಅಣಬೆ ಜಾಡಿಯನ್ನು ನೆಲಮಾಳಿಗೆಗೆ ಕೊಂಡೊಯ್ಯುವಾಗ ಜಾರಿ, ಬಿದ್ದು, ಮುಂಗೈ ಉಳುಕಿಸಿಕೊಂಡಳು. ಇತ್ತೀಚೆಗೆ ವೈದ್ಯ ಶಿಕ್ಷಣವನ್ನು ಮುಗಿಸಿದ್ದ ಮಾತುಗುಳಿ ಗ್ರಾಮೀಣ ತರುಣ ವೈದ್ಯನನ್ನು ಕರೆಸಲಾಗಿ, ಅವನು ಮುಂಗೈಯನ್ನು ಪರೀಕ್ಷಿಸಿದನು. ಅದು ಮುರಿದಿಲ್ಲವೆಂದು ಭರವಸೆ ನೀಡಿ, ಒದ್ದೆ ಬಟ್ಟೆಯನ್ನು ಕಟ್ಟಿದನು. ಸುವಿಖ್ಯಾತ ಸರ್ಜಿಯಸ್ ಇವಾನೊವಿಚ್ ಕೊಜ್ನಿಶೆವ್‌ನೊಡನೆ ಮಾತಾಡಲವಕಾಶ ಸಿಕ್ಕಿದ್ದೆ ಸಾಕೆಂದು ಸಂತೋಷದಿಂದ ಭೋಜನಕ್ಕುಳಿದನು. ಸ್ಥಳೀಯ ಜನಪ್ರವಾದಗಳನ್ನು ವ್ಯಾಖ್ಯಾನಿಸುತ್ತ, ಜಿಲ್ಲಾ ವ್ಯವಹಾರಗಳ ಅತೃಪ್ತ ಸ್ಥಿತಿಗತಿಗಳನ್ನು ದೂರುತ್ತ ಅವನು ತನ್ನ

ಪ್ರೌಢಿಮೆಯನ್ನು ಮೆರೆದನು. ಕೊಜ್ನಿಶೆವ್ ಅವನ ಮಾತುಗಳನ್ನು ಎಚ್ಚರಿಕೆಯಿಂದ ಆಲಿಸಿದನು, ಪ್ರಶ್ನೆಗಳನ್ನು ಕೇಳಿದನು, ಹೊಸ ಸಂವಾದಕನಿಂದ ಸ್ಫೂರ್ತಿಪಡೆದು, ದೀರ್ಘ ಭಾಷಣವನ್ನೆ ಬಿಗಿದನು. ಅವನು ಮಾಡಿದ ಉಚಿತ ಹಾಗೂ ತೂಕದ ಟೀಕೆಗಳನ್ನು ಯುವ ವೈದ್ಯ ಮೆಚ್ಚಿದನು. ಆ ಸಂವಾದದ ಪರಿಣಾಮವಾಗಿ ಕೊಜ್ನಿಶೆವ್ ಚೈತನ್ಯದ ಚಿಲುಮೆಯಾಗಿದ್ದನು; ಲೆವಿನ್‌ಗೆ ಗೊತ್ತಿದ್ದಂತೆ, ಚೈತನ್ಯದಾಯಕವಾದ ಸಂವಾದದನಂತರ ಸಾಮಾನ್ಯವಾಗಿ ಅವನು ಹೊಸ ಹುರುಪಿನಿಂದ ಪುಟಿಯುತ್ತಿದ್ದನು.

ವೈದ್ಯನ ಅಗಲಿಕೆಯನಂತರ ಕೊಜ್ನಿಶೆವ್ ಮೀನುಶಿಕಾರಿಯ ಬಯಕೆಯನ್ನು ಅಭಿವ್ಯಕ್ತಗೊಳಿಸಿದನು. ಮೀನು ಬೇಟೆಯಲ್ಲವನಿಗೆ ವಿಶೇಷಾಸಕ್ತಿ; ಅಂಥ ಅವಿವೇಕ ವಿನೋದದ ಸುಖವನ್ನು ಸವಿಯುವಲ್ಲಿ ಅವನಿಗೆ ನಿಜಕ್ಕೂ ಹೆಮ್ಮೆಯಿದ್ದಂತೆ ತೋರುತ್ತಿತ್ತು.

ಹುಲ್ಲುಗಾವಲಿನಲ್ಲಿಯೋ ಹೊಲಗಳಲ್ಲಿಯೋ ಕೆಲಸವಿದ್ದ ಲೆವಿನ್ ಒಂಟಿ ಕುದುರೆ ಗಾಡಿಯಲ್ಲಿ ತನ್ನಣ್ಣನನ್ನು ಕರೆದೊಯ್ಯುವುದಾಗಿ ತಿಳಿಸಿದನು.

ಆ ವರ್ಷದ ಬೇಸಗೆಯ ತಿರುವಿನ ಸಮಯ: ವರ್ಷದ ಸುಗ್ಗಿ ಕೈಗೂಡಿತ್ತು; ಮುಂದಿನ ವರ್ಷದ ಬಿತ್ತನೆಯ ಬಗ್ಗೆ ರೈತರು ಯೋಚಿಸುತ್ತಿದ್ದರು, ಕೊಯ್ಲು ಸನ್ನಿಹಿತವಾಗಿತ್ತು; ರೈ ಹೊಲದಲ್ಲಿ ಹೊಡೆಕಡೆದಿತ್ತು; ಆ ಹೊಡೆ ಇನ್ನೂ ತೆಳ್ಳಗೆ ಹಗುರವಾಗಿದ್ದುವು, ತಂಗಾಳಿಯಲ್ಲಿ ಹಸುರು ಹಸುರಾಗಿ, ಬೂದು ಬೂದಾಗಿ ತಲೆ ತೊನೆಯುತ್ತಿದ್ದುವು; ಹಳದಿ ಹುಲ್ಲಿನ ತೆಂಡೆಗಳು, ಅಲ್ಲಲ್ಲಿ ಹಬ್ಬಿದ್ದ ಎಳವಾದಿ ಹೊಲಗಳಲ್ಲಿ ಹೊಳೆಹೊಳೆಯುತ್ತಿದ್ದ ಹಸುರು ಓಟ್ಸ್‌ಪೈರು ಅಸಮವಾಗಿ ತಲೆದೋರುತ್ತಿದ್ದುವು; ಕುದುರೆ-ಗೋಧಿ ಮೊಳಕೆಯೊಡೆದು ಸಂಪೂರ್ಣವಾಗಿ ಭೂಮಿಯನ್ನೆಲ್ಲ ಆವರಿಸಿಕೊಂಡಿತ್ತು; ದನಕರುಗಳ ತುಳಿತದಿಂದ ಕಲ್ಲಾಗಿದ್ದ ಬೀಳು ಹೊಲಗಳು ನೇಗಿಲಿಗೆ ಸರಿಯಾಗಿ ಹರಿಯುತ್ತಿರಲಿಲ್ಲ; ಗುಳವನ್ನು ತೆಗೆದುಕೊಳ್ಳದ ಜಾಗಗಳು ಅಲ್ಲಲ್ಲಿ ಎದ್ದು ಕಾಣುತ್ತಿದ್ದುವು; ಹೊಲಗಳಲ್ಲಿ ಒಣಗುತ್ತಿದ್ದ ಗೊಬ್ಬರ ಗುಡ್ಡೆಗಳ ವಾಸನೆ ಸೂರ್ಯಾಸ್ತಮಾನ ಸಮಯದಲ್ಲಿ ಹಸುರು ಹುಲ್ಲಿನ ಇಂಪುಕಂಪುಗಳೊಡನೆ ಮಿಲನಗೊಳ್ಳುತ್ತಿತ್ತು; ಕಳೆಯ ಕಪ್ಪು ಬಣವೆಗಳಿದ್ದ ನದೀ ತೀರದ ತಗ್ಗು ಪ್ರದೇಶದಲ್ಲಿ ಕೊಯ್ಲಿಗೆ ಸಿದ್ಧವಾಗಿದ್ದ ದಟ್ಟವಾದ ಹುಲ್ಲುಗಾವಲು ಕಣ್ಣಿಟ್ಟಕುವವರೆಗೆ ಹಬ್ಬಿತ್ತು.

ಸುಗ್ಗಿಗೆ ಮುಂಚೆ ಬೇಸಾಯದ ಕೆಲಸದಲ್ಲಿ ತುಸುವಿರಾಮವಿದ್ದ ಸಮಯವದು; ಅದು ವರ್ಷ ವರ್ಷವೂ ಪುನರಾವೃತ್ತಿಯಾಗುತ್ತಿತ್ತು; ವರ್ಷ ವರ್ಷವೂ ರೈತರನ್ನೆಲ್ಲ ಒಟ್ಟುಗೂಡಿಸುವ ಸಂದರ್ಭವದು. ಸುಗ್ಗಿ ಸಮೃದ್ಧವಾಗಿತ್ತು; ಬೇಸಗೆಯ ದಿನಗಳು ತಿಳಿಯಾಗಿದ್ದುವು, ಬಿಸಿ ಬಿಸಿಯಾಗಿದ್ದುವು; ರಾತ್ರಿಗಳು ಹ್ರಸ್ವವಾಗಿದ್ದುವು; ಇಬ್ಬನಿ ದಟ್ಟವಾಗಿ ಬೀಳುತ್ತಿತ್ತು.

ಹುಲ್ಲುಗಾವಲನ್ನು ತಲುಪುವ ಮುಂಚೆ ಸೋದರರು ಅರಣ್ಯದ ಮೂಲಕ ಸವಾರಿಸಬೇಕಾಗಿತ್ತು. ಕೊಜ್ನಿಶೆವ್ ಪರ್ಣಾಕೀರ್ಣ ವನರಾಜಿಯ ಸೌಂದರ್ಯೋತ್ಸವವನ್ನು ಆಶ್ಚರ್ಯಭರಿತನಾಗಿ ವರ್ಣಿಸುತ್ತಿದ್ದನು. ನೆರಳಿನ ಕಡೆ ಮಸಿ ಚೆಲ್ಲಿದಂತಿದ್ದ, ಹಳದಿಯ ಕಂಕುಳಿಲೆಗಳಿಂದ ಮಿನುಗುತ್ತಿದ್ದ, ಮೊಗ್ಗು ಬಿರಿಯಲಿದ್ದ ಹಳೆಯ ಲೈಮ್

ಮರಗಳ ಕಡೆಗೊಮ್ಮೆ, ಈ ವರ್ಷದ ಬೆಳವಣಿಗೆಯನ್ನು ಸೂಚಿಸುವ ಪೈನ್ ವೃಕ್ಷಗಳ ಹಚ್ಚಹಸುರಿನ ತುದಿಗಳ ಕಡೆಗೆ ಮತ್ತೊಮ್ಮೆ ಅವನು ಲೆವಿನ್‌ನ ಗಮನವನ್ನು ಸೆಳೆಯುತ್ತಿದ್ದನು. ನಿಸರ್ಗ ಸೌಂದರ್ಯದ ಬಗ್ಗೆ ವ್ಯಾಖ್ಯಾನ ಮಾಡುವುದಾಗಲಿ, ಅದನ್ನು ಕೇಳುವುದಾಗಲಿ ಲೆವಿನ್‌ನಿಗೆ ಇಷ್ಟವಿರಲಿಲ್ಲ. ಕಣ್ಣು ಸವಿಯುತ್ತಿದ್ದ ಸೌಂದರ್ಯವನ್ನು ನಾಲಿಗೆ ಕೆಡಿಸುತ್ತಿತ್ತೆಂಬುದೇ ಅವನ ಮತವಾಗಿತ್ತು. ಅನ್ಯಮನಸ್ಕನಾಗಿದ್ದ ಅವನು ತನ್ನಣ್ಣನಿಗೆ ಯಾಂತ್ರಿಕವಾಗಿ ಉತ್ತರ ನೀಡುತ್ತಿದ್ದನು. ಅವರು ಅರಣ್ಯವನ್ನು ದಾಟಿದ ನಂತರ ಬೆಟ್ಟದೋರೆಯಲ್ಲಿ ಬೀಳುಬಿದ್ದಿದ್ದ ಹೊಲದ ಕಡೆಗೆ ಅವನ ಲಕ್ಷ್ಯ ಹರಿಯಿತು; ಅಲ್ಲಲ್ಲಿ ಹಳದಿ ಹುಲ್ಲಿನ ರತ್ನಗಂಬಳಿ ಹಾಸಿದಂತಿತ್ತು; ತುಳಿತಕ್ಕೊಳಗಾದ ಬೇರೆ ಜಾಗಗಳಲ್ಲಿ ಚಚ್ಚೌಕದ ರೇಖಾಚಿತ್ರಗಳು ರಚನೆಗೊಂಡಂತಿದ್ದುವು; ಕೆಲವು ಹೊಲಗಳಲ್ಲಿ ಗೊಬ್ಬರದ ಗುಡ್ಡೆಗಳಿದ್ದುವು; ಉಳಿದೆಡೆಗಳಲ್ಲಿ ಉಳುಮೆ ಮುಗಿದಿತ್ತು. ಗಾಡಿಸಾಲುಗಳು ಹೊಲದಲ್ಲಿ ಸಾಗುತ್ತಿದ್ದುವು. ಅವಶ್ಯವಾದ ಗೊಬ್ಬರ ಸಾಗಾಣಿಕೆಗೆ ಗಾಡಿಗಳು ಸಾಲುತ್ತವೆಯೆ ಎಂದು ಖಚಿತಪಡಿಸಿಕೊಳ್ಳುವ ಸಲುವಾಗಿ ಲೆವಿನ್ ಅವುಗಳನ್ನೆಣಿಸಿದನು. ಹುಲ್ಲುಗಾವಲಿನ ಕಡೆಗೆ ಅವನ ದೃಷ್ಟಿ ಚಲಿಸಿದಾಗ, ಅದರ ಕೊಯ್ಲು ಕಟ್ಟಣೆಗಳು ಅವನ ಆಲೋಚನೆಗಳ ವಸ್ತುವಾದುವು. ಮೇವನ್ನು ಓರಣಗೊಳಿಸುವ ತವಕ ಯಾವಾಗಲೂ ಅವನ ಮನಸ್ಸಿನಲ್ಲಿ ಕುದಿಯುತ್ತಿತ್ತು. ಹುಲ್ಲುಗಾವಲನ್ನು ತಲುಪಿದಾಗ ಅವನು ಕುದುರೆಯನ್ನು ನಿಲ್ಲಿಸಿದನು.

ದಟ್ಟವಾಗಿದ್ದ ಹುಲ್ಲಿನಲ್ಲಿ ಇನ್ನೂ ಇಬ್ಬನಿ ಸುರಿಯುತ್ತಿತ್ತು. ಕಾಲು ಒದ್ದೆಯಾಗದಿರಲೆಂದು ನದಿಯ ದಂಡೆಗೆ ಗಾಡಿಯಲ್ಲಿಯೇ ತನ್ನನ್ನೊಯ್ಯುವಂತೆ ಕೊಜ್ನಿಶೆವ್ ತಮ್ಮನಿಗೆ ಹೇಳಿದನು. ನೀರಂಜಿ ಮರದ ರೆಂಬೆಯ ಕೆಳಗೆ ಕುಳಿತುಕೊಂಡರೆ ಮೀನು ಬೇಟೆ ಸುಲಭವಾಗುತ್ತಿತ್ತು. ಕೊಯ್ಲಿಗೆಣಿಯಾಗಿದ್ದ ಹುಲ್ಲಿನ ಮೇಲೆ ಬಂಡಿ ಹರಿಸುವುದು ಲೆವಿನ್‌ನಿಗೆ ಇಷ್ಟವಿರಲಿಲ್ಲ. ಆದರೂ ಮಾರ್ಗಾಂತರವಿಲ್ಲದೆ ಅವನು ಹುಲ್ಲುಗಾವಲಿನ ಮೇಲೆ ಬಂಡಿ ಹೊಡೆಯಬೇಕಾಯಿತು. ಉದ್ದನೆಯ ಹುಲ್ಲು ಚಕ್ರಗಳಿಗೂ ಕುದುರೆಯ ಕಾಲುಗಳಿಗೂ ಮೃದುವಾಗಿ ಸುತ್ತಿಕೊಳ್ಳುತ್ತಿತ್ತು; ತೇವಗೊಂಡಿದ್ದ ಅರೆಯಕಾಲು ಮತ್ತು ಗುಂಬಗಳ ಮೇಲೆ ಬೀಜ ಅಂಟಿಕೊಳ್ಳುತ್ತಿದ್ದುವು.

ಕೊಜ್ನಿಶೆವ್ ನೀರಂಜಿಮರದ ಕೆಳಗೆ ಕುಳಿತುಕೊಂಡು, ಗಾಳಗಳನ್ನು ನೆಲೆಗೊಳಿಸಿದನು; ಲೆವಿನ್ ಕುದುರೆಯನ್ನು ಮರಕ್ಕೆ ಕಟ್ಟಿ ಹಾಕಿ, ನಿರ್ವಾತ ಸುವಿಶಾಲ ಹಸುರು ಕಡಲಿನಲ್ಲಿ ಹಾದುಹೋದನು. ಜೌಗು ಪ್ರದೇಶದ ಹುಲ್ಲುಗಾವಲಿನಲ್ಲಿ ಬಲಿತ ಬೀಜಗಳೊಡಗೂಡಿದ ರೇಷ್ಮೆ ಹುಲ್ಲು ಸೊಂಟದೆತ್ತರಕ್ಕೆ ಬೆಳೆದಿತ್ತು.

ಅವನು ಹುಲ್ಲುಗಾವಲನ್ನು ದಾಟಿ, ರಸ್ತೆಯಲ್ಲಿ ಕಾಲಿರಿಸಿದಾಗ, ಜೇನು ನೊಣಗಳ ಬುಟ್ಟಿಯನ್ನು ಹೊತ್ತಿದ್ದ, ಬಾತುಕೊಂಡಿದ್ದ ಕಣ್ಣುಗಳ ಮುದುಕನೊಬ್ಬ ಅವನಿಗೆ ಎದುರಾದನು.

'ಹೊಸ ಹಿಂಡು ಹಿಡಿದೆಯೇನು, ಫೊಮಿಚ್?' ಎಂದವನು ಕೇಳಿದನು.

'ಹೊಸದಲ್ಲ, ಕಾನ್‌ಸ್ಟೆಂಟಿನ್ ಮಿತ್ರಿಚ್. ಹಳೆಯವು ಓಡಿಹೋಗದಂತೆ ಕಾದುಕೊಂಡರೆ ಸಾಕಾಗಿದೆ. ಇದು ಎರಡನೆಯ ಹಿಂಡು. ಇದು ಸಹ ಹಾರಿ ಹೋಗುತ್ತಿತ್ತು.

ಮಕ್ಕಳ ಶ್ರಮದಿಂದಾಗಿ ಅದನ್ನು ಹಿಂದಕ್ಕೆ ಪಡೆಯುವಂತಾಯಿತು. ಅವರು ನಿಮ್ಮ ಹೊಲ ಉಳುತ್ತಿದ್ದರು. ಅವರು ಕುದುರೆಗಳ ನೊಗ ಕಳಚಿ, ಅದರ ಹಿಂದೆ ದೌಡಾಯಿಸಿದರು.'

'ಕೊಯ್ಲು ಶುರುಮಾಡೋಣವೆ? ಅಥವಾ ತುಸು ತಡೆಯೋಣವೆ? ಏನು ಹೇಳು, ಫೊಮಿಚ್.'

'ನೋಡಿ ಬುದ್ಧಿ, ನಮ್ಮಷ್ಟಕ್ಕೆ ಬಿಟ್ಟರೆ ಸಂತ ಪೀಟರ್ ದಿನಾಚರಣೆಯ ತನಕ ಕಾಯುತ್ತೇವೆ. ಇದು ನಮ್ಮ ಹಳ್ಳಿ ಮುಕ್ಕರಲ್ಲಿ ಸಾಮಾನ್ಯ. ಆದರೆ ನೀವು ಬಹುಬೇಗ ಆರಂಭಿಸುತ್ತೀರಿ. ದೇವರು ಇಚ್ಛಿಪಟ್ಟರೆ ಏಕಾಗಬಾರದು? ಹುಲ್ಲು ಸೊಂಪಾಗಿ ಬೆಳೆದಿದೆ. ಜಾನುವಾರುಗಳಿಗೆ ಒಳ್ಳೆಯ ಮೇವು.'

'ಹವಾಮಾನದ ಬಗ್ಗೆ ನೀನೇನು ಹೇಳುತ್ತೀಯೆ?'

'ಅದೆಲ್ಲ ದೇವರ ಕೈಯಲ್ಲಿದೆ. ಪ್ರಾಯಶಃ ಅನುಕೂಲವಾಗಬಹುದು.'

ಲೆವಿನ್ ತನ್ನಣ್ಣನ ಬಳಿಗೆ ಮರಳಿದನು. ಮೀನು ಕಚ್ಚಲಿಲ್ಲ. ಆದರೆ ಕೊಜ್ನಿಶೆವ್‌ನಿಗೆ ಬೇಸರವಾಗಲಿಲ್ಲ. ಅವನು ತುಂಬ ಹುರುಪಿನಲ್ಲಿದ್ದನು. ವೈದ್ಯನ ಸಂಭಾಷಣೆಯಿಂದ ಉತ್ತೇಜನಗೊಂಡ. ಅವನು ಮಾತಾಡಲು ತವಕಿಸುತ್ತಿದ್ದನೆಂಬುದನ್ನು ಲೆವಿನ್ ಅರಿತನು. ಅವನಾದರೊ ಮನೆಗೆ ಹಿಂದಿರುಗುವ ಆತುರದಲ್ಲಿದ್ದನು. ಹುಲ್ಲು ಕೊಯ್ಲಿಗೆ ಮಾರನೆಯ ದಿನವೇ ಏರ್ಪಾಡುಮಾಡಬೇಕೆಂದೂ, ಆ ಕಾರ್ಯವನ್ನು ಯಾವಾಗ ಪ್ರಾರಂಭಿಸಬೇಕೆಂಬ ಚಿಂತೆಗೂ ಸಂದೇಹಕ್ಕೂ ವಿರಾಮ ಹಾಕಬೇಕೆಂದೂ ಅವನು ಕಾತರನಾಗಿದ್ದನು. 'ನಾವೀಗ ಹೊರಡೋಣ' ಎಂದವನು ಉಕ್ತಿಸಿದನು.

'ಅವಸರವೇಕೆ? ಕುಳಿತುಕೊ. ಇದೇನಯ್ಯ ಶನಿ, ನೀನು ಒದ್ದೆಮುದ್ದೆಯಾಗಿದ್ದೀಯೆ! ಮೀನು ಸಿಗದಿದ್ದರೇನಾಯಿತು? ಮೀನು ಶಿಕಾರಿಯ ನೆವದಿಂದ ನೀನು ನಿಸರ್ಗಕ್ಕೆ ಹತ್ತಿರವಾಗುತ್ತೀಯೆ. ಅದೇ ಆನಂದ! ಈ ಉಕ್ಕು ಬಣ್ಣದ ನೀರಿನ ಸೌಂದರ್ಯಕ್ಕೆ ಸರಿಗಟ್ಟುವ ವಸ್ತುಯಾವುದು? ಈ ನದಿಯ ದಡಗಳೊ. ಇವುಗಳನ್ನು ನೋಡಿದಾಗಲೆಲ್ಲ ನನಗೊಂದು ಒಗಟು ನೆನಪಿಗೆ ಬರುತ್ತದೆ. ನಿನಗದು ನೆನಪಿದೆಯೆ? ಹುಲ್ಲುನೀರಿಗೆ ಹೇಳುತ್ತದೆ : "ನಾವು ಮೌನವಾಗಿ ನಿದಾನವಾಗಿ ಬಾಗುತ್ತೇವೆ...." ಎಂದು ಕೊಜ್ನಿಶೆವ್ ನುಡಿದನು.

'ಈ ಒಗಟನ್ನು ನಾನು ಕೇಳಿಲ್ಲ.' ಎಂದು ಲೆವಿನ್ ಬೇಸರದಿಂದ ಉತ್ತರಿಸಿದನು.

೩

'ನಾನು ನಿನ್ನ ವಿಚಾರವನ್ನೆ ಕುರಿತು ಯೋಚಿಸುತ್ತಿದ್ದೆ' ಎಂದು ಕೊಜ್ನಿಶೆವ್‌ನೇ ಮಾತು ತೆಗೆದನು. 'ಆ ವೈದ್ಯ ಹೇಳುವುದೆಲ್ಲ ನಿಜವಾದರೆ—ಅವನೊಬ್ಬ ಚಾಲಾಕಿನ ಆಸಾಮಿಯೆಂದು ತೋರುತ್ತದೆ—ನಿನ್ನ ಜಿಲ್ಲೆಯ ವ್ಯವಹಾರಗಳು ನಾಯಿಪಾಲಾಗುತ್ತಿವೆ. ನಿನಗೆ ಮೊದಲೇ ಇದನ್ನೆಲ್ಲ ತಿಳಿಸಿದ್ದೆ. ಈಗಲೂ ಹೇಳುತ್ತೇನೆ, ಕೇಳು : ನೀನು ಸಭೆಗಳಿಗೆ ಹೋಗದಿರುವುದಾಗಲಿ, ಸ್ಥಳೀಯ ವಿದ್ಯಮಾನಗಳಿಂದ ದೂರವಿರುವುದಾಗಲಿ ತಪ್ಪು. ಪ್ರಾಮಾಣಿಕ ವ್ಯಕ್ತಿಗಳೆಲ್ಲ ಜಿಲ್ಲೆಯ ವ್ಯವಹಾರಗಳಿಂದ ದೂರನಿಲ್ಲುವುದಾದರೆ,

ಮುಂದೇನಾಗುತ್ತದೆಯೋ ದೇವರೇ ಬಲ್ಲ. ಈಗಿರುವಂತೆ ನಾವು ಹಣ ತೆರುತ್ತೇವೆ, ಅದೆಲ್ಲ ಸಂಬಳಕ್ಕೆ ಹೋಗುತ್ತದೆ. ನಮಗೆ ಶಾಲೆಗಳಿಲ್ಲ, ವೈದ್ಯರಿಲ್ಲ, ಸೂಲಗಿತ್ತಿಯರಿಲ್ಲ, ಗಂದಿಗರಿಲ್ಲ, ಏನೇನೂ ಇಲ್ಲ.'

'ನಾನೂ ಶಕ್ತಿಮೀರಿ ಪ್ರಯತ್ನಿಸಿದೆ.' ಎಂದು ಲೆವಿನ್ ನಿರುದ್ವಿಗ್ನನಾಗಿ, ನಿರ್ಲಕ್ಷ್ಯದಿಂದ ಉತ್ತರಿಸಿದನು. 'ನನ್ನಿಂದ ಸಾಧ್ಯವಾಗಿಲ್ಲ. ಏನು ಮಾಡುವುದಿದೆ?'

'ಮತ್ತೆ ಮತ್ತೆ ಏಕೆ ಪ್ರಯತ್ನಿಸಬಾರದು? ಇದೆಲ್ಲ ನನಗರ್ಥವಾಗದು. ಇಷ್ಟಕ್ಕೆಲ್ಲ ನಿರ್ಲಕ್ಷ್ಯ ಅಥವಾ ಅನರ್ಹತೆ ಕಾರಣವೆಂದು ಹೇಳಲಾರೆ. ಮತ್ತೇನು ಕಾರಣ? ಅಪ್ಪಟ ಸೋಮಾರಿತನವೆ?'

'ಅದೊಂದೂ ಅಲ್ಲ. ನಾನೂ ಪ್ರಾಮಾಣಿಕವಾಗಿ ಪ್ರಯತ್ನಿಸಿದೆ. ನಾನು ಮಾಡುವಂಥಾದ್ದು ಏನೂ ಇಲ್ಲವೆಂದು ನನಗೆ ಮನವರಿಕೆಯಾಗಿದೆ' ಎಂದು ಲೆವಿನ್ ನುಡಿದನು.

'ತನ್ನಣ್ಣನ ಮಾತಿನ ಕಡೆಗೆ ಅವನ ಲಕ್ಷ್ಯ ವಿರಲಿಲ್ಲ. ನದಿಯಿಂದಾಚೆಗಿನ ಹೊಲಗಳಲ್ಲಿ ಏನೋ ಕಪ್ಪು ಪದಾರ್ಥವೊಂದು ಅವನ ಕಣ್ಣಿಗೆ ಗೋಚರಿಸಿತು. ಅದು ಒಂಟಿ ಕುದುರೆಯೊ ಅಥವಾ ತನ್ನ ಪಾರುಪತ್ಯಗಾರ ಕುಳಿತಿದ್ದ ಕುದುರೆಯೊ, ಪತ್ತೆಹಚ್ಚಲವನು ಪ್ರಯತ್ನಿಸುತ್ತಿದ್ದನು.

'ನಿನ್ನಿಂದೇನೂ ಸಾಧ್ಯವಾಗಲಿಲ್ಲವೇಕೆ? ನೀನೊಂದು ಸಲ ಪ್ರಯತ್ನಿಸಿದೆ, ಪ್ರಯತ್ನ ಫಲಿಸಲಿಲ್ಲ. ಆದ್ದರಿಂದ ಕೈಬಿಟ್ಟೆಯಲ್ಲವೆ? ನೀನು ತುಂಬ ಸ್ವಾಭಿಮಾನಿಯೆಂದು ತೋರುತ್ತದೆ.'

'ಸ್ವಾಭಿಮಾನವೆ?' ಎಂದು ಲೆವಿನ್ ತನ್ನಣ್ಣನ ಮಾತುಗಳು ಚುಚ್ಚಿದಂತಾಗಿ ಪುನರುಕ್ತಿಸಿದನು. 'ನಿನ್ನ ಮನಸ್ಸಿನಲ್ಲೇನಿದೆಯೋ ನನಗರ್ಥವಾಗದು. ನಾನೊಬ್ಬ ಹೊರತಾಗಿ ಎಲ್ಲ ವಿದ್ಯಾರ್ಥಿಗಳೂ ಸಮಗ್ರಕಲನಶಾಸ್ತ್ರವನ್ನು ಅರ್ಥಮಾಡಿಕೊಂಡಿದ್ದುದಾಗಿ ವಿಶ್ವವಿದ್ಯಾನಿಲಯದಲ್ಲಿದ್ದಾಗ ಯಾರಾದರೂ ಹೇಳಿದ್ದರೆ ನನ್ನ ಸ್ವಾಭಿಮಾನಕ್ಕೆ ಗಾಯವಾಗುತ್ತಿತ್ತು. ಸದ್ಯದ ವ್ಯವಹಾರದಲ್ಲಂತು ಯಾವೊಬ್ಬ ವ್ಯಕ್ತಿಗೇ ಆಗಲಿ, ಅಭಿರುಚಿಯುಂಟೆ, ಇಲ್ಲವೆ ಎಂಬುದು ಪ್ರಥಮತಃ ಮನವರಿಕೆಯಾಗಬೇಕಾಗುತ್ತದೆ; ಆ ವ್ಯವಹಾರಗಳು ಎಷ್ಟರಮಟ್ಟಿಗೆ ಮುಖ್ಯವೆಂಬುದನ್ನು ಅನಂತರ ಯೋಚಿಸಬೇಕಾಗುತ್ತದೆ.'

'ಏನು? ಅವು ಮುಖ್ಯವಲ್ಲವೆಂದು ತಿಳಿದೆಯಾ?' ಎಂದು ಕೊಜ್ನಿಶೆವ್ ಮರ್ಮಾಘಾತವಾದಂತಾಗಿ ಪ್ರಶ್ನಿಸಿದನು. ಯಾವ ವ್ಯವಹಾರದಲ್ಲಿ ತನ್ನ ತಮ್ಮ ಆಸಕ್ತಿ ವಹಿಸಿದ್ದನೋ ಅದು ಮುಖ್ಯವಲ್ಲವೆಂದು ಅವನೇ ಹೇಳಿದ್ದರಿಂದ ಅಣ್ಣನಿಗೆ ನೋವಾಯಿತು; ತನ್ನ ಮಾತುಗಳನ್ನು ತಮ್ಮ ಉಪೇಕ್ಷೆಯಿಂದ ಕೇಳುತ್ತಿದ್ದುದರಿಂದ ಉರಿಯುವ ನೋವಿಗೆ ಉಪ್ಪು ಹಚ್ಚಿದಂತಾಗಿತ್ತು.

'ಅವು ಮುಖ್ಯವೆಂದು ನಾನು ಭಾವಿಸಿಲ್ಲ. ನಾನವುಗಳಿಗೆ ಅಂಟಿಕೊಂಡಿಲ್ಲ. ನಾನವನ್ನು ಸರಿಪಡಿಸಲಾರೆ' ಎಂದು ಲೆವಿನ್ ಉತ್ತರಿಸಿದನು. ತಾನು ನೋಡಿದ್ದ ಕಪ್ಪು ವಸ್ತುವೇ ಪಾರುಪತ್ಯಗಾರನೆಂದು ಅವನಿಗೆ ಖಚಿತವಾಯಿತು. ನೇಗಿಲು ನೊಗಗಳನ್ನು ಕಳಚಲು ಪಾರುಪತ್ಯಗಾರ ಆಳುಗಳಿಗೆ ಅನುಮತಿ ನೀಡಿದ್ದಂತೆ ಅವನಿಗೆ ಕಂಡಿತು.

ಆಳುಗಳು ನೇಗಿಲುಗಳನ್ನು ಮಗುಚುತ್ತಿದ್ದರು. 'ವಾಸ್ತವವಾಗಿ ಅವರು ಉಳುಮೆ ಮುಗಿಸಿರಲಾರರು' ಎಂದವನು ಮನದಲ್ಲೆಂದುಕೊಂಡನು.

'ಇಗೋ ಕೇಳಿಲ್ಲಿ' ಎಂದು ತಮ್ಮನ ಕಡೆಗೆ ತಿರುಗಿದಾಗ ಅಣ್ಣನ ಬುದ್ಧಿದೀಪ್ತ ಸುಂದರ ವದನವನ್ನು ಕೋಪದ ಮೋಡ ಕವಿಯಿತು. 'ಎಲ್ಲಕ್ಕೂ ಒಂದು ಮಿತಿಯಿದೆ. ಸಂಪ್ರದಾಯವನ್ನು ತಿರಸ್ಕರಿಸಿ, ಮರೆಮೋಸಗಳನ್ನು ವರ್ಜಿಸಿ, ವಿನೂತನವಾದದ್ದನ್ನು, ಸತ್ಯವಾದದ್ದನ್ನು ಪ್ರಾಮಾಣಿಕವಾಗಿ ಅಪ್ಪಿಕೊಳ್ಳುವುದೆ ಮೇಲು. ಆದರೆ ನೀನು ಹೇಳುವ ಮಾತಿನಲ್ಲಿ ಅರ್ಥವಿಲ್ಲವೆಂದು, ಇದ್ದರೂ ತಪ್ಪರ್ಥವಿದೆಯೆಂದು ನಿನಗೆ ತಿಳಿಯು ವುದಿಲ್ಲವೆ? ನೀನು ಪ್ರೀತಿಸುವ ರೈತರು ಅಷ್ಟೇನೂ ಮುಖ್ಯವಲ್ಲವೆಂದು, ಅವರು... '

'ನಾನೆಂದೂ ಹಾಗೆ ಹೇಳಿದ್ದಿಲ್ಲ' ಎಂದು ಲೆವಿನ್ ತನ್ನಷ್ಟಕ್ಕೆ ತಾನಂದುಕೊಂಡನು.

'....ಯಾವ ಉಪಚಾರವೂ ಇಲ್ಲದೆ ಖಾಯಿಲೆಯಿಂದ ಸಾಯಬೇಕೆಂದು ಹೇಗೆ ಹೇಳುವೆ? ತಿಳಿವಳಿಕೆಯಿಲ್ಲದ ಹೆಂಗಸರು ಶಿಶುಮರಣಕ್ಕೆ ಕಾರಣವಾಗಿರುವಾಗ, ಸಾಮಾನ್ಯ ಜನ ಅಜ್ಞಾನಾಂಧಕಾರದಲ್ಲಿ ಮುಳು ಮುಳುಗಿರುತ್ತ, ಓದು ಬರಹ ಬಲ್ಲವರ ಗುಲಾಮ ರಾಗಿರುವಾಗ, ನೀನವರಿಗೆ ಸಹಾಯಮಾಡುವ ಸ್ಥಿತಿಯಲ್ಲಿದ್ದು, ಅಮುಖ್ಯವೆಂಬ ಕಾರಣ ಕ್ಕಾಗಿ ಅವರಿಗೆ ಸಹಾಯಮಾಡದಿರುವಾಗ ಹೀಗೆಲ್ಲ ಹೇಳುವುದು ತರವೆ?'

ಕೋಜ್ನಿಶೆವ್ ಅವನ ಮುಂದೆ ಕೆಲವು ಪರ್ಯಾಯ ಪರಿಹಾರಗಳನ್ನು ಮಂಡಿಸಿ ದನು: ನಿನ್ನ ಬುದ್ಧಿ ಇನ್ನೂ ಪಕ್ವವಾಗಿಲ್ಲವಾಗಿ ಯಾವ ರೀತಿ ಮುಂದುವರಿಯ ಬೇಕೆಂಬುದು ನಿನಗೆ ಹೊಳೆದಿಲ್ಲ; ಅಥವಾ ನಿನ್ನ ಶಾಂತಿಸುಖ ಸೌಲಭ್ಯಾಕಾಂಕ್ಷೆ ಹಾಗೂ ಸ್ವಾಭಿಮಾನಗಳನ್ನಾಗಲಿ, ಆ ಕೈಂಕರ್ಯಕ್ಕೆ ಬೇಕಾದ ಇತರ ಅಗತ್ಯ ಗಳನ್ನಾಗಲಿ ತ್ಯಾಗಮಾಡಲು ನೀನು ಸಿದ್ಧನಾಗಿಲ್ಲ.

ಲೆವಿನ್‌ನ ಮುಂದಿದ್ದ ಮಾರ್ಗಗಳು ಎರಡೇ ಎರಡು : ತನ್ನಣ್ಣನ ಅಭಿಪ್ರಾಯವ ನ್ನೊಪ್ಪಿಕೊಳ್ಳಬೇಕು ; ಇಲ್ಲವೆ, ಸಾರ್ವಜನಿಕ ಕ್ಷೇಮ ಸಾಧನೆಗಾಗಿ ಸಮರ್ಪಣ ಮನೋಭಾವದಿಂದ ದುಡಿಯುತ್ತಿಲ್ಲವೆಂಬುದನ್ನು ಮಾನ್ಯಮಾಡಬೇಕು. ಇದರಿಂದ ಅವನಿಗೆ ತುಂಬ ಅವಮಾನವಾದಂತಾಗಿ, ವ್ಯಾಕುಲಕ್ಕೀಡಾದನು. 'ಎರಡು ಪರ್ಯಾಯ ಗಳೂ ಸರಿಯೆ' ಎಂದವನು ದೃಢವಾಗಿ ನುಡಿದನು. 'ಅದರ ಸಾಧ್ಯತೆಯ ಬಗ್ಗೆ ನನಗೆ....'

'ಏನು ? ಹಣವನ್ನು ಸರಿಯಾಗಿ ಹಂಚುವುದಾದರೆ ವೈದ್ಯಸಹಾಯ ಸಾಧ್ಯವಾಗ ದೆಂಬುದು ನಿನ್ನ ಅಭಿಪ್ರಾಯವೆ ?'

'ಅದು ಸಾಧ್ಯವೆಂದು ನಾನು ತಿಳಿದಿಲ್ಲ. ಆಗಾಗ್ಗೆ ವಸಂತಋತುವಿನ ಪ್ರವಾಹಗಳ ಮತ್ತು ಚಳಿಗಾಲದ ಚಂಡಮಾರುತದ ಪೀಡೆಗಳಿಗೀಡಾಗುವ, ಬೇಸಗೆಯ ಬೇಸಾಯಕ್ಕೆ ಗಮನ ಕೊಡಬೇಕಾಗಿರುವ ಸಂದರ್ಭದಲ್ಲಿ ಒಂದೂವರೆ ಸಾವಿರ ಚದರ ಮೈಲಿ ವಿಸ್ತೀರ್ಣವುಳ್ಳ ನಮ್ಮ ಜಿಲ್ಲೆಗೆ ವೈದ್ಯಸಹಾಯವನ್ನೊದಗಿಸುವುದು ಕಷ್ಟವಾಗುತ್ತದೆ. ಜತೆಗೆ, ಔಷಧಿಯಲ್ಲಿ ನನಗೆ ವಿಶ್ವಾಸವಿಲ್ಲ.'

'ಓ, ಅದು ನ್ಯಾಯವಲ್ಲ. ನಾನು ಸಾವಿರಾರು ನಿದರ್ಶನಗಳನ್ನು ನೀಡಬಲ್ಲೆ. ಅದಿರಲಿ, ಶಾಲೆಗಳ ಬಗ್ಗೆ ಏನು ಹೇಳುತ್ತೀಯ ?'

'ನಮಗೆ ಶಾಲೆಗಳೇಕೆ?'

'ನೀನು ಹೇಳುತ್ತಿರುವುದಾದರೂ ಏನು? ಶಿಕ್ಷಣದ ಪ್ರಯೋಜನದ ಬಗ್ಗೆ ನಿನಗೆ ಸಂದೇಹವಿದೆಯೆ? ಅದರಿಂದ ನಿನಗೆ ಒಳ್ಳೆಯದಾಗಿದ್ದರೆ, ಇತರರಿಗೂ ಒಳ್ಳೆಯದಾಗ ಬೇಕಲ್ಲವೆ?'

ನೈತಿಕವಾಗಿ ತಾನು ಇಕ್ಕಟ್ಟಿಗೆ ಸಿಕ್ಕಿಕೊಂಡಂತೆ ಲೆವಿನ್ ಭಾವಿಸಿದನು. ಆ ಕಾರಣಕ್ಕಾಗಿ ಅವನು ಶಾಂತಿ ಕಳೆದುಕೊಂಡನು; ಸಾರ್ವಜನಿಕ ವ್ಯವಹಾರಗಳ ಬಗೆಗಿನ ತನ್ನ ನಿರ್ಲಕ್ಷತೆಗೆ ಮುಖ್ಯ ಕಾರಣವೇನೆಂಬುದನ್ನು ತನಗರಿವಿಲ್ಲದಂತೆಯೆ ಥಟ್ಟನೆ ಹೊರಗೆಡಹಿದನು: 'ಪ್ರಾಯಶಃ ಇವೆಲ್ಲ ಒಳ್ಳೆಯವೆ ಸರಿ. ನಾನೆಂದೂ ಬಳಸದ ಆಸ್ಪತ್ರೆಗಳನ್ನಾಗಲಿ, ನನ್ನ ಮಕ್ಕಳನ್ನು ಕಳಿಸದ ಶಾಲೆಗಳನ್ನಾಗಲಿ ಸಂಸ್ಥಾಪಿಸುವ ತೊಂದರೆಯನ್ನೇಕೆ ನಾನು ತೆಗೆದುಕೊಳ್ಳಲಿ? ರೈತರು ಸಹ ಆ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸುವುದಿಲ್ಲ; ಕಳಿಸಬೇಕೆಂಬ ದೃಢವಿಶ್ವಾಸವೂ ಅವರಲ್ಲಿದ್ದಂತಿಲ್ಲ.'

ಈ ವಿಷಯದ ಬಗೆಗಿನ ಅನಿರೀಕ್ಷಿತವಾದ ಅಭಿಪ್ರಾಯದಿಂದ ಕೊಜ್ನಿಶೆವ್ ಒಂದು ಕ್ಷಣ ಬೆರಗಾದನು; ಮರುಕ್ಷಣದಲ್ಲಿಯೇ ಅವನು ತಮ್ಮನ ಮೇಲೆ ಮತ್ತೊಂದು ಬಾಣ ಪ್ರಯೋಗವನ್ನು ನೆನೆದನು.

ತುಸುಹೊತ್ತು ಅವನು ಮೌನವಾಗಿದ್ದನು; ಮತ್ತೊಂದು ಗಾಳವನ್ನು ನೀರಿಗೆಸೆದನು; ಸುಸ್ಮಿತನಾಗಿ ತನ್ನ ತಮ್ಮನ ಕಡೆಗೆ ಮೊಗದಿರುಹಿದನು. 'ಇಗೋ ನೋಡು: ಮೊತ್ತಮೊದಲನೆಯದಾಗಿ ವೈದ್ಯಕೇಂದ್ರಗಳನ್ನು ನಿರ್ಮಿಸಬೇಕು. ಗ್ರಾಮೀಣ ವೈದ್ಯ ಬೇಕೆಂದು ನಾವು ಅಗಫಿಯಾ ಮಿಖೈಲೋವ್ನಳಿಗೆ ಹೇಳಿಕಳಿಸ ಲಿಲ್ಲವೆ?'

'ನನ್ನ ಮಾತು ತೆಗೆದುಕೊ, ಅವಳ ತೋಳು ತಿರುವುಮುರಿವಾಗುತ್ತದೆ.'

'ಅದು ಕಾದುನೋಡಬೇಕಾದ ವಿಷಯ. ಎರಡನೆಯದಾಗಿ, ವಿದ್ಯಾವಂತ ರೈತ ಉತ್ತಮ ರೈತನಾಗುತ್ತಾನೆ; ಅನಕ್ಷರಸ್ಥರಿಗಿಂತ ಅಕ್ಷರಸ್ಥರೇ ಬೇಕಾಗಿದೆ.'

'ಇಲ್ಲ, ಇಲ್ಲ. ಯಾರನ್ನು ಬೇಕಾದರೂ ಕೇಳು: ವಿದ್ಯಾವಂತ ಕೆಲಸಗಾರ ನಿಷ್ಪ್ರಯೋಜಕ. ಅವನು ರಸ್ತೆಗಳನ್ನು ಸರಿಪಡಿಸುವುದಿಲ್ಲ. ಈ ದಿನ ಸೇತುವೆಯನ್ನು ನಿರ್ಮಿಸಿದ್ದಾದರೆ, ನಾಳೆ ಅದರ ಮರಮುಟ್ಟುಗಳೆಲ್ಲ ಮಾಯವಾಗುತ್ತವೆ' ಎಂದು ಲೆವಿನ್ ದೃಢಧ್ವನಿಯಲ್ಲಿ ಉತ್ತರಿಸಿದನು.

'ಆದರೂ ಅದು ಮುಖ್ಯವಲ್ಲ' ಎಂದು ಕೊಜ್ನಿಶೆವ್ ಹುಬ್ಬು ಗಂಟಿಕ್ಕಿಕೊಂಡು ಮಾತು ಪ್ರಾರಂಭಿಸಿದನು. ಅಸಂಬದ್ಧವಾದ ವಿಷಯಾಂತರಕ್ಕೆ ಅನುವು ಮಾಡಿ ಕೊಡುವ, ಮಾತಿನ ಜಾಡನ್ನು ತಪ್ಪಿಸುವ, ಉತ್ತರಿಸಲು ಸಿದ್ಧತೆಮಾಡಿಕೊಳ್ಳಲಾಗದ ಪ್ರಶ್ನೆಗಳಿಗಿಂಬುಮಾಡಿಕೊಡುವ ವಿರೋಧಾಭಿಪ್ರಾಯ ಅವನಿಗೆ ಹಿಡಿಸಲಿಲ್ಲ. 'ಏನೇ ಆಗಲಿ, ಅದು ಮುಖ್ಯ ವಿಷಯವಲ್ಲ. ಶಿಕ್ಷಣದಿಂದ ಜನರಿಗೆ ಲಾಭವಾಗುತ್ತದೆಯೋ ಇಲ್ಲವೋ ಹೇಳು?'

'ಹೌದು, ಒಪ್ಪಿಕೊಳ್ಳುತ್ತೇನೆ' ಎಂದು ಲೆವಿನ್ ಅಪ್ರಯತ್ನಕನಾಗಿ ನುಡಿದನು. ತಾನು ಅಪ್ರಾಮಾಣಿಕವಾಗಿ ಮಾತಾಡಿದನಾಗಿ ಮರುಕ್ಷಣವೆ ಅವನು ತನ್ನೊಳಗೆ

ತಾನಂದುಕೊಂಡನು. ಈ ವಿಷಯಕ್ಕೆ ತನ್ನೊಪ್ಪಿಗೆ ಸೂಚಿಸಿದ್ದೇ ಆದರೆ, ಆ ತನಕ ತಾನು ಹೇಳಿದ್ದೆಲ್ಲ ಅವಿವೇಕವಾಗುತ್ತದೆಂಬ ಹಾಗೂ ಅರ್ಥಶೂನ್ಯವಾಗುತ್ತದೆಂಬ ಶಂಕೆ ಅವನ ಮನಸ್ಸನ್ನು ಹೊಕ್ಕಿತು. ಅದನ್ನು ಸಮರ್ಥಿಸಿಕೊಳ್ಳುವ ವಿಧಾನ ಅವನ ಬಗೆಗಣ್ಣಿಗೆ ಗೋಚರಿಸಲಿಲ್ಲ. ಆದರೆ ಅದನ್ನು ತಾರ್ಕಿಕವಾಗಿ ಸಮರ್ಥಿಸಿಕೊಳ್ಳಬಹುದೆಂದವನು ಖಚಿತಪಡಿಸಿಕೊಂಡಿದ್ದನು; ಸಾಕ್ಷಿ ಪ್ರಮಾಣಗಳಿಗಾಗಿ ಅವನು ಕಾಯುತ್ತಿದ್ದನು. ತಾನು ನಿರೀಕ್ಷಿಸಿದ್ದುದಕ್ಕಿಂತ ಸುಲಭತರ ರೂಪದಲ್ಲಿ ವಾದ ತಲೆಯೆತ್ತಿತು.

'ಅದು ಲಾಭಕರವೆಂದು ನೀನು ಒಪ್ಪುವುದಾದರೆ, ಅದನ್ನು ಪ್ರಶಂಸಿಸದೆ ಬೇರೆ ಮಾರ್ಗವೇ ಇಲ್ಲ' ಎಂದು ಕೊಜ್ನಿಶೆವ್ ಸೊಲ್ಲಿಸಿದನು. 'ಅದನ್ನು ಪೂರೈಸುವ ಪ್ರಯತ್ನಗಳ ಬಗ್ಗೆ ನಿನಗೆ ಸಹಾನುಭೂತಿ ಇರಬೇಕಲ್ಲದೆ, ನೀನೇ ಅದರ ಪೂರೈಕೆಗಾಗಿ ಸಹಾಯ ಮಾಡಬೇಕಾಗುತ್ತದೆ.'

'ಆದರೆ ಆದೊಂದು ಸದುದ್ದೇಶವೆಂದು ನಾನು ಹೇಳಿಲ್ಲ' ಎಂದು ಹೇಳುವಾಗ ಲೆವಿನ್‌ನ ಮುಖ ರಂಗೇರಿತು.

'ಅದು ಹೇಗೆ? ನೀನು ಇದೆ ತಾನೆ ಹೇಳಿದೆ....'

'ಅದು ಒಳ್ಳೆಯದೆಂದಾಗಲಿ, ಸಾಧ್ಯವೆಂದಾಗಲಿ ನಾನು ಎಣಿಸಲಾರೆ.'

'ಆ ಕಾರ್ಯದಲ್ಲಿ ಮುಳುಗುವ ತನಕ ಅದು ಸಾಧ್ಯವೆಂದು ನೀನರಿಯಲಾರೆ.'

'ನಾನದನ್ನೊಪ್ಪಿಕೊಂಡೆ' ಎಂದು ಲೆವಿನ್ ಅಂತರಂಗದಲ್ಲಿ ಒಪ್ಪಿಗೆಯಿಲ್ಲದಿದ್ದರೂ ನುಡಿದನು. 'ನಾನೊಪ್ಪಿಕೊಳ್ಳುತ್ತೇನೆಂದಿಟ್ಟುಕೋ. ಆದರೂ ಆ ಬಗ್ಗೆ ನಾನೇಕೆ ತಲೆ ಕೆಡಿಸಿಕೊಳ್ಳಬೇಕೆಂಬುದನ್ನು ನಾನರಿಯೆ.'

'ಏನು? ಆದರೆ—'

'ತುಸು ತಡಿ. ಹೇಗೂ ನಾವು ಆ ವಿಷಯದ ಪರಾಮರ್ಶೆಯಲ್ಲಿ ತೊಡಗಿದ್ದೇವಷ್ಟೆ. ತಾತ್ತ್ವಿಕ ದೃಷ್ಟಿಯಿಂದ ಅದನ್ನು ನನಗೆ ವಿವರಿಸು' ಎಂದು ಲೆವಿನ್ ಉಕ್ತಿಸಿದನು.

'ಅದಕ್ಕೂ ತಾತ್ತ್ವಿಕತೆಗೂ ಏನು ಸಂಬಂಧವಿದೆ?' ಎಂದು ಕೊಜ್ನಿಶೆವ್ ನುಡಿದನು. ತಾತ್ತ್ವಿಕತೆಯ ಬಗ್ಗೆ ಮಾತಾಡುವ ಹಕ್ಕು ತನ್ನ ತಮ್ಮನಿಗಿಲ್ಲವೆಂಬ ಧಾಟಿ ಅವನ ಧ್ವನಿಯಲ್ಲಿ ಅಡಕವಾಗಿರಬೇಕೆಂದು ಲೆವಿನ್‌ಗನ್ನಿಸಿತು. ಲೆವಿನ್ ಉದ್ರೇಕಗೊಂಡನು.

'ಏನೆಂದು ಕೇಳಿದೆಯಾ?' ಎಂದು ಲೆವಿನ್ ಭಾವಾವೇಶದಿಂದ ಚುಚ್ಚಿದನು. 'ವೈಯಕ್ತಿಕ ಸುಖದ ಆಸಕ್ತಿಯೇ ನಮ್ಮೆಲ್ಲ ಕ್ರಿಯೆಗಳ ಚಾಲಕಶಕ್ತಿಯೆಂಬುದು ನನ್ನ ನಂಬಿಕೆ. ಸದ್ಯದ ಸ್ಥಳೀಯ ಸಂಸ್ಥೆಗಳಿಂದ ನಮ್ಮ ಕ್ಷೇಮಸಾಧನೆ ಸಾಧ್ಯವಿಲ್ಲವೆಂದು ಕುಲೀನವಂಶಸ್ಥನಾದ ನನಗೆ ಗೊತ್ತಿದೆ. ರಸ್ತೆಗಳು ಚೆನ್ನಾಗಿಲ್ಲ; ಇನ್ನೂ ಚೆನ್ನಾಗುವ ನಿರೀಕ್ಷೆಯಿಲ್ಲ; ಆದರೆ ಅವೆಷ್ಟು ಕೆಟ್ಟಿದ್ದರೂ, ನನ್ನ ಕುದುರೆಗಳು ಅವುಗಳ ಮೇಲೆಯೇ ನನ್ನನ್ನು ಒಯ್ಯುತ್ತವೆ. ನನಗವರ ವೈದ್ಯರಾಗಲಿ, ವೈದ್ಯ ಕೇಂದ್ರಗಳ ಅವಶ್ಯಕತೆಯಾಗಲಿ ಇಲ್ಲ. ನನಗವರ ಕೋರ್ಟುಗಳ ಅಗತ್ಯವಿಲ್ಲ; ನಾನೆಂದೂ ಅವುಗಳಿಗೆ ಅರ್ಜಿ ಸಲ್ಲಿಸಿಲ್ಲ; ಸಲ್ಲಿಸುವುದೂ ಇಲ್ಲ. ನನಗವರ ಶಾಲೆಗಳ ಅಗತ್ಯವಿಲ್ಲ; ಅಷ್ಟೇ ಅಲ್ಲ, ಈ ಮೊದಲೇ ಹೇಳಿರುವಂತೆ ಅವುಗಳು ಅಪಾಯಕಾರಿಯೆಂದೇ ತಿಳಿಯುತ್ತೇನೆ. ಎಕರೆ

ಯೊಂದಕ್ಕೆ ಆರು ಕೊಪೆಕ್ ನೆಲದೆರಿಗೆ ತೆರುವುದು, ನಗರಕ್ಕೆ ಹೋಗುವುದು, ಶಿಗಣೆಗಳ ಜತೆಯಲ್ಲಿ ಇರುಳು ಕಳೆಯುವುದು, ಎಲ್ಲ ವಿಧವಾದ ಕ್ಷುಲ್ಲಕಾಲಾಪಗಳನ್ನು ಕೇಳುವುದು—ಇವಿಷ್ಟೇ ನನ್ನ ಮಟ್ಟಿಗೆ ಜಿಲ್ಲಾ ಸಂಸ್ಥೆಗಳ ಹೊರೆ ಹೊಣೆ; ವೈಯಕ್ತಿಕ ಉದ್ಧಾರಕ್ಕೆ ಅವುಗಳಿಂದ ಏನೇನೂ ಪ್ರೇರಣೆ ದೊರೆಯದು.

'ಸರಿ, ಸರಿ' ಎಂದು ಕೊಜ್ನಿಶೆವ್ ಮಂದಹಾಸದೊಡನೆ ಮಧ್ಯೆ ಬಾಯಿ ಹಾಕಿದನು. 'ಜೀತಗಾರರ ಬಿಡುಗಡೆಗಾಗಿ ನಾವು ಆಂದೋಲನ ನಡಸುತ್ತಿದ್ದಾಗ ವೈಯಕ್ತಿಕ ಆಸಕ್ತಿಯೇ ನಮಗಿರಲಿಲ್ಲ; ಆದರೂ ಅದಕ್ಕಾಗಿ ದುಡಿದೆವು.'

'ಇಲ್ಲ, ಇಲ್ಲ' ಎಂದು ಲೆವಿನ್ ಭಾವೋದ್ರೇಕದಿಂದ ಸಿಡಿದನು. 'ಜೀತಗಾರರ ವಿಮುಕ್ತಿ ತೀರ ಬೇರೆಯದಾದ ಸಂಗತಿ. ನಮಗದರಲ್ಲಿ ವಾಸ್ತವವಾಗಿ ಸ್ವಾರ್ಥವೂ ಇತ್ತು. ಸಭ್ಯ ಜನರನ್ನು ನುಗ್ಗುನುರಿಮಾಡುತ್ತಿದ್ದ ಭಾರದಿಂದ ಪಾರಾಗಬೇಕೆಂದಿದ್ದೆವು. ಸ್ಥಳೀಯ ಸಂಸ್ಥೆಯ ಸದಸ್ಯನಾಗಿ ಮಾಡುವುದೇನಿದೆ? ನಾನು ವಾಸಿಸದಿರುವ ಊರಿನಲ್ಲಿ ಎಷ್ಟು ಚರಂಡಿಗಳ ಆವಶ್ಯಕತೆಯಿದೆ ಎಂಬುದನ್ನು, ಎಷ್ಟು ಮಂದಿ ಜಾಡಮಾಲಿಗಳು ಬೇಕೆಂಬುದನ್ನು ಚರ್ಚಿಸಿ, ನಿರ್ಣಯ ತೆಗೆದುಕೊಳ್ಳುವುದಕ್ಕಲ್ಲವೆ? ನ್ಯಾಯದರ್ಶಿಯಾಗಿ ಹಂದಿಯ ಹಿಂತೊಡೆಯನ್ನು ಕದ್ದ ರೈತನ ವಿಚಾರಣೆ ನಡಸುವುದಕ್ಕಲ್ಲವೆ? ನ್ಯಾಯದರ್ಶಿಯಾಗಿ ಆರು ಗಂಟೆಗಳ ಕಾಲ ಕುಳಿತು, ಒಂದೇ ಸಮನೆ ವಕೀಲನ ಮತ್ತು ನ್ಯಾಯಖಾತೆ ಅಧಿಕಾರಿಯ ಕ್ಷುಲ್ಲಕ ಅಸಂಬದ್ಧ ಪ್ರಲಾಪವನ್ನು ಕೇಳಲೆಂದೆ? ಅಷ್ಟೇ ಅಲ್ಲ, "ಎಲವೋ ಖೈದಿಯೆ, ನೀನು ತೊಡೆಯ ಮಾಂಸವನ್ನು ಕದ್ದದ್ದು ನಿಜವೆಂದೊಪ್ಪಿಕೊಳ್ಳುವೆಯಾ? ನಿಜ ಹೇಳು" ಎಂಬುದಾಗಿ ನನ್ನ ಮುಗ್ಧ ವೃದ್ಧ ಅಲ್ಯೋಷ್ಕನನ್ನು ಪ್ರಶ್ನಿಸುವ ಅಧ್ಯಕ್ಷನ ಮಾತುಗಳನ್ನಾಲಿಸುವ ಶಿಕ್ಷೆಯನ್ನನುಭವಿಸಲೆಂದೆ?'

ಲೆವಿನ್‌ನ ಉತ್ಸಾಹ ಅವನನ್ನು ಅಡ್ಡದಾರಿಗೊಯ್ಯುತ್ತಿತ್ತು. ಅವನು ಅಧ್ಯಕ್ಷನನ್ನೂ ಮೊದ್ದು ಅಲ್ಯೋಷ್ಕನನ್ನೂ ಅಣಕಿಸಿದನು. ಇಂಥ ಅಣಕದಿಂದ ತನ್ನ ವಾದಕ್ಕೆ ಪುಷ್ಟಿಯೊದಗುತ್ತದೆಂದವನು ಬಗೆದನು.

ಕೊಜ್ನಿಶೆವ್ ತನ್ನ ಭುಜಗಳನ್ನು ಕುಣಿಸಿದನು.

'ನೀನು ಪ್ರಮಾಣೀಕರಿಸಲು ಪ್ರಯತ್ನಿಸುತ್ತಿರುವ ವಿಷಯವಾದರೂ ಏನು?'

'ನನಗೆ ಸಂಬಂಧಿಸಿದ ಹಕ್ಕುಗಳನ್ನು ರಕ್ಷಿಸಲು ನಾನು ಸರ್ವ ಪ್ರಯತ್ನಗಳನ್ನು ನಡಸುತ್ತೇನೆ; ನಾನು ವಿದ್ಯಾರ್ಥಿಯಾಗಿದ್ದ ಸಮಯದಲ್ಲಿ ಪೋಲಿಸ್ ಸೈನಿಕರು ನಮ್ಮ ಕೋಣೆಗಳನ್ನು ಶೋಧಿಸಿ, ನಮ್ಮ ಕಾಗದಗಳನ್ನೋದಿದಾಗ, ಶಕ್ತಿಮೀರಿ ನಮ್ಮ ಹಕ್ಕುಗಳನ್ನು—ಶಿಕ್ಷಣದ ಹಾಗೂ ಸ್ವಾತಂತ್ರ್ಯದ ಹಕ್ಕುಗಳನ್ನು—ಕಾಯ್ದುಕೊಳ್ಳಲು ನಾನು ಸಿದ್ಧನಾಗಿದ್ದೆ. ನನ್ನ ಮಕ್ಕಳ, ಸೋದರರ ಹಾಗೂ ನನ್ನ ಹಿತಗಳಿಗೆ ಧಕ್ಕೆಯುಂಟುಮಾಡುವ ಕಡ್ಡಾಯದ ಸೈನಿಕ ಸೇವೆಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ; ನನಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ನಾನು ಸಿದ್ಧನಾಗಿದ್ದೇನೆ; ಆದರೆ ಜಿಲ್ಲಾ ಪರಿಷತ್ತಿನ ಹಣವನ್ನು ಹಂಚುವ ವಿಷಯದ ಚರ್ಚೆಯಾಗಲಿ ಅಥವಾ ಮೊದ್ದು ಅಲ್ಯೋಷ್ಕನನ್ನು ವಿಚಾರಣೆಗೆ ಗುರಿಪಡಿಸುವ ಸಂಗತಿಯಾಗಲಿ ನನಗಿಷ್ಟವಿಲ್ಲದವು; ಅವುಗಳಿಗೆ ನಾನೇಕೆ ತಲೆಕೊಡಬೇಕೆಂಬುದೂ ನನಗರ್ಥವಾಗದ ವಿಚಾರ.'

ಬಿರುಕುಬಿಟ್ಟ ಅಣೆಕಟ್ಟೆಯಿಂದ ನುಗ್ಗುವ ನೀರಿನ ರಭಸದಂತೆ ಲೆವಿನ್‌ನ ಮಾತು ಅಪ್ಪಳಿಸಿದುವು. ಕೊಜ್ನಿಶೆವ್ ನಕ್ಕನು.

'ನಾಳೆ ನೀನೇ ವಿಚಾರಣೆಗೊಳಗಾಗುತ್ತೀಯೆಂದಿಟ್ಟುಕೊಳ್ಳೋಣ. ಹಳೆಯ ರೀತಿಯ ನ್ಯಾಯಾಲಯಗಳಲ್ಲಿ ನಿನ್ನ ವಿಚಾರಣೆ ನಡೆಯುವುದಾದರೆ ಅದು ನಿನಗೊಪ್ಪಿಗೆಯಾಗುತ್ತದೆಯೆ?'

'ನಾನೆಂದೂ ವಿಚಾರಣೆಗೆ ಗುರಿಯಾಗುವುದಿಲ್ಲ. ನಾನು ಯಾರ ಕೊರಳನ್ನೂ ಕತ್ತರಿಸುವುದಿಲ್ಲ. ಆದ್ದರಿಂದ ಅದೆಲ್ಲ ರಗಳೆಯ ಅಗತ್ಯವಿಲ್ಲ ನನಗೆ. ನಾನು ನಿನಗೆ ಹೇಳುವುದಿಷ್ಟೆ' ಎಂದವನು ಮತ್ತೆ ಅಡ್ಡದಾರಿ ಹಿಡಿದನು. 'ನಮ್ಮ ಜಿಲ್ಲಾ ಸಂಸ್ಥೆಗಳು ಕತ್ತರಿಸಿದ ಭೂರ್ಜವೃಕ್ಷಗಳನ್ನು ಹೋಲುತ್ತವೆ. ಅವುಗಳನ್ನು ತ್ರಿಮೂರ್ತಿ ದಿನದಂದು ಕಡಿದು ತಂದು ನೆಲದಲ್ಲಿ ಹೂಳುತ್ತಾರೆ. ಒಂದೇ ಒಂದು ರಾತ್ರಿಯಲ್ಲಿ ಕುರುಚಲು ಕಾಡನ್ನು ಸಹಜವಾಗಿ ಬೆಳೆಸಿದಂತೆ ಪ್ರದರ್ಶನ ನಡೆಯುತ್ತದೆ. ಅವು ಸಹಜವೆಂದು ನಂಬಿ ಮನಸಿಟ್ಟು ನೀರುಹೊಯ್ದು, ಅವನ್ನು ಪೋಷಿಸಲಾರೆ.'

ಆ ಭೂರ್ಜವೃಕ್ಷಗಳು ಚರ್ಚೆಯನ್ನು ಪ್ರವೇಶಿಸಿದ್ದಕ್ಕೆ ಸೋಜಿಗಗೊಂಡು ಕೊಜ್ನಿಶೆವ್ ಮತ್ತೆ ತನ್ನ ಭುಜಗಳನ್ನು ಕುಣಿಸಿದನು; ಆದರೆ ತನ್ನ ತಮ್ಮನ ಅಂತರಾರ್ಥವನ್ನವನು ಒಂದೇ ಒಂದು ಕ್ಷಣದಲ್ಲಿ ಗ್ರಹಿಸಿದನು. 'ಚರ್ಚೆಯ ಪರಿ ಸರಿಯಲ್ಲ' ಎಂದವನು ಟೀಕಿಸಿದನು.

ಸರ್ವ ಕ್ಷೇಮದ ಬಗೆಗೆ ಲೆವಿನ್‌ಗೆ ನಿರ್ಲಕ್ಷ್ಯವಿತ್ತು; ಅದೊಂದು ದೌರ್ಬಲ್ಯವೆಂದೂ ಅವನಿಗೆ ಮನವರಿಕೆಯಾಗಿತ್ತು; ಅದನ್ನು ಸಮರ್ಥಿಸಿಕೊಳ್ಳುವ ಸಲುವಾಗಿ ಅವನು ಮಾತು ಮುಂದುವರಿಸಿದನು: 'ಸ್ವಂತಾಸಕ್ತಿಯನ್ನಾಧರಿಸದ ಯಾವ ಕ್ರಿಯೆಯೂ ಹೆಚ್ಚು ದಿನ ಉಳಿಯಲಾರದೆಂಬುದೇ ನನ್ನ ಮತ. ಇದು ಸರ್ವಸಾಧಾರಣವಾದ, ತಾತ್ತ್ವಿಕ ಸತ್ಯ' ಎಂದವನು ನುಡಿದನು. ತತ್ತ್ವಶಾಸ್ತ್ರದ ಬಗ್ಗೆ ಮಾತಾಡಲು ಇತರರಂತೆ ತನಗೂ ಹಕ್ಕಿದೆ ಎಂಬುದನ್ನು ತೋರಿಸಲೆನ್ನುವಂತೆ 'ತಾತ್ತ್ವಿಕ' ಎನ್ನುವ ಪದವನ್ನು ದೃಢವಾಗಿ ಪುನರುಕ್ತಿಸಿದನು.

ಕೊಜ್ನಿಶೆವ್ ಪುನಃ ಮುಗುಳುನಗೆ ಸೂಸಿದನು. 'ತನ್ನ ಮುದ್ದು ಭಾವನೆಗಳನ್ನು ಪೋಷಿಸುವ ಸಲುವಾಗಿ ಅವನೂ ತಾತ್ತ್ವಿಕ ಸಿದ್ಧಾಂತಗಳ ಮದ್ದನ್ನು ಸದಾ ಅಣಿಯಾಗಿಟ್ಟುಕೊಂಡಿದ್ದಾನೆ' ಎಂದವನು ತನ್ನೊಳಗೆ ತಾನಂದುಕೊಂಡನು. 'ಇಲ್ಲೆಲ್ಲ ತತ್ತ್ವಶಾಸ್ತ್ರವನ್ನೆಳೆಯಬೇಡ. ಅದರ ಪಾಡಿಗದು ಇರಲಿ. ಸಮಷ್ಟಿ ಮತ್ತು ವ್ಯಷ್ಟಿ ಕ್ಷೇಮಗಳ ನಡುವಣ ಅನಿವಾರ್ಯ ಸಂಬಂಧವನ್ನು ಕಂಡುಹಿಡಿಯುವುದೇ ಎಲ್ಲ ಯುಗಗಳ ತತ್ತ್ವಶಾಸ್ತ್ರದ ಮುಖ್ಯ ಸಮಸ್ಯೆಯಾಗಿದೆ. ಸದ್ಯಕ್ಕೆ ಆ ವಿಷಯ ಅಸಂಗತ; ನಿನ್ನ ಹೋಲಿಕೆಯಲ್ಲಿರುವ ತಪ್ಪೊಂದನ್ನು ನಾನು ತಿದ್ದಬೇಕಾಗಿದೆ. ಭೂರ್ಜವೃಕ್ಷಗಳನ್ನು ಸುಮ್ಮನೆ ಅಂಟಿಸಿಲ್ಲ; ಬೀಜ ಬಿತ್ತಿ ಕೆಲವನ್ನು ಬೆಳೆಸಲಾಗಿದೆ; ಸಸಿಗಳನ್ನು ನಾಟಿಹಾಕಿ ಕೆಲವನ್ನು ವೃದ್ಧಿಪಡಿಸಲಾಗಿದೆ; ಅವುಗಳನ್ನು ಎಚ್ಚರಿಕೆಯಿಂದ ಸಾಕಬೇಕಾಗಿದೆ. ತಮ್ಮ ಸಂಸ್ಥೆಗಳಲ್ಲಿ ಯಾವುದು ಮುಖ್ಯ, ಯಾವುದು ಮಹತ್ತ್ವಪೂರ್ಣವಾದದ್ದು ಎಂಬುದನ್ನು ಅಂತರ್ದೃಷ್ಟಿಯಿಂದರಿತು, ಅವುಗಳು ಅಮೂಲ್ಯವೆಂದು ತಿಳಿದು ಯಾವ ರಾಷ್ಟ್ರಗಳ

ಪೋಷಿಸುತ್ತವೆಯೋ ಅಂಥ ರಾಷ್ಟ್ರಗಳಿಗೆ ಮಾತ್ರ ಭವಿಷ್ಯವಿದೆ; ಅಂಥವಕ್ಕೆ ಮಾತ್ರ ಇತಿಹಾಸದಲ್ಲಿ ಸುಭದ್ರವೂ ಶಾಶ್ವತವೂ ಆದ ಸ್ಥಾನವಿರುತ್ತದೆ.'

ಈ ಹಂತದಲ್ಲಿ ಕೊಜ್ನಿಶೆವ್ ಚರ್ಚೆಯ ವಿಷಯವನ್ನು ಚಾರಿತ್ರಿಕ ತತ್ತ್ವಶಾಸ್ತ್ರದ ವಲಯದ ಕಡೆಗೆ ತಿರುಗಿಸಿ, ತನ್ನ ದೃಷ್ಟಿಕೋನದ ನ್ಯಾಯಾಂಶವನ್ನು ಪ್ರಮಾಣೀಕರಿಸಲು ಪ್ರಯತ್ನಿಸಿದನು. ಲೆವಿನ್‌ನಿಗೆ ಅದೊಂದು ಗಹನಸಂಗತಿಯಾಗಿ, ಅರ್ಥಮಾಡಿಕೊಳ್ಳಲು ಸಾಧ್ಯವಾಗಲಿಲ್ಲ.

'ರಷ್ಯನ್ನರಿಗೆ ಸಹಜವಾದ ಪಾಲುಮಾರಿಕೆಯಿಂದಾಗಿ, ಹಾಗೂ ಜೀತಗಾರ ವ್ಯವಸ್ಥೆಯ ಮನೋವಿಜ್ಞಾನದಿಂದಾಗಿ ನಿನಗೆ ಈ ಚಟುವಟಿಕೆಗಳು ಹಿಡಿಸುವುದಿಲ್ಲ. ಹೀಗೆ ಹೇಳುತ್ತೇನೆಂದು ತಪ್ಪು ತಿಳಿಯಬೇಡ. ಇದೆಲ್ಲ ತಾತ್ಕಾಲಿಕವಾದ ತಪ್ಪು ತಿಳಿವಳಿಕೆಯೆಂದೂ, ಅದು ಬಹುಬೇಗ ನಿನ್ನಿಂದ ದೂರ ಸರಿಯುವುದೆಂದೂ ನನಗೆ ವಿಶ್ವಾಸವಿದೆ.'

ಲೆವಿನ್ ಮಾತಾಡಲಿಲ್ಲ. ಪ್ರತಿಯೊಂದು ವಾದದಲ್ಲಿಯೂ ತಾನು ಸೋತಿದ್ದದಾಗಿ ಅವನು ಭಾವಿಸಿದನು. ತಾನು ಹೇಳಬೇಕಾಗಿದ್ದ ವಿಷಯ ತನ್ನಣ್ಣನಿಗೆ ಅರ್ಥವಾಗಲಿಲ್ಲವೆಂದು ಸಹ ಅವನು ಯೋಚಿಸಿದನು. ತನ್ನಣ್ಣ ತನ್ನನ್ನೇಕೆ ಅರ್ಥಮಾಡಿಕೊಳ್ಳಲಿಲ್ಲವೆಂಬುದು ಅವನ ಸಮಸ್ಯೆಯಾಯಿತು. ತನ್ನ ಆಲೋಚನೆಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವ ಸಾಮರ್ಥ್ಯವಿಲ್ಲದ್ದರಿಂದ ಹಾಗಾಯಿತೆ? ತನ್ನಣ್ಣ ಅವನ್ನರ್ಥಮಾಡಿಕೊಳ್ಳಲು ಇಷ್ಟಪಡಲಿಲ್ಲವಾಗಿ ಹಾಗಾಯಿತೆ? ಅವನ ಗ್ರಹಣ ಸಾಮರ್ಥ್ಯ ದುರ್ಬಲವಾಗಿದೆಯೆ? ಇವುಗಳಲ್ಲಿ ಯಾವುದು ಸರಿ? ಅದೇನೇ ಇರಲಿ, ಹೆಚ್ಚು ಆಳವಾಗಿ ಆ ವಿಷಯವನ್ನು ಪ್ರವೇಶಿಸಲು ಅವನು ಪ್ರಯತ್ನಿಸಲಿಲ್ಲ. ಪ್ರತ್ಯುತ್ತರವಿಲ್ಲದೆ, ತೀರ ಭಿನ್ನವಾದ ಅನ್ಯಾಲೋಚನೆಯಲ್ಲಿ, ಸ್ವಂತ ವ್ಯವಹಾರಗಳ ಬಗ್ಗೆ ಅವನು ಆಸಕ್ತನಾದನು.

ಕೊಜ್ನಿಶೆವ್ ಗಾಳದ ದಾರವನ್ನು ಸುತ್ತಿಕೊಂಡು, ಕುದುರೆಗಳನ್ನು ಗಾಡಿಗೆ ಹೂಡಿದನು. ಇಬ್ಬರೂ ಸವಾರಿಸಿದರು.

೪

ತನ್ನಣ್ಣನ ಜತೆಯ ಸಂವಾದದ ಕೊನೆಯಲ್ಲಿ ಲೆವಿನ್‌ನ ಮನಸ್ಸಿಗೆ ಬಂದ ಸ್ವಂತ ವ್ಯವಹಾರವಿದು: ಕಳೆದ ವರ್ಷದಲ್ಲೊಂದು ದಿನ ಮೇವು ಕೊಯ್ಲಿನ ಸಂದರ್ಭದಲ್ಲವನು ತನ್ನ ಪಾರುಪತ್ಯಗಾರನೊಡನೆ ಕುಪಿತಗೊಂಡು, ಮನಶ್ಶಾಂತಿ ಕಳೆದುಕೊಂಡಿದ್ದನು. ಮನಶ್ಶಾಂತಿಯನ್ನು ಮತ್ತೆ ಪಡೆಯುವ ಸಲುವಾಗಿ ಅವನು ತನಗೆ ಪ್ರಿಯವಾಗಿದ್ದ ಮಾರ್ಗವನ್ನನುಸರಿಸಿದ್ದನು—ರೈತನೊಬ್ಬನ ಕೈಯಿಂದ ಕುಡುಗೋಲು ಕಸಿದುಕೊಂಡು, ತಾನೇ ಕೊಯ್ಯತೊಡಗಿದ್ದನು.

ಆ ದುಡಿಮೆಯಿಂದ ಅವನಿಗೆಷ್ಟು ಆನಂದವಾಗಿತ್ತೆಂದರೆ, ತರುವಾಯ ಅದನ್ನವನು ಹಲವು ಸಲ ಪುನರಾವರ್ತಿಸಿದನು; ತನ್ನ ಮನೆಯ ಮುಂಭಾಗದ ಹುಲ್ಲೊಡ್ಡನ್ನೆಲ್ಲ ಅವನೇ ಕತ್ತರಿಸಿದ್ದನು; ಈ ವರ್ಷದ ವಸಂತಋತುವಿನಲ್ಲಿ ರೈತರೊಡನೆ ಕೊಯ್ಲು ಕೆಲಸದಲ್ಲಿ ಇಡೀ ದಿನಗಳನ್ನು ಕಳೆಯಲು ಅವನು ನಿಶ್ಚಯಿಸಿಕೊಂಡಿದ್ದನು. ತನ್ನಣ್ಣ

ಬಂದಾಗಿನಿಂದ ಕೊಯ್ಲು ಕೆಲಸಕ್ಕೆ ಹೋಗುವುದೋ ಬೇಡವೋ ಎಂಬ ಸಂದಿಗ್ಧಸ್ಥಿತಿಯಲ್ಲವನು ಸಿಕ್ಕಿಕೊಂಡಿದ್ದನು. ಇಡೀ ದಿನ ಅಣ್ಣನನ್ನು ಒಂಟಿಯಾಗಿ ಬಿಡುವುದು ಅವನಿಗಿಷ್ಟವಿರಲಿಲ್ಲ. ತನ್ನ ವಿಚಿತ್ರ ಸ್ವಭಾವದ ಬಗ್ಗೆ ಅಣ್ಣ ತಮಾಷೆ ಮಾಡಬಹುದೆಂದವನು ಹೆದರಿದನು. ಆದರೆ ಹುಲ್ಲೋಡ್ಡಿನ ಮೂಲಕ ತೆರಳುವಾಗ, ಕೊಯ್ಲಿನಿಂದ ತನಗುಂಟಾಗಿದ್ದ ಆನಂದ ನೆನಪಾಯಿತು; ತನ್ನ ನಿರ್ಧಾರವನ್ನು ಕಾರ್ಯಗತಗೊಳಿಸಬೇಕೆಂಬ ವ್ಯಾಮೋಹಕ್ಕವನು ಒಳಗಾದನು. ತನ್ನಣ್ಣನೊಡನೆ ಭಾವೋದ್ರೇಕದ ಮಾತುಕತೆ ಮುಗಿದನಂತರ, ಅವನ ಮನಸ್ಸನ್ನೆಲ್ಲ ತುಂಬಿಕೊಂಡ ಹಂಬಲವಿದು.

'ನಾನು ಬಹುಬೇಗ ಭಾವೋದ್ರೇಕಕ್ಕೊಳಗಾಗುತ್ತೇನೆ. ಇದಕ್ಕೆ ಶಾರೀರಕ ಚಟುವಟಿಕೆಯೇ ಮದ್ದು' ಎಂದವನು ಆಲೋಚಿಸಿದನು. ರೈತರ ಹಾಗೂ ತನ್ನಣ್ಣನ ಎದುರಿನಲ್ಲಿ ಮನಸ್ಸಿಗೆ ಕಿರಿಕಿರಿಯಾದರು ಸಹ ಮೇವು ಕೊಯ್ಲಿನ ಕೆಲಸದಲ್ಲಿ ಭಾಗಿಯಾಗಲೇಬೇಕೆಂದವನು ನಿರ್ಧರಿಸಿದನು.

ಅದೇ ದಿನ ಸಂಜೆ ಲೆವಿನ್ ಲೆಕ್ಕದ ಮನೆಗೆ ಹೋದನು; ಮಾರನೆಯ ದಿನದ ಕೆಲಸದ ಬಗ್ಗೆ ಅವನು ಪಾರುಪತ್ಯಗಾರನಿಗೆ ಸಲಹೆಗಳನ್ನು ನೀಡಿದನು; ಮಾರನೆಯ ದಿನವೇ ಅತ್ಯಂತ ದೊಡ್ಡದೂ, ಅತ್ಯುತ್ತಮವಾದದ್ದೂ ಆದ ಕಲಿನೊವ್ ಹುಲ್ಲುಗಾವಲಿನಲ್ಲಿ ಕೆಲಸ ಶುರು ಮಾಡುವಂತೆ ಹಳ್ಳಿಯ ಕೊಯ್ಲುಗಾರರಿಗೆ ಹೇಳಿಕಳಿಸಬೇಕೆಂದು ಅವನಿಗೆ ಆಜ್ಞೆ ಮಾಡಿದನು.

'ನನ್ನ ಕುಡುಗೋಲನ್ನು ಪ್ರೊಖಾರ್‌ನಲ್ಲಿಗೆ ಕಳಿಸಿ, ನಾಳೆಯೇ ಸಾಣೆ ಹಿಡಿದು ತರುವಂತೆ ಹೇಳಿಕಳಿಸು; ನಾನು ಸಹ ಕೆಲಸಕ್ಕೆ ಹೋಗುವ ಸಾಧ್ಯತೆಯಿದೆ' ಎಂದವನು ತನ್ನ ಮನಸ್ಸಿನ ಪೇಚಾಟವನ್ನು ಮುಚ್ಚಿಕೊಳ್ಳಲು ಪ್ರಯತ್ನಿಸಿದನು.

ಪಾರುಪತ್ಯಗಾರ ನಕ್ಕನು. 'ಸರಿ, ಬುದ್ಧಿ' ಎಂದು ನುಡಿದನು.

ಸಂಜೆ ಚಹ ಸಮಯದಲ್ಲಿ ಲೆವಿನ್ ತನ್ನಣ್ಣನಿಗೆ ಆ ವಿಷಯ ತಿಳಿಸಿದನು. 'ಇದೇ ರೀತಿ ಒಳ್ಳೆಯ ಹವೆ ಮುಂದುವರಿಯುವುದೆಂದು ತೋರುತ್ತದೆ. ನಾಳೆಯೇ ಮೇವಣಿಗೆಗೆ ತೊಡಗುತ್ತೇನೆ.'

'ಅಂಥ ದುಡಿಮೆ ನನಗೂ ಇಷ್ಟವಾದದ್ದೇ' ಎಂದು ಕೊಜ್ನಿಶೆವ್ ನುಡಿದನು.

'ನನಗು ಸಹ. ಕೆಲವೊಮ್ಮೆ ನಾನೂ ರೈತರೊಡನೆ ದುಡಿಯುತ್ತೇನೆ. ನಾಳೆ ಇಡೀ ದಿನ ಅವರೊಂದಿಗೆ ಕೊಯ್ಲು ನಡಸಬೇಕೆಂದು ಉದ್ದೇಶಿಸಿದ್ದೇನೆ.'

ಕೊಜ್ನಿಶೆವ್ ತಲೆಯೆತ್ತಿ, ಕುತೂಹಲದಿಂದ ತನ್ನ ತಮ್ಮನತ್ತ ನೋಡಿದನು. 'ಇಡೀ ದಿನ ರೈತರೊಡನೆ ನೀನು ದುಡಿಯುವೆಯಾ ?....ಹೌದೆ ?'

'ಓ, ಹೌದು. ನಿಜಕ್ಕೂ ಅದರಿಂದ ಆನಂದವಾಗುತ್ತದೆ.'

'ಅದೊಂದು ಅತ್ಯುತ್ತಮವಾದ ಶಾರೀರಕ ವ್ಯಾಯಾಮ, ನಿಜ. ಆದರೆ ನಿನ್ನಲ್ಲಿಷ್ಟು ಕಷ್ಟ ಸಹಿಷ್ಣುತೆ ಇದೆಯೆ ?' ಎಂದು ಕೊಜ್ನಿಶೆವ್ ಗಂಭೀರವಾಗಿ ಪ್ರಶ್ನಿಸಿದನು.

'ನಾನಾಗಲೇ ಪ್ರಯತ್ನ ನಡೆಸಿದ್ದೇನೆ. ಮೊದಮೊದಲು ಕಷ್ಟವಾಗುತ್ತದೆ, ನಿಜ. ಆದರೆ ಕ್ರಮೇಣ ಹೊಂದಿಕೆಯಾಗುತ್ತದೆ. ಆ ಕಾರ್ಯದಲ್ಲಿ ಹಿಂದೆ ಬೀಳುವುದಿಲ್ಲವೆಂದು ನಾನು ಭರವಸೆ ನೀಡುತ್ತೇನೆ.'

'ಸರಿ, ಸರಿ! ಆ ಬಗ್ಗೆ ರೈತರ ಅಭಿಪ್ರಾಯವೇನು, ಹೇಳು? ತಮ್ಮ ದಣಿ ವಿಚಿತ್ರ ವ್ಯಕ್ತಿಯೆಂದವರು ತಮಾಷೆ ಮಾಡುತ್ತಾರಲ್ಲವೆ?'

'ಇಲ್ಲ. ನಾನು ಆ ರೀತಿ ಯೋಚಿಸುವುದಿಲ್ಲ. ಆದರದು ಮನಸ್ಸಿಗೆ ತುಂಬ ಆನಂದ ಕೊಡುವ ಕೆಲಸ. ಅದು ಕಠಿಣವಾದ ಕೆಲಸವೂ ಅಹುದು. ಅದರಿಂದಾಗಿ ಆ ಬಗ್ಗೆ ಯೋಚಿಸಲು ಪುರಸೊತ್ತು ಸಹ ಇಲ್ಲ.'

'ಅವರ ಜತೆಯಲ್ಲಿಯೇ ನೀನು ತಿಂಡಿತೀರ್ಥ ಮುಗಿಸುವೆಯೇನು? ಮಧ್ಯಾಹ್ನದ ನಿನ್ನ ಊಟಕ್ಕೆ ಟರ್ಕಿ ಕೋಳಿಯ ಹುರಿದ ಮಾಂಸವನ್ನು ಫ್ರೆಂಚ್ ಮದ್ಯವನ್ನು ಕಳಿಸು ವುದೆಂದರೆ ಮುಜುಗರವಾಗುತ್ತದಲ್ಲವೆ?'

'ಊಟಕ್ಕಾಗಿ ಮನೆಗೆ ಬರುತ್ತೇನೆ.'

ಮಾರನೆಯ ಬೆಳಗ್ಗೆ ಎಂದಿಗಿಂತ ಮುಂಚೆಯೇ ಲೆವಿನ್ ಹಾಸುಗೆಯಿಂದೆದ್ದನು; ಬೇಸಾಯದ ಬಗ್ಗೆ ಸಲಹೆ ನೀಡುವ ಹೊತ್ತಿಗೆ ತಡವಾಯಿತು. ಹುಲ್ಲುಗಾವಲ ಬಳಿ ಬಂದಾಗ ಆಳುಗಳು ಎರಡನೆಯ ಸಾಲಿನ ಹುಲ್ಲು ಕೊಯ್ಯುತ್ತಿದ್ದರು.

ಗುಡ್ಡದ ತುದಿಯಿಂದ ಆದರ ತಪ್ಪಲಲ್ಲಿ ಕಟಾವುಮಾಡಿ ಮುಗಿಸಿದ್ದ ಕ್ಷೇತ್ರದ ದೃಶ್ಯ ಅವನಿಗೆ ಗೋಚರಿಸಿತು. ಅದರ ಮೇಲಿನ್ನೂ ನೆರಳು ಚಾಚಿಕೊಂಡಿತ್ತು. ಕಟಾವು ಗೊಂಡ ಹುಲ್ಲು ಹರಿಗಳು ಬೂದು ಬಣ್ಣದ ಸಾಲುಗಳಂತೆ ಕಾಣುತ್ತಿದ್ದುವು; ಕೆಲಸದ ಪ್ರಾರಂಭದಲ್ಲಿ ನೆಲದಮೇಲೆ ಬಿಸಾಡಿದ್ದ ಗಂಡಸರ ಕೋಟುಗಳು ಕಪ್ಪು ಚುಕ್ಕೆಗಳಂತೆ ತೋರುತ್ತಿದ್ದುವು.

ಹತ್ತಿರ ಹೋದಂತೆಲ್ಲ, ಒಬ್ಬರ ಹಿಂದೊಬ್ಬರಾಗಿ, ಮನುಷ್ಯರ ಸುದೀರ್ಘಪಂಕ್ತಿ ಮುಂದೆ ಮುಂದೆ ಚಲಿಸುತ್ತಿದ್ದಂತೆ ಅವನಿಗೆ ಕಂಡಿತು. ಆ ಆಳುಗಳಲ್ಲಿ ಕೆಲವರು ಕೋಟು ಧರಿಸಿದ್ದರು, ಕೆಲವರು ಷರಟು ತೊಟ್ಟಿದ್ದರು; ಪ್ರತಿಯೊಬ್ಬನೂ ತನಗೆ ತಿಳಿದ ರೀತಿಯಲ್ಲಿ ಕುಡುಗೋಲನ್ನು ಬಳಸುತ್ತಿದ್ದನು. ಅವನು ಆಳುಗಳನ್ನೆಣಿಸಿದಾಗ ನಲವತ್ತೆರಡು ಮಂದಿ ಇದ್ದರು.

ಹಳೆಯ ಏರಿಯಿದ್ದ ಸಪಾಟಲ್ಲದ ತಗ್ಗು ಪ್ರದೇಶದಲ್ಲವರು ನಿದಾನವಾಗಿ ಮುಂಚಲಿ ಸುತ್ತಿದ್ದರು. ಲೆವಿನ್ ತನ್ನ ಕೆಲವು ರೈತರನ್ನು ಗುರುತು ಹಿಡಿದನು. ಉದ್ದನೆಯ ಬಿಳಿಯ ಷರಟನ್ನು ಧರಿಸಿದ ಮುದುಕ ಎರ್ಮಿಲ್ ಅಲ್ಲಿದ್ದನು; ಕುಡುಗೋಲನ್ನು ಬೀಸುವಾಗ ಅವನ ಇಡೀ ದೇಹವೇ ಬಾಗಿಕೊಂಡಂತೆ ಕಾಣುತ್ತಿತ್ತು. ಲೆವಿನ್‌ನ ಗಾಡಿಯಾಳು ತರುಣ ವಾಸ್ಕನೂ ಅಲ್ಲಿದ್ದನು; ಇಡೀ ಸಾಲುಗಳನ್ನೆ ಚಕ್ಕನೆ ಕತ್ತರಿಸುವವನಂತೆ ಅವನು ಭಯಂಕರ ರೀತಿಯಲ್ಲಿ ಕುಡುಗೋಲನ್ನು ಬೀಸುತ್ತಿದ್ದನು. ಕೊಯ್ಲಿನ ಕಲೆಯನ್ನು ಲೆವಿನ್‌ನಿಗೆ ಕಲಿಸಿಕೊಟ್ಟ ಸಣಕಲ ಮನುಷ್ಯ ಪ್ರೊಖಾರ್‌ನೂ ಅಲ್ಲಿದ್ದನು; ಅವನ ದೇಹ ನೆಟ್ಟಗಿತ್ತು; ಆಟದ ಸಾಮಾನೆನ್ನುವಂತೆ ಕುಡುಗೋಲನ್ನು ಝುಳಪಿಸುತ್ತ, ಅಗಲ ವಾಗಿ ಸಾಲನ್ನು ಕೊಯ್ಯುತ್ತ, ಅವನು ಪಂಕ್ತಿಯಲ್ಲಿ ಮುಂಬದ್ದನು.

ಲೆವಿನ್ ಕುದುರೆಯಿಂದಿಳಿದನು; ಅದನ್ನು ರಸ್ತೆಯ ಬಳಿ ಕಟ್ಟಿಹಾಕಿದನು; ಪ್ರೊಖಾರ್‌ನ ಪಕ್ಕಕ್ಕೆ ಸರಿದನು; ಪ್ರೊಖಾರ್ ಪೊದೆಯಿಂದ ಮತ್ತೊಂದು ಕುಡು ಗೋಲನ್ನು ತೆಗೆದುಕೊಂಡು, ಅವನ ಮುಂದೆ ಹಿಡಿದನು.

'ಇದು ಸಿದ್ಧವಾಗಿದೆ, ಒಡೆಯ; ಕ್ಷುರದಂತೆ ಹರಿತವಾಗಿದೆ, ಸೋಕಿದರೆ ಸಾಕು ಕತ್ತರಿಸುತ್ತದೆ.' ಎಂದು ಪ್ರೊಖೊರ್ ಸುಸ್ಮಿತನಾಗಿ, ತನ್ನ ಟೋಪಿಯನ್ನು ತೆಗೆದು, ಕುಡುಗೋಲನ್ನವನ ಕೈಗೆ ಕೊಟ್ಟನು.

ಲೆವಿನ್ ಅದನ್ನು ತೆಗೆದುಕೊಂಡು, ಪ್ರಯೋಗಿಸಿದನು. ತಂತಮ್ಮ ಸಾಲುಗಳನ್ನು ಮುಗಿಸುತ್ತಿದ್ದಂತೆ ಸೋಲ್ಲಾಸದ, ಬೆವರೊದ್ದೆ ಮುದ್ದೆಯ ಕೊಯ್ಲಾಳುಗಳು ಒಬ್ಬೊಬ್ಬರಾಗಿ ರಸ್ತೆಗೆ ಬಂದು, ತಮ್ಮ ಒಡೆಯನನ್ನು ನೋಡಿ, ಹಾಸ್ಯೋದ್ಗಾರ ತೆಗೆದರು. ಎಲ್ಲರೂ ಅವನನ್ನು ಕದ್ದು ನೋಡಿದರೆ ಹೊರತು, ಯಾರೊಬ್ಬರೂ ತುಟಿಪಿಟಕ್ಕೆನ್ನಲಿಲ್ಲ. ಕುರಿದೊಗಲು ಕೋಟು, ಗಡ್ಡವಿಲ್ಲದ ಸುಕ್ಕು ಮೋರೆಯ ಉದ್ದನೆಯ ಮುದುಕನೊಬ್ಬ ಕೊನೆಗೆ ಲೆವಿನ್‌ನ ಬಳಿ ಬಂದು ಮಾತು ತೆಗೆದನು 'ಲಗಾಮನ್ನೊಮ್ಮೆ ಕೈಗೆತ್ತಿಕೊಂಡ ಮೇಲೆ ಹಿಂದೆ ಬೀಳಬಾರದು, ಒಡೆಯ. ಆ ಬಗ್ಗೆ ಎಚ್ಚರಿಕೆಯಿರಲಿ!' ಆಳುಗಳ ಅದುಮಿದ ನಗು ಲೆವಿನ್‌ಗೆ ಕೇಳಿಸಿತು.

'ಹಿಂದೆ ಬೀಳದಂತೆ ಪ್ರಯತ್ನಿಸುತ್ತೇನೆ' ಎಂದವನು ಪ್ರೊಖೊರ್‌ನ ಹಿಂದುಗಡೆ ನಿಂತುಕೊಂಡು, ಕೊಯ್ಲು ಪ್ರಾರಂಭಿಸಲು ತವಕಿಸುತ್ತಿದ್ದನು.

'ಎಚ್ಚರಿಕೆ!' ಎಂದು ಮುದುಕ ಪುನರುಕ್ತಿಸಿದನು.

ಪ್ರೊಖೊರ್ ಮೊದಲು ಹುಲ್ಲು ಕೊಯ್ದು, ಜಾಗ ಮಾಡಿದನು; ಲೆವಿನ್ ಅವನನ್ನನುಸರಿಸಿದನು. ಹಾದಿಯ ಮಗ್ಗುಲ ಹುಲ್ಲು ತುಂಡಾಗಿತ್ತು; ಬಹುದಿನಗಳಿಂದ ಅಭ್ಯಾಸ ತಪ್ಪಿ ಹೋಗಿದ್ದು, ಎಲ್ಲರೂ ತನ್ನ ಕಡೆ ನೋಡುತ್ತಿದ್ದುದರಿಂದ ಕಕ್ಕಾಬಿಕ್ಕಿಯಾಗಿದ್ದ ಲೆವಿನ್ ಕುಡುಗೋಲನ್ನು ಬಲವಾಗಿ ಬೀಸುತ್ತಿದ್ದರೂ, ಮೊದಮೊದಲು ಹುಲ್ಲನ್ನು ಸಸಿನವಾಗಿ ಕೊಯ್ಯುತ್ತಿರಲಿಲ್ಲ.

ಹಿಂದುಗಡೆಯಿಂದ ಹಲವು ಧ್ವನಿಗಳು ಅವನ ಕಿವಿಯ ಮೇಲೆ ಬಿದ್ದುವು: 'ಕುಡುಗೋಲನ್ನು ಸರಿಯಾಗಿ ಹಿಡಿದುಕೊಂಡಿಲ್ಲ; ಹಿಡಿಯನ್ನು ತುಂಬ ಮೇಲಕ್ಕೆತ್ತರಿಸಲಾಗಿದೆ. ಅದು ಕೂಡದು. ಅವರೆಷ್ಟು ಬಗ್ಗುತ್ತಿದ್ದಾರೆ, ನೋಡಿ' ಎಂದೊಬ್ಬ ನುಡಿದನು.

'ಹಿಡಿಕೆಯನ್ನು ಬಿಗಿಯಾಗಿ ನೂಕಿ' ಎಂದು ಮತ್ತೊಬ್ಬ ಕೂಗಿಕೊಂಡನು.

'ಎಲ್ಲವೂ ಸರಿಯಾಗಿದೆ. ಸ್ವಲ್ಪ ಸಮಯ ಹಿಡಿಯುತ್ತದೆ.' ಎಂದು ಮುದುಕ ಸೊಲ್ಲಿಸಿದನು. 'ಅಗೋ ನೋಡಿ, ಅವರು ಮುಂದುವರಿಯುತ್ತಿದ್ದಾರೆ. ಸಾಲು ಅಗಲವಾಯಿತು, ದಣಿ. ನಿಮಗೆ ಬೇಗ ದಣಿವಾಗುತ್ತದೆ....ನೀವು ಕೊಯ್ಯುವ ರೀತಿ ಸರಿಯಿಲ್ಲ. ನಿಮ್ಮ ಹುಲ್ಲಿನ್ನೂ ನೆಲದಲ್ಲಿಯೇ ಇದೆ. ಅದು ನಿಮ್ಮ ಕುಡುಗೋಲಿಗೆ ತಪ್ಪಿಸಿಕೊಳ್ಳುತ್ತದೆ. ನಾವೇನಾದರೂ ಹಾಗೆ ಮಾಡಿದ್ದಾದರೆ, ನಮ್ಮನ್ನು ಯಾರೂ ಸುಮ್ಮನೆ ಬಿಡುವುದಿಲ್ಲ.'

ಈಗ ಹುಲ್ಲು ತುಸು ಮೃದುವಾಗಿ ಕಂಡಿತು. ಲೆವಿನ್ ಪ್ರೊಖೊರ್‌ನನ್ನು ಹಿಂಬಾಲಿಸಿದನು. ಜನರ ಮಾತುಗಳನ್ನಾಲಿಸುತ್ತ, ಪಡಿನುಡಿಯದೆಯೆ, ತನ್ನ ಕೆಲಸವನ್ನು ಉತ್ತಮಪಡಿಸುವ ಸಲುವಾಗಿ ಶಕ್ತಿಮೀರಿ ದುಡಿದನು. ಇದೇ ರೀತಿಯಲ್ಲವರು ಸುಮಾರು ನೂರು ಹೆಜ್ಜೆ ಮುಂದುವರಿದರು. ಅವಿರಾಮವಾಗಿ, ನಿರಾಯಾಸವಾಗಿ ಪ್ರೊಖೊರ್ ಮುಂದುವರಿದನು. ಒಂದೇ ಸಮನೆ ಮುಂದುವರಿಯುವುದಸಾಧ್ಯವೆಂದು ಲೆವಿನ್ ಭಯಗೊಂಡನು.

ಅಷ್ಟು ಹೊತ್ತಿಗಾಗಲೇ ಅವನು ತುಂಬ ದಣಿದಿದ್ದನು. ತನ್ನಲ್ಲುಳಿದಿದ್ದ ಕೊಟ್ಟಕೊನೆಯ ಶಕ್ತಿಯನ್ನು ಒಗ್ಗೂಡಿಸಿಕೊಂಡು ಕುಡುಗೋಲನ್ನು ಬಳಸುತ್ತಿದ್ದಂತೆ ಅವನು ಭಾವಿಸಿದನು; ಕೆಲಸಕ್ಕೆ ತುಸು ವಿರಾಮ ಕೊಡುವಂತೆ ಪ್ರೊಖಾರ್‌ನನ್ನು ಕೇಳಲು ನಿಶ್ಚಯಿಸಿಕೊಂಡನು. ಆದರೆ ಅದೇ ಸಮಯಕ್ಕೆ ಸರಿಯಾಗಿ ಪ್ರೊಖಾರ್ ಕೆಲಸ ನಿಲ್ಲಿಸಿ, ನಾಲ್ಕು ಕಡ್ಡಿ ಹುಲ್ಲನ್ನು ಸೆಳೆದುಕೊಳ್ಳಲು ತುಸು ಬಾಗಿದನು; ಆ ಹುಲ್ಲಿನಿಂದ ಕುಡುಗೋಲನ್ನೊರಸಿ, ಅದನ್ನು ಕಲ್ಲಿನ ಮೇಲೆ ಮಸೆದನು. ಲೆವಿನ್ ನೆಟ್ಟಗೆ ನಿಂತು, ನಿಟ್ಟುಸಿರೆಳೆದು, ಸುತ್ತಲೂ ನೋಡಿದನು. ಅವನ ಹಿಂದಿದ್ದ ಆಳೂ ತುಂಬ ದಣಿವಿದ್ದುದರಿಂದ, ಲೆವಿನ್‌ನನ್ನು ಸಮೀಪಿಸುವ ಮುನ್ನವೇ ಕೆಲಸ ನಿಲ್ಲಿಸಿ, ಕುಡುಗತ್ತಿ ಮಸೆಯ ತೊಡಗಿದನು. ಪ್ರೊಖಾರ್ ತನ್ನ ಮತ್ತು ಲೆವಿನ್‌ನ ಕತ್ತಿಗಳನ್ನು ಹರಿತಗೊಳಿಸಿದನು. ಇಬ್ಬರೂ ಕೆಲಸಕ್ಕೆ ಮರಳಿದರು.

ಹಿಂದಿನಂತೆಯೇ ಅವರು ಮುಂದೆ ಮುಂದೆ ಸಾಗಿದರು. ಕೆಲಸ ನಿಲ್ಲಿಸದೆ, ದಣಿಯದೆ, ಲಯಬದ್ಧವಾಗಿ ಕುಡುಗತ್ತಿಯನ್ನು ಬೀಸುತ್ತ ಪ್ರೊಖಾರ್ ಮುಂಚಲಿಸಿದನು. ಲೆವಿನ್ ಅವನನ್ನು ಹಿಂಬಾಲಿಸಿದನು; ಹಿಂಜೀಳಬಾರದೆಂದು ಅವನು ಪ್ರಯತ್ನಿಸಿದನು; ಆದರೆ ಹೆಜ್ಜೆ ಹೆಜ್ಜೆಗೂ ಅದು ಕಷ್ಟವಾಯಿತು. ಮುಂದೆ ತನ್ನ ಕೈಯಲ್ಲಾಗದೆನ್ನುವಷ್ಟರ ಮಟ್ಟಿಗೆ ಅವನು ಸುಸ್ತಾದನು. ತನ್ನ ಕತ್ತಿಯನ್ನು ಮಸೆಯುವ ಸಲುವಾಗಿ ಪ್ರೊಖಾರ್ ಮತ್ತೆ ಕೆಲಸ ನಿಲ್ಲಿಸಿದನು.

ಇಂಥ ಸ್ಥಿತಿಯಲ್ಲಿ ಅವರು ಮೊದಲನೆಯ ಪಂಕ್ತಿಯ ಕೊನೆಯನ್ನು ಮುಟ್ಟಿದರು. ಈ ಮೊದಲ ಉದ್ದನೆಯ ಸಾಲಿನಲ್ಲಾದಷ್ಟು ಶ್ರಮ ಲೆವಿನ್‌ನಿಗೆ ಮುಂದಿನ ಸಾಲಿನಲ್ಲಾಗಲಿಲ್ಲ. ಮೊದಲ ಸಾಲಿನ ಕೊನೆ ಮುಟ್ಟಿದಾಗ, ಪ್ರೊಖಾರ್ ತನ್ನ ಕುಡುಗತ್ತಿಯನ್ನು ಭುಜದ ಮೇಲೆ ತೂಗಾಡಿಸುತ್ತ, ಕೊಯ್ದ ಹುಲ್ಲಿನ ಮೇಲೆ ಅಂಕಿತಗೊಂಡಿದ್ದ ಹೆಜ್ಜೆಯ ಜಾಡಿನಲ್ಲಿ ನಿಧಾನವಾಗಿ ಮರಳಿದನು. ಲೆವಿನ್ ಸಹ ತನ್ನ ಜಾಡಿನಲ್ಲಿಯೇ ಮರಳಿದನು; ಬೆವರು ಮುಖದ ಮೇಲೆ ಹರಿದು, ಮೂಗಿನ ತುದಿಯಲ್ಲಿ ತೊಟ್ಟಿಕ್ಕುತ್ತಿದ್ದರೂ, ನೀರಿನಲ್ಲಿದ್ದಂತೆ ಷರಟಿನ ಬೆನ್ನು ತೊಯ್ದಿದ್ದರೂ ಅವನು ಆನಂದೋಲ್ಲಾಸದಿಂದ ಕೂಡಿದ್ದನು. ತಾನಿನ್ನು ಶ್ರಮವನ್ನು ಸಹಿಸಿಕೊಳ್ಳಬಹುದೆಂಬ ಧೈರ್ಯವೂಡಿದ್ದರಿಂದ ಅವನು ವಿಶೇಷತಃ ಹರ್ಷಾನ್ವಿತನಾಗಿದ್ದನು.

ಅವನ ಸಂತೋಷಕ್ಕೆ ಭಂಗತಂದಿದ್ದ ಒಂದೇ ಒಂದು ಸಂಗತಿಯೆಂದರೆ, ಅವನ ಸಾಲು ಅಚ್ಚುಕಟ್ಟಾಗಿರಲಿಲ್ಲ. 'ನನ್ನ ತೋಳುಗಳನ್ನು ಹೆಚ್ಚಾಗಿ ಅಲುಗಿಸದೆ, ದೇಹವನ್ನು ಮಾತ್ರ ತೊನೆಯುತ್ತೇನೆ' ಎಂದವನು ಒಡ್ಡೊಡ್ಡಾದ ಒಪ್ಪ ಓರಣಗಳಿಲ್ಲದ ತನ್ನ ಸಾಲನ್ನು ಹುಲ್ಲಿನ ಸಳೊಂದೂ ಇಲ್ಲದೆ ಚೊಕ್ಕಟವಾಗಿದ್ದ ಪ್ರೊಖಾರ್‌ನ ಸಾಲಿನೊಡನೆ ಹೋಲಿಸುತ್ತ, ಯೋಚಿಸಿದನು.

ತನ್ನ ದಣಿಯನ್ನು ಪರೀಕ್ಷೆಗೀಡುಮಾಡಲೆಂಬಂತೆ ಸುದೀರ್ಘವಾದ ಮೊತ್ತಮೊದಲ ಸಾಲಿನಲ್ಲಿ ಪ್ರೊಖಾರ್ ಬಿರುಬೇಗ ಮುಂದುವರಿಯುತ್ತಿದ್ದುದನ್ನು ಲೆವಿನ್ ಸಂವೀಕ್ಷಿಸಿದನು. ಅನಂತರದ ಸಾಲುಗಳು ಸುಲಭವಾಗಿದ್ದರೂ, ಇತರರಿಗೆ ಸಮಭುಜವಾಗಿ ಮುಂಚಲಿಸಲು ಲೆವಿನ್ ಶಕ್ತಿಮೀರಿ ಶ್ರಮಿಸಬೇಕಾಗಿತ್ತು.

ಅನ್ಯವಿಷಯಗಳ ಕಡೆಗೆ ಅವನ ಆಲೋಚನೆ ಹರಿಯಲಿಲ್ಲ; ರೈತರ ಹಿಂದೆ ಬೀಳದೆ, ತನ್ನ ಕೆಲಸವನ್ನು ಚುರುಕುಗೊಳಿಸುವುದೊಂದೆ ಅವನ ಸರ್ವೋದ್ದೇಶವಾಗಿತ್ತು. ಕತ್ತಿಯ ಕೊಚ್ಚುಸದ್ದಲ್ಲದೆ ಬೇರೇನೂ ಅವನಿಗೆ ಕೇಳಿಸುತ್ತಿರಲಿಲ್ಲ; ತನ್ನ ಮುಂದೆ ಸಾಗುತ್ತಿದ್ದ ಪ್ರೊಖರ್‌ನ ಊರ್ಧ್ವಾಕೃತಿಯಲ್ಲದೆ, ಕೊಯ್ದ ಒಣಹುಲ್ಲಿನ ಅರ್ಧವೃತ್ತಗಳಲ್ಲದೆ, ಮೆಲ್ಲಗಿನ ತೆರೆಗಳಂತೆ ಓಲಾಡುತ್ತಿದ್ದ ಹುಲ್ಲಲ್ಲದೆ, ಕತ್ತಿಯ ಬಾಯಿಗೆ ಸಿಕ್ಕಿ ಲಯಬದ್ಧವಾಗಿ ನೆಲಕ್ಕೆ ಬಾಗುತ್ತಿದ್ದ ಹೂವುಗಳಲ್ಲದೆ, ತನ್ನ ಮುಂದಿದ್ದ, ವಿಶ್ರಾಂತಿಯನ್ನು ತೆಗೆದುಕೊಳ್ಳ ಬಹುದಾಗಿದ್ದ ಪಂಕ್ತಿಯ ತುದಿಯಲ್ಲದೆ ಅವನ ಕಣ್ಣಿಗೆ ಬೇರೇನೂ ಬೀಳುತ್ತಿರಲಿಲ್ಲ.

ಕೊಯ್ಲಿನ ಕೆಲಸದ ನಡುವೆ, ಸುಡುತ್ತಿದ್ದ ಹೆಗಲಮೇಲೆ ಇದ್ದಕ್ಕಿದ್ದಂತೆ ಹಿತಕರವಾದ ತಂಪು ಕಾಣಿಸಿಕೊಂಡಿತು. ಅದು ಎಲ್ಲಿಂದ, ಹೇಗೆ ಕಾಣಿಸಿಕೊಂಡಿತೆಂಬುದು ತಿಳಿಯ ಲಿಲ್ಲ. ಕತ್ತಿ ಮಸೆಯಲು ಆಳುಗಳು ಕೆಲಸ ನಿಲ್ಲಿಸಿದಾಗ ಅವನು ಆಗಸದ ಕಡೆಗೆ ಕಣ್ಣು ಮಿಟುಕಿಸಿದನು. ಭಾರವಾದ ಕೃಷ್ಣಮೇಘ ತೂಗಾಡುತ್ತಿತ್ತು ; ತೋರಹನಿಗಳು ಕೆಳಗೆ ಬೀಳುತ್ತಿದ್ದುವು. ಕೆಲವು ಕೊಯ್ಲಾಳುಗಳು ತಮ್ಮ ಕೋಟು ತೊಟ್ಟುಕೊಳ್ಳಲು ಹೋದರು ; ಚೈತನ್ಯದಾಯಿಯಾದ ಶೈತ್ಯಕ್ಕೆ ಸಂತೋಷದಿಂದ ತಮ್ಮ ಭುಜಗಳ ನ್ನೊಡ್ಡಲು ಲೆವಿನ್‌ನಂಥ ಜನರು ಉತ್ಸುಕರಾಗಿದ್ದರು.

ಅವರು ಸಾಲುಮೇಲೆ ಸಾಲು ಕೊಯ್ದರು. ಉದ್ದನೆಯ ಸಾಲುಗಳಾಗಲಿ, ತುಂಡು ಸಾಲುಗಳಾಗಲಿ, ಒರಟು ಹುಲ್ಲಾಗಲಿ, ಮೆತ್ತನೆಯ ಹುಲ್ಲಾಗಲಿ, ಯಾವುದೂ ತಡೆಯಲಿಲ್ಲ. ಲೆವಿನ್ ಕಾಲಪ್ರಜ್ಞೆಯನ್ನೆ ಮರೆತನು ; ಹಿಂಚೋ ಮುಂಚೋ ಎಂಬುದು ಸಹ ಅವನಿಗೆ ಗೊತ್ತಾಗಲಿಲ್ಲ. ಅವನ ಕಾರ್ಯ ವಿಧಾನದಲ್ಲಿ ತುಂಬ ಬದಲಾವಣೆ ಯಾಯಿತು ; ಅದರಿಂದ ಅವನಿಗೆ ಅಪಾರ ತೃಪ್ತಿಯಾಯಿತು. ತನ್ನನ್ನು ತಾನು ಮರೆತು ತನ್ನ ಕೆಲಸದಲ್ಲವನು ತಲ್ಲೀನನಾದಾಗ, ತಾನು ಮಾಡುತ್ತಿದ್ದ ಕೆಲಸವೂ ಮರೆತು ಹೋಗುತ್ತಿತ್ತು ; ಆಗವನಿಗೆ ಎಲ್ಲ ಕೆಲಸವೂ ಸರಾಗವಾಗಿ ತೋರುತ್ತಿತ್ತು ; ಆ ಸಮಯ ದಲ್ಲಿ ಪ್ರೊಖರ್‌ನ ಸಾಲುಗಳಂತೆ ಅವನ ಸಾಲುಗಳು ಸಹ ಸಮತಟ್ಟಾಗಿ, ಓರಣ ವಾಗಿರುತ್ತಿದ್ದುವು. ಆದರೆ ತಾನು ಜರುಗಿಸುತ್ತಿದ್ದ ಕೆಲಸವನ್ನು ಕುರಿತು ಆಲೋಚಿಸಿ, ಅದನ್ನು ಅತ್ಯುತ್ತಮ ರೀತಿಯಲ್ಲಿ ನೆರವೇರಿಸಲು ಪ್ರಯತ್ನಿಸಿದಾಗಲೇ ಕಷ್ಟಕ್ಲೇಶಗಳ ಅರಿವಾಗಿ, ಫಲಿತಾಂಶ ನಿಕೃಷ್ಟವಾಗುತ್ತಿತ್ತು. ಮುಂದಿನ ಪಂಕ್ತಿಯ ಕೊಯ್ಲು ಮುಗಿಯಿತು. ಮತ್ತೊಂದು ಸಾಲಿಗೆ ಅವನು ಹಿಂದಿರುಗುವಷ್ಟರಲ್ಲಿ ಪ್ರೊಖರ್ ಅವನನ್ನು ತಡೆದು ನಿಲ್ಲಿಸಿ, ಮುದುಕನ ಬಳಿ ಸರಿದು, ಅವನ ಕಿವಿಯಲ್ಲಿ ಏನನ್ನೊ ಪಿಸುಗುಟ್ಟಿದನು. ಇಬ್ಬರೂ ಸೂರ್ಯನ ಕಡೆಗೆ ಕಣ್ಣೋಡಿಸಿದರು. 'ಅವರು ಯಾ. ವಿಷಯ ಕುರಿತು ಮಾತಾಡುತ್ತಿದ್ದಾರೆ ? ಅವನೇಕೆ ಹಿಂದಕ್ಕೆ ಬಂದಿಲ್ಲ ?' ಎಂದು ಲೆವಿನ್ ಬಗೆದನು. ನಿಬುಗಡೆಯಿಲ್ಲದೆ ನಾಲ್ಕು ಗಂಟೆಗಳಿಗೂ ಮಿಕ್ಕು ರೈತರು ಕಟಾವು ಮಾಡು ತ್ತಿದ್ದುದಾಗಲಿ, ತಂಗಳೂಟಕ್ಕೆ ಹೊತ್ತಾಯಿತೆನ್ನುವುದಾಗಲಿ ಅವನ ಊಹೆಗೆ ನಿಲುಕ ಲಿಲ್ಲ.

'ಕುಯ್ಲೊತ್ತಿನ ಊಟಕ್ಕೆ ಹೊತ್ತಾಯಿತು, ದಣಿಗಳೆ' ಎಂದು ಮುದುಕ ನುಡಿದನು.

'ನಿಜಕ್ಕೂ ಹೊತ್ತಾಯಿತೇನು ? ಆಗಲಿ.'

ಲೆವಿನ್ ತನ್ನ ಕುಡುಗತ್ತಿಯನ್ನು ಪ್ರೊಖಾರ್‌ನ ಕೈಗೆ ಕೊಟ್ಟನು. ತಮ್ಮ ಕೋಟು ಮತ್ತು ಊಟದ ಕುಕ್ಕೆಗಳಿದ್ದಲ್ಲಿಗೆ ಆಳುಗಳು ಹೊರಟರು. ತನ್ನ ಕುದುರೆಯ ಬಳಿ ಹೋಗುವ ಸಲವಾಗಿ ಲೆವಿನ್‌ನೂ ಅವರ ಜತೆಯಲ್ಲಿ ಹೊರಟನು. ಮಳೆಯಿಂದ ತೊಯ್ದಿದ್ದ, ಹೊಸದಾಗಿ ಕೊಯ್ದಿದ್ದ ಹುಲ್ಲಿನ ಹರಹನ್ನವರು ದಾಟಿದರು. ಹವೆ ಹಿತಕರವಾಗಿದೆಯೆಂದು ತಾನು ತಪ್ಪು ತಿಳಿದುಕೊಂಡಿದ್ದುದಾಗಿ ಆದೆ ತಾನೆ ಲೆವಿನ್‌ನಿಗೆ ಮನವರಿಕೆಯಾಯಿತು. ಹುಲ್ಲು ತೊಯ್ದಿತ್ತು.

'ಹುಲ್ಲು ಕೆಡುತ್ತದೆ' ಎಂದವನು ನುಡಿದನು.

'ಭಯ ಪಡಬೇಡಿ, ದಣಿಗಳೆ: "ಮಳೆಯಲ್ಲಿ ಕೊಯ್ಸಿ, ಬಿಸಿಲಿನಲ್ಲಿ ಒಣಗಿಸಿ" ಎಂದು ಮುದುಕ ನುಡಿದನು. ಲೆವಿನ್ ಕುದುರೆಯನ್ನು ಬಿಚ್ಚಿ ಕಾಫಿಗಾಗಿ ಮನೆಯ ಕಡೆಗೆ ಸವಾರಿಸಿದನು.

ಕೊಜ್ನಿಶೆವ್ ಅದೆತಾನೆ ಹಾಸುಗೆಯಿಂದ ಮೇಲೇಳುತ್ತಿದ್ದನು. ಲೆವಿನ್ ಬೇಗ ಬೇಗ ಕಾಫಿ ಮುಗಿಸಿ, ತನ್ನಣ್ಣ ಬಟ್ಟೆ ಹಾಕಿಕೊಂಡು, ಊಟದ ಕೋಣೆಯನ್ನು ಪ್ರವೇಶಿಸುವ ಮೊದಲೇ ಹುಲ್ಲೊಡ್ಡಿಗೆ ಹಿಂದಿರುಗಿದನು.

ಜ

ತಂಗಳೂಟದ ತರುವಾಯ ಲೆವಿನ್ ಹೊಸ ಸಾಲು ಹಿಡಿದನು. ತನ್ನನ್ನು ಸರಸದಿಂದ ಮಾತಾಡಿಸಿದ, ನೆರೆಹೊರೆಗೆ ಬರುವಂತೆ ಕರೆದ ಮುದುಕನ ಮತ್ತು ಶರತ್ಕಾಲದಲ್ಲಿ ಮದುವೆಯಾಗಿ, ಮೊತ್ತಮೊದಲ ಬಾರಿಗೆ ಕೊಯ್‌ಗೆಲಸಕ್ಕೆ ಬಂದಿದ್ದ ತರುಣ ರೈತನ ನಡುವೆ ಲೆವಿನ್ ಕೆಲಸ ಪ್ರಾರಂಭಿಸಿದನು.

ದೇಹವನ್ನು ನೆಟ್ಟಗೆ ನಿಗುರಿಸಿಕೊಂಡಿದ್ದ ಮುದುಕ ಮುಂದುಗಡೆ ಸಾಗುತ್ತಿದ್ದನು; ಆ ಈ ಕಡೆಗೆ ಕಿಸಿದುಕೊಂಡಿದ್ದ ಪಾದಗಳು ಕ್ರಮವಾಗಿ ದಾಪು ಹಾಕುತ್ತಿದ್ದುವು; ನಡಗೆಯಲ್ಲಿ ತೋಳುಗಳನ್ನು ತೂಗಾಡಿಸುವಷ್ಟೇ ಸಲೀಸಾಗಿ, ಆಟವೆನ್ನುವಂತೆ, ಸಕ್ರಮವಾಗಿ ಕರಾರುವಾಕ್ಕಾಗಿ ಅವನ ಕೆಲಸ ಜರುಗುತ್ತಿತ್ತು; ಕೆಲಸ ಮಾಡುತ್ತ ಅವನು ಹುಲ್ಲಿನ ಹರಿಗಳನ್ನು ಪೇರಿಸಿದನು.

ಯೌವನೋತ್ಸಾಹದ ಮಿಷ್ಕ ಲೆವಿನ್‌ನ ಹಿಂದಿದ್ದನು. ಕೂದಲು ಮುಂದೆ ಹಾರಾಡದಂತೆ ಅವನು ಹೊಸಹುಲ್ಲನ್ನು ಹುರಿಮಾಡಿ, ಹಣೆಯ ಸುತ್ತ ಸುಲಿದು ಕೊಂಡಿದ್ದನು. ಶ್ರಮದಾಯಕವಾದ ದುಡಿಮೆಯಿಂದಾಗಿ ಅವನ ಚೆಲುವುಮೊಗ ಗಂಟು ಹಾಕಿಕೊಂಡಿತ್ತು; ಆದರೆ ಯಾರಾದರೂ ನೋಡಿದೊಡನೆಯೇ ಮಂದಹಾಸ ಮುಗುಳೊಡೆಯುತ್ತಿತ್ತು. ತಾನು ಕೈಗೊಂಡಿದ್ದ ಕೆಲಸ ಕಷ್ಟವೆನ್ನುವುದಕ್ಕಿಂತ ಸಾಯಲು ಸಿದ್ಧನಾಗಿದ್ದನು.

ಈ ಇಬ್ಬರ ನಡುವೆ ಲೆವಿನ್ ತನ್ನ ಕೆಲಸದಲ್ಲಿ ತೊಡಗಿದ್ದನು. ಮಧ್ಯಾಹ್ನದ ಉರಿಬಿಸಿಲಿನಲ್ಲಿಯೂ ಅವನಿಗೆ ಕೊಯ್ಲು ಶ್ರಮದಾಯಕವಾಗಿ ಕಾಣಲಿಲ್ಲ. ರೋಮ ಕೂಪದಿಂದ ಹರಿಯುತ್ತಿದ್ದ ಬೆವರು ಸುಖಶೀತಲವಾಗಿತ್ತು. ಅವನ ಬೆನ್ನು, ತಲೆ, ಜೆತ್ತಲೆ ದೋಳುಗಳ ಮೇಲೆ ಸೂಸುತ್ತಿದ್ದ ಬಿಸಿಲು ಅವನಿಗೆ ಅಮ್ಮ ಜಿಗುಟುಗಳನ್ನು

ಒದಗಿಸಿತ್ತು. ಅಪ್ರಜ್ಞಾಪೂರ್ವಕವಾಗಿ ಕಾಯಕ ಸುಖವನ್ನನುಭವಿಸಿದಂತೆಲ್ಲ ಅವನು ತನ್ನ ಕೆಲಸವನ್ನು ಮರೆತು, ಅದರಲ್ಲಿಯೇ ಲೀನಗೊಂಡಿದ್ದನು. ಕುಡುಗತ್ತಿ ತಾನಾಗಿಯೇ ಕೆಲಸ ಜರುಗಿಸುತ್ತಿತ್ತು. ಇವು ಅವನ ಬದುಕಿನ ಆನಂದದ ಕ್ಷಣಗಳು. ಪಂಕ್ತಿಗಳ ಮೇರೆಯಲ್ಲಿದ್ದ ನದಿಯನ್ನು ತಲುಪಿ, ಹಿಡಿ ತೇವದ ಹುಲ್ಲಿನಲ್ಲಿ ಕತ್ತಿಯನ್ನೊರಸಿ, ಅದರ ಬಾಯನ್ನು ನದಿಯ ತಿಳಿನೀರಿನಲ್ಲಿ ತೊಳೆದು, ಮಸೆಗಲ್ಲಿನ ಪೆಟ್ಟಿಗೆಯಿಂದ ಒಂದಿಷ್ಟು ಪಾನೀಯವನ್ನು ಮೊಗೆದು ಮುದುಕ ಲೆವಿನ್‌ನಿಗೆ ಕೊಟ್ಟಾಗ ಅವನಿಗಾದ ಆನಂದ ಅಷ್ಟಿಷ್ಟಲ್ಲ.

'ಇಗೊ, ತುಸು ಬೀರಿದೆ: ಇದನ್ನು ಸವಿಯಿರಿ! ನಿಮಗಿಷ್ಟತಾನೆ?' ಎಂದು ಮುದುಕ ಲೆವಿನ್ ಕಡೆಗೆ ಕಣ್ಣು ಮಿಟುಕಿಸಿದನು.

ಲೆವಿನ್ ಸವಿಯುತ್ತಿದ್ದ ಬಿಸಿನೀರಿನಲ್ಲಿ ಹಸುರು ತುಣುಕುಗಳು ತೇಲುತ್ತಿದ್ದುವು; ತವರದ ಪೆಟ್ಟಿಗೆಯಿಂದ ಮಸ್ಸು ವಾಸನೆಯೂ ಸೂಸುತ್ತಿತ್ತು; ಅದರೊಡನೆ ಹೋಲಿಸಬಹುದಾದ ಪಾನೀಯವನ್ನೆಂದೂ ಸವಿದಿರಲಿಲ್ಲವೆಂದು ಲೆವಿನ್ ಯೋಚಿಸಿದನು. ಅದಾದ ಕೂಡಲೇ ಹೆಗಲ ಮೇಲೆ ತೂಗಾಡುತ್ತಿದ್ದ ಕುಡುಗತ್ತಿಯ ಮೇಲೆ ಕೈಯಿಟ್ಟುಕೊಂಡು ಅವನು ಸಂತೋಷದಿಂದ ನಿದಾನವಾಗಿ ತಿರುಗಾಡುತ್ತಿದ್ದನು. ತಿರುಗಾಟದ ಕಾಲದಲ್ಲವನು ತನ್ನ ಹುಬ್ಬಿನ ಬೆವರನ್ನೊರಸಿಕೊಳ್ಳುತ್ತಿದ್ದನು; ಒಳ್ಳೆಯ ಗಾಳಿಯನ್ನು ಸೇದಿ, ಶ್ವಾಸಕೋಶಗಳನ್ನು ತುಂಬಿಕೊಳ್ಳುತ್ತಿದ್ದನು; ಕೊಯ್ಯಾಳುಗಳ ಸುದೀರ್ಘ ಸೂತ್ರವನ್ನೂ ಕಾಡು ಹೊಲಗಳಲ್ಲಿ ನಡೆಯುತ್ತಿದ್ದ ಸಂಗತಿಗಳನ್ನೂ ಈಕ್ಷಿಸುತ್ತಿದ್ದನು.

ಕೊಯ್ಲು ಹೆಚ್ಚು ಹೊತ್ತು ಜರುಗಿದಂತೆಲ್ಲ ಅವನು ವಿಸ್ಮೃತಿಯಾನಂದದ ಕ್ಷಣಗಳನ್ನನುಭವಿಸುತ್ತಿದ್ದನು; ಆಗವನ ತೋಳುಗಳು ಕುಡುಗತ್ತಿಯನ್ನು ಝಳಪಿಸುತ್ತಿದ್ದುವೆನ್ನುವುದಕ್ಕಿಂತ, ಕುಡುಗತ್ತಿಯೇ ಅವನ ದೇಹವನ್ನು ಮುಂದೆ ಮುಂದೆ ಸೆಳೆದುಕೊಂಡು ಹೋಗುತ್ತಿತ್ತು; ಅವನ ದೇಹ ಜಾಗ್ರತಾವಸ್ಥೆಯಲ್ಲಿದ್ದುದಕ್ಕಿಂತ ಚೈತನ್ಯಯುಕ್ತವಾಗಿತ್ತು. ಮಂತ್ರಶಕ್ತಿಯಿಂದಲೇಬಂತೆ ಕೆಲಸದ ಬಗ್ಗೆ ಅರಿವಿಲ್ಲದೆಯೆ, ಅದು ಕ್ರಮಕ್ರಮವಾಗಿ ಜರುಗಿ, ತನ್ನಷ್ಟಕ್ಕೆ ತಾನೆ ಮುಕ್ತಾಯಗೊಂಡಿತು. ಇವು ಅವನ ಬದುಕಿನ ಪರಮಾನಂದದ ಕ್ಷಣಗಳಾಗಿದ್ದುವು.

ಅಪ್ರಜ್ಞಾಪೂರ್ವಕವಾದ ಚಲನೆಗಳನ್ನು ಭಂಗಗೊಳಿಸಿ, ಕೆಲಸದ ಬಗ್ಗೆ ಆಲೋಚಿಸಿದಾಗ ಅದು ತುಂಬ ಕಠಿನವಾಗಿ ತೋರುತ್ತಿತ್ತು; ದಿಣ್ಣೆಗಳ ಸುತ್ತ ಕೊಯ್ಯುವಾಗ, ಅಥವಾ ಪುಲ್ಲಂ ಪುರುಚಿ ಮೊದಲಾದ ಕಳೆಗಳನ್ನು ತೆಗೆಯುದಿದ್ದಾಗ ಏಕಾಗ್ರತೆಗೆ ಭಂಗಬರುತ್ತಿತ್ತು. ಮುದುಕ ಇವನ್ನು ಸಹ ಅತ್ಯಂತ ಸರಾಗವಾಗಿ ನಿರ್ವಹಿಸುತ್ತಿದ್ದನು. ಗುಡ್ಡೆ ಎದುರಾದಾಗ ಅವನು ತನ್ನ ಚಲನವಲನಗಳನ್ನು ಬದಲಾಯಿಸುತ್ತಿದ್ದನು; ಚುರುಕೇಟುಗಳಿಂದ ಅದರ ಎಲ್ಲ ಮಗ್ಗುಲುಗಳನ್ನೂ ಕತ್ತರಿಸುತ್ತ, ಒಮ್ಮೆ ಹಿಮ್ಮಡಿಯಿಂದ, ಮತ್ತೊಮ್ಮೆ ಕುಡುಗತ್ತಿಯ ಮೊನೆಯಿಂದ ಕೊಯ್ದು ಹುಲ್ಲನ್ನು ಹಿಂದುಹಿಂದಕ್ಕೆ ನೂಕುತ್ತಿದ್ದನು. ಈ ಎಲ್ಲ ಕೆಲಸಗಳಲ್ಲಿ ತೊಡಗಿರುವಾಗಲೇ ಅವನು ತನ್ನ ಮುಂದೆ ಏನೇನಿತ್ತೆಂಬುದರ ಬಗ್ಗೆ ಅವಧಾನದ ದೃಷ್ಟಿಯಿರಿಸಿಕೊಂಡಿದ್ದನು; ಕೆಲವೊಮ್ಮೆ ಬೆರಿ ಹಣ್ಣುಗಳನ್ನು ಕಿತ್ತು ತಿಂದು, ಲೆವಿನ್‌ನಿಗೂ ಕೊಡುತ್ತಿದ್ದನು; ಮತ್ತೊಮ್ಮೆ ತನ್ನ

ಕುಡುಗತ್ತಿಯ ಮೂಕಿಂದ ಎದುರಿಗೆ ಸಿಕ್ಕಿದ ಪುಳ್ಳೆನುಗ್ಗುಗಳನ್ನು ಚಿವ್ಮಿಸುತ್ತಿದ್ದನು; ಒಮ್ಮೆ ಗವುಜಗನ ಗೂಡನ್ನು ಪರಿಕಿಸುವ ಸಲುವಾಗಿ, ಕುಡುಗತ್ತಿಯ ತುದಿಯಿಂದ ಅದನ್ನು ಕಿಸಿಯುವಾಗ ತಾಯಿ ಹಕ್ಕಿ ಸರಕ್ಕನೆ ಹಾರಿಹೋಯಿತು; ಮತ್ತೆ ತನಗಡ್ಡ ವಾದ ಹಾವೊಂದನ್ನು ಮೆರೆಗೋಲಿಂದೆನ್ನುವಂತೆ ಕುಡುಗೋಲಿಂದೆತ್ತಿ, ಲೆವಿನ್‌ನಿಗೆ ತೋರಿಸಿ, ದೂರವೊಗೆದನು.

ಲೆವಿನ್‌ನಿಗಾಗಲಿ, ಅವನ ಹಿಂದಿದ್ದ ತರುಣನಿಗಾಗಲಿ ಆ ಮುದುಕನ ಚಲನ ಕೌಶಲ ಸಾಧ್ಯವಿರಲಿಲ್ಲ. ಶ್ರಮಸಾಧ್ಯವಾದ ಚಲನ ಪರಂಪರೆಯನ್ನು ಪುನರಾವರ್ತಿಸು ತ್ತಿದ್ದ ಆ ಇಬ್ಬರೂ ಕೆಲಸದ ಹುಚ್ಚಿನಲ್ಲಿ ಮುಳುಗಿದ್ದುದರಿಂದ ಅವರಿಗೆ ಮುದುಕನ ಆಟ ಪಾಟಗಳಾಗಲಿ, ಮುಂದೇನಿದೆಯೆಂಬುದನ್ನು ವೀಕ್ಷಿಸುವ ಪರಿವೆಯಾಗಲಿ ಸಾಧ್ಯವಾಗು ತ್ತಿರಲಿಲ್ಲ.

ಸಮಯದ ಚಲನೆಯೇ ಲೆವಿನ್‌ನ ಗಮನಕ್ಕೆ ಬರಲಿಲ್ಲ. ಎಷ್ಟು ಹೊತ್ತಿನಿಂದ ಕೊಯ್ಯುತ್ತಿದ್ದಿರಬಹುದೆಂದು ಯಾರಾದರೂ ಅವನನ್ನು ಕೇಳಿದ್ದರೆ,ಅರ್ಧಗಂಟೆಯಿಂದೆಂದ ವನು ಉತ್ತರಿಸುತ್ತಿದ್ದನು. ವಾಸ್ತವವಾಗಿ ಊಟದ ಹೊತ್ತು ಸನ್ನಿಹಿತವಾಗಿತ್ತು. ಹುಲ್ಲಿನ ಹರಿಗಳ ಮೇಲೆ ಅವರು ನಡೆಯುತ್ತಿದ್ದಾಗ, ಬೇರೆಬೇರೆ ಕಡೆಗಳಿಂದ ಬರುತ್ತಿದ್ದ ಹುಡುಗ ಹುಡುಗಿಯರ ಕಡೆಗೆ ಮುದುಕ ಲೆವಿನ್‌ನ ಗಮನವನ್ನು ಸೆಳೆದನು. ಉದ್ದನೆಯ ಹುಲ್ಲಿನ ನಡುವೆ ಬರುತ್ತಿದ್ದ ಹುಡುಗ ಹುಡುಗಿಯರು ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ. ಅವರು ರಸ್ತೆಯುದ್ದಕ್ಕೂ ಕೊಯ್ಲುಗಳ ಕಡೆಗೆ ಬರುತ್ತಿದ್ದರು; ರೊಟ್ಟಿಯ ಹಸುಬೆಗಳ ಮತ್ತು ಚಿಂದಿಗಳಿಂದ ಮುಚ್ಚಿದ್ದ ರೈಬೀರಿನ ಹೂಜಿಗಳ ಭಾರದಿಂದ ಅವರ ತೋಳುಗಳು ಮಗ್ಗುಲಲ್ಲಿ ನೇರವಾಗಿ ಜಗ್ಗುತ್ತಿದ್ದುವು.

'ಅಗೋ ನೋಡಿ, ಚಿಳ್ಳೆಗಳು ಬರುತ್ತಿವೆ' ಎಂದವನು ಹುಡುಗರ ಕಡೆಗೆ ಕೈ ತೋರಿಸುತ್ತ ನುಡಿದನು. ಅನಂತರ ಅವನು ಹುಬ್ಬುಗೈಯಾಗಿ, ಸೂರ್ಯನ ಕಡೆಗೆ ದಿಟ್ಟಿಸಿ ದನು. ಮತ್ತೆರಡು ಸಾಲುಗಳನ್ನು ಕೊಯ್ದು ಮುಗಿಸಿದ ತರುವಾಯ ಮುದುಕ ಕೆಲಸ ನಿಲ್ಲಿಸಿದನು.

'ಊಟದ ಹೊತ್ತಾಯಿತು, ದಣಿಗಳೆ' ಎಂದವನು ತುಸು ಬಿರುಸಾಗಿ ನುಡಿದನು. ನದಿಯ ದಂಡೆಯನ್ನು ತಲುಪಿದ ನಂತರ ಕೊಯ್ಲುಗಾರರು ಸಾಲುಗಳ ಮಗ್ಗುಲಲ್ಲಿಯೇ ತಮ್ಮ ಕೋಟುಗಳಿದ್ದ ತಾಣಕ್ಕೆ ಹಿಂದಿರುಗಿದರು, ಮಕ್ಕಳು ಊಟದ ಮೊಟ್ಟೆಗಳೊಡನೆ ಅವರಿಗಾಗಿ ಕಾದಿದ್ದರು. ಆಳುಗಳು ಗುಂಪು ಗುಂಪಾಗಿ ಬಂಡಿಯ ಕೆಳಗೆ, ನೀರು ಹಬ್ಬೆ ಗಿಡಗಳ ಕೆಳಗೆ ಕುಳಿತುಕೊಂಡರು; ನೆರಳನ್ನು ದಟ್ಟಗೊಳಿಸುವ ಸಲುವಾಗಿ ಗಿಡದ ರೆಂಬೆ ಗಳ ಮೇಲೆ ಹುಲ್ಲನ್ನೆಸೆದರು.

ಲೆವಿನ್ ಮರಗಳ ಕೆಳಗಿದ್ದ ಗುಂಪನ್ನು ಸೇರಿದನು; ಅವನು ಮನೆಗೆ ಹೋಗ ಲಿಚ್ಛಿಸಲಿಲ್ಲ.

ದಣಿಯೆದುರಿನ ಸಂಕೋಚವನ್ನು ರೈತರೆಂದೋ ಕೊಡವಿಬಿಟ್ಟಿದ್ದರು. ಅವರು ಎಡೆಯನ್ನಣಿಗೊಳಿಸಿದರು. ಕೆಲವರು ಕೈಕಾಲು ಬಾಯಿ ತೊಳೆದುಕೊಂಡರು; ಕಿರಿಯರು

ಹೊಳೆಯಲ್ಲಿ ಮಿಂದರು; ಇತರರು ವಿಶ್ರಾಂತಿಗನುಕೂಲವಾಗುವಂತೆ ಜಾಗವನ್ನು ಹೊಂದಿಸಿಕೊಂಡರು; ಮತ್ತೆ ಕೆಲವರು ಮೊಟ್ಟೆಗಳನ್ನು ಬಿಚ್ಚಿ, ರೈಬೀರಿನ ಹೂಜಿಗಳನ್ನು ನಿರ್ಬಿರಡೆಗೊಳಿಸಿದರು. ಮುದುಕ ತುಣುಕುರೊಟ್ಟಿಯನ್ನು ಪುಡಿಮಾಡಿ ಬಟ್ಟಲೊಳಗೆ ಹಾಕಿ, ಚಂಚದ ಹಿಡಿಯಿಂದ ಅದನ್ನು ನುರುಗಿ ಮತ್ತಷ್ಟು ರೊಟ್ಟಿಯ ಪುಡಿಯನ್ನು ಅದರ ಮೇಲೆ ಚೆಲ್ಲಿ, ಉಪ್ಪನ್ನು ಸೇರಿಸಿ, ಪೂರ್ವಕ್ಕೆ ತಿರುಗಿಕೊಂಡು, ಪ್ರಾರ್ಥನೆಯನ್ನು ಸಲ್ಲಿಸಿದನು.

'ಬನ್ನಿ ದಣಿಗಳೆ, ಈ ರೊಟ್ಟಿಪುಡಿಯನ್ನು ರುಚಿನೋಡಿ' ಎಂದವನು ಬಟ್ಟಲ ಮುಂದೆ ಮಂಡಿಯೂರಿಕೊಂಡು, ಲೆವಿನ್‌ನನ್ನು ಕರೆದನು.

ಆ ರೊಟ್ಟಿ ಪುಡಿ ಎಷ್ಟು ರುಚಿಯಾಗಿತ್ತೆಂದರೆ, ಮಧ್ಯಾಹ್ನದ ಊಟಕ್ಕೆ ಮನೆಗೆ ಹೋಗುವ ಆಲೋಚನೆಯನ್ನೇ ಲೆವಿನ್ ಮರೆತನು. ಅವನು ಮುದುಕನೊಂದಿಗೆ ಊಟ ಮುಗಿಸಿದನು; ಅವನ ಗೃಹಕೃತ್ಯದ ವಿಚಾರಗಳಲ್ಲಿ ಆಸಕ್ತಿವಹಿಸಿ, ಊಟದುದ್ದಕ್ಕೂ ಮಾತಾಡಿದನು; ಮುದುಕನಿಗೆ ಹಿಡಿಸಬಹುದಾದ ತನ್ನೆಲ್ಲ ವ್ಯವಹಾರಗಳನ್ನು ವಿವರಿಸಿದನು. ತನ್ನ ಮಲಸೋದರನಿಗಿಂತ ಮುದುಕ ತೀರ ಹತ್ತಿರವಾಗಿದ್ದಂತೆ ಅವನಿಗೆ ಕಂಡಿತು; ಅವನ ಬಗೆಗೆ ಅಂಕುರಿಸಿದ್ದ ಕೋಮಲ ಭಾವನೆಗಳು ತನಗರಿವಿಲ್ಲದಂತೆಯೇ ಅವನ ಮಂದಹಾಸದಲ್ಲಿ ಮೈದೋರಿದ್ದುವು. ಮುದುಕ ಮೇಲೆದ್ದು, ಪುನಃ ಪ್ರಾರ್ಥನೆಯನ್ನು ಸಲ್ಲಿಸಿ, ಮರದ ಕೆಳಗೆ ತೆಬ್ಬುಹುಲ್ಲಿನ ದಿಂಬಿನ ಮೇಲೆ ತಲೆಕೊಟ್ಟಾಗ, ಲೆವಿನ್ ಸಹ ಅವನನ್ನೇ ಅನುಕರಿಸಿದನು. ಬೆವರಿಡಿದ ತನ್ನ ಮುಖ ದೇಹಗಳನ್ನು ಸೊಳ್ಳೆ ನೊಣಗಳು ಕಾಡುತ್ತಿದ್ದರೂ, ಅವನು ಕೂಡಲೆ ಗಾಢ ನಿದ್ರೆಯಲ್ಲಿ ಮುಳುಗಿದನು; ಸೂರ್ಯ ತಾನು ಮಲಗಿದ್ದ ಮರದ ಮಗ್ಗುಲಿಗೆ ಹೊರಳಿ, ತನ್ನ ಮುಖದ ಮೇಲೆ ಬಿದ್ದಾಗಲೇ ಅವನು ಎಚ್ಚರಗೊಂಡದ್ದು. ಮುದುಕ ಸ್ವಲ್ಪ ಹೊತ್ತಿಗೆ ಮುಂಚೆಯೇ ಮೇಲೆದ್ದು, ಹುಡುಗರ ಕುಡುಗತ್ತಿಗಳನ್ನು ಅಣಿಗೊಳಿಸಿಕೊಡುತ್ತಿದ್ದನು.

ಲೆವಿನ್ ಸುತ್ತಲೂ ಕಣ್ಣು ಹಾಯಿಸಿದನು; ಆ ತಾಣವನ್ನವನು ಗುರುತಿಸಲಾಗಲಿಲ್ಲ; ಅದು ಅವನಿಗೆ ತೀರ ಹೊಸದಾಗಿ ಕಂಡಿತು. ಆ ಸುವಿಸ್ತಾರವಾದ ಹುಲ್ಲೊಡ್ಡಿನ ಬಹುಭಾಗದ ಕೊಯ್ಲು ಮುಗಿದಿತ್ತು. ಸಾಯಂಸೂರ್ಯನ ಓರೆಗಿರಣಗಳ ಅಪ್ಪುಗೆಯಲ್ಲಿ, ಒಳ್ಗಂಪನ್ನೆರಚುತ್ತಿದ್ದ ಹಸುರು ಹುಲ್ಲಿನ ಸಾಲುಗಳಿಂದಲಂಕೃತವಾದ ಆ ಕ್ಷೇತ್ರ ಅಪೂರ್ವವೂ ವಿನೂತನವೂ ಆದ ಕಾಂತಿಯಿಂದ ದೇದೀಪ್ಯಮಾನವಾಗಿತ್ತು; ಪ್ರತಿಯೊಂದು ವಸ್ತುವೂ ಅಭೂತಪೂರ್ವ ಭಾವ ಭಂಗಿಯಿಂದ ರಾರಾಜಿಸುತ್ತಿದ್ದಂತೆ ತೋರುತ್ತಿತ್ತು. ನದೀತಟದ ಮರಪೊದೆಗಳು, ಹಿಂದೆ ದೃಷ್ಟಿಗಗೋಚರವಾಗಿದ್ದು, ಈಗ ಬಾಗುಮುರಿಗಳಲ್ಲಿ ಉಕ್ಕಿನಂತೆ ತೊಳಗುತ್ತಿದ್ದ ನದಿ, ವಿಶ್ರಾಂತಿಯನ್ನು ಮುಗಿಸಿ ಅಡ್ಡಾಡುತ್ತಿದ್ದ ರೈತರು, ಕತ್ತರಿಸಿದ ಹುಲ್ಲೊಡ್ಡಿನಂಚಿನಲ್ಲಿದ್ದ ಹುಲ್ಲಿನ ಕಡಿದುಗೋಡೆ, ಹಾಗೂ ಕೊಯ್ಲು ಮುಗಿದ ಜಾಗದಲ್ಲಿ ಹಾರಾಡುತ್ತಿದ್ದ ಡೇಗೆಗಳು—ಈ ಒಂದೊಂದು ನೋಟವೂ ಕಣ್ಣಿಗೆ ಹಬ್ಬವಾಗಿದ್ದುವು. ನಿದ್ದೆ ತಿಳಿದೆದ್ದನಂತರ, ಎಷ್ಟು ಕೊಯ್ಲು ಮುಗಿದಿದೆ, ಆ ದಿನ ಇನ್ನೂ ಎಷ್ಟಾಗಬೇಕಾಗಿದೆ ಎಂದು ಲೆವಿನ್ ಲೆಕ್ಕ ಹಾಕತೊಡಗಿದನು.

(ಮುಂದುವರಿಯುವುದು)

ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆಗಳು

ನೀವು ಓದಲೇಬೇಕಾದ ಪುಸ್ತಕಗಳು....

ಜನಪ್ರಿಯ ವಾಲ್ಮೀಕಿ ರಾಮಾಯಣ

ನಾಗರಿಕತೆಯ ಇತಿಹಾಸ

ಕಥಾಸಂಕಲನ

ಕನ್ನಡ ಪ್ರತಿಭೆ

ಕನ್ನಡ ಪರಂಪರೆ

ನನ್ನೂರು

ನಳಚರಿತ್ರೆ ಸಂಗ್ರಹ

ವಿದ್ಯಾಪೀಠಗಳು

ನಕ್ಷತ್ರ ವೀಕ್ಷಣೆ

ಕರ್ನಾಟಕ ಹವಾಸೂಚಿ

ಪ್ರಥಮ ಚಿಕಿತ್ಸೆ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮುದ್ರಣಾಲಯ, ಮೈಸೂರು.